AR
312

MADRAS UNIVERSITY KANNADA SERIES NO. 6

K
392

ABHIDHĀNARATNAMĀLĀ

OF HALĀYUDHA

WITH THE

KANNADA TĪKE OF NĀGAVARMA

EDITED BY

A. VENKATA RAO, B. A., L. T.

Late Senior Lecturer in Kannada

AND

H. SESHA AYYANGAR,

Junior Lecturer in Kannada.

K.392

UNIVERSITY OF MADRAS

1940

PRICE RS. 2/-

No. 392

GOVERNMENT ORIENTAL MSS. LIBRARY
20 OCT 1943
TRIPLICANE P.O. MADRAS

ಮದ್ರಾಸ್ ಯೂನಿವರ್ಸಿಟಿ ಕರ್ಣಾಟಕ ಗ್ರಂಥಮಾಲಾ ಸಂಖ್ಯೆ 6

ನಾಗವರ್ಮ ವಿರಚಿತಮಪ್ಪ

ಅಭಿಧಾನ ರತ್ನಮಾಲಾ ಕರ್ಣಾಟಕ ಟೀಕೆ

K.392

–ಸಂಪಾದಕರು–

ಎ. ವೆಂಕಟರಾವ್

ಹೆಚ್. ಶೇಷಯ್ಯಂಗಾರ್,

Printed at the M. T. A. Sharada Press, Car Street, Mangalore, S, K.

K. 392

PREFACE

The Abhidhānaratnamālā of Bhatta Halāyudha, a Sanskrit Lexicon of importance, was commented upon in Kannada most probably by Nāgavarman long ago. The Kannada commentary remained a sealed book though a copy of it was available to Dr. Kittel when he prepared his Kannada Dictionary. It is not known what became of the copy used by Dr. Kittel and consequently scholars knew very little of the book till a copy of it was discovered in the Jaina Siddhanta Bhavana Library, Arrah, North India. The importance of this commentary is great. In spite of the fact that a second copy of this work could not be procured, the work was undertaken for publication in the Kannada Series of the University of Madras. That a second copy was not available was certainly a handicap, but the editors feel that they have presented as reliable a text as is possible under the circumstances. The chief consideration that prompted this undertaking was that quite a large number of HALAGANNADA equivalents of Sanskrit terms are found in the commentary.

The present edition contains the Sanskrit text of the Abhidhānaratnamālā, in addition to the Kannada commentary. The text of the Abhidhānaratnamālā given here contains certain readings which are different from those given by Aufrecht; the reason for such a change is obvious; the readings of the text adopted by the Kannada commentator had to be kept in view, and hence the differences. Corrections are indicated within ordinary brackets and suggestions when there were gaps are shown within * square brackets. In the foot-notes are indicated the corruptions and defects found in the manuscript relating to both the text and the commentary with remarks wherever necessary. The commentary on Stanzas 38-51 (both inclusive) in the second kāṇḍa and the last 56 stanzas in the Nānārtha Kāṇḍa are found missing in the manuscript. The last fifty-six verses have been printed without the commentary and the verses themselves were printed, on the basis of the reading found in one of the manuscripts of the work, deposited in the Government Oriental Manuscripts Library, Madras. Two indexes have been furnished--one of DEŚYA and SAMASAṀSKṚTA words found in the commentary, and another of SAṀSKṚTA

*The meanings of certain words, from the Nighantu of Mangaraja (16th Century) have been inserted in a few places after page 112 by Sri. H. Chennakesava Aiyangar who was for some time head of the Kannada Department.

words. A short history of lexicographical literature in Sanskrit from the earliest period down to the times of Halayudha and a critical account of the present work have been furnished in the detailed Kannada Introduction.

It is deeply to be regretted that one of the Editors, Sri. A. Venkata Rao, was snatched away prematurely by the cruel hand of death, even before the work could be printed and published.

To Sri. K. Bhujabali Sastri, Librarian of the Central Jaina Siddhanta Bhavana Library, Arrah, North India, I tender my heartfelt thanks for placing the manuscript of the Bhavana in my hands for a long time. Sri Mahamahopadhyaya S. Kuppuswami Sastriyar, former Curator of the Government Oriental Manuscripts Library, Madras, was kind enough to lend me the manuscripts that I wanted and I owe him a deep debt of gratitude.

Madras,
31--3--1940.

H. Sesha Ayyangar,
Junior Lecturer in Kannada.

ಮುನ್ನುಡಿ

ಈ ಗ್ರಂಥವು ಸಂಸ್ಕೃತದಲ್ಲಿ ಭಟ್ಟಹಲಾಯುಧನಿಂದ ವಿರಚಿತವಾದ "ಅಭಿಧಾನ ರತ್ನಮಾಲಾ" ಎಂಬ ನಿಘಂಟುವಿನ ಕರ್ಣಾಟಕ ಟೀಕೆಯು. ಇದು ಉತ್ತರ ಇಂಡಿಯದ "ಆರಾ" ಎಂಬ ಸ್ಥಳದಲ್ಲಿ ಸ್ಥಾಪಿತವಾಗಿರುವ ಜೈನಪುಸ್ತಕಭಂಡಾರದಲ್ಲಿ ಶೇಖರಿಸಲ್ಪಟ್ಟಿರುವ ಒಂದು ತಾಳಪತ್ರಪ್ರತಿಯ ಆಧಾರದಿಂದ ಮುದ್ರಿತವಾಗಿರುವುದು. ಒಂದೇ ಒಂದು

ಮುದ್ರಣ ವಿಚಾರ

ಹಸ್ತಲಿಖಿತಪ್ರತಿಯ ಆಧಾರದಿಂದ ಯಾವುದೊಂದು ಪ್ರಾಚೀನ ಗ್ರಂಥವಾದರೂ ಸಮರ್ಪಕವಾಗಿಯೂ, ಸಂಪೂರ್ಣವಾಗಿಯೂ ಮುದ್ರಿತವಾಗಲಾರದೆಂಬುದು ಪ್ರತಿಯೊಬ್ಬ ಸಂಪಾದಕರಿಗೂ, ಪಂಡಿತರಿಗೂ, ವಾಚಕರಿಗೂ ತಿಳಿಯದ ವಿಷಯವಲ್ಲ. ಹೀಗಿದ್ದರೂ ಹಲವು ಹಳಗನ್ನಡದ ಪದಗಳಿಗೆ ಸಂಸ್ಕೃತ ಪರ್ಯಾಯಪದಗಳ ಮೂಲಕ ನಿಷ್ಕೃಷ್ಟಾರ್ಥವನ್ನು ತಿಳಿಸಿಕೊಡುವ ಈ ಗ್ರಂಥದಿಂದ ಕನ್ನಡಭಾಷೆಗೆ ಸ್ವಲ್ಪವಾದರೂ ಪ್ರಯೋಜನವಾಗುತ್ತಿರುವುದರಿಂದ "ಯದೃಚ್ಛಾಲಾಭಸಂತುಷ್ಟಃ" ಎಂಬ ನ್ಯಾಯವನ್ನನುಸರಿಸಿ ಈ ಗ್ರಂಥವನ್ನು ಮುದ್ರಿಸಿದೆ. ಇದರಿಂದ ಲಭ್ಯವಾಗುವ ಯತ್ಕಿಂಚಿತ್ಪ್ರಯೋಜನಲಾಭದಿಂದಲಾದರೂ ಕನ್ನಡಿಗರು ಸಂತುಷ್ಟಮನಸ್ಕರಾಗಿ ಮುದ್ರಣದ ಶ್ರಮವನ್ನು ಸಾರ್ಥಕಗೊಳಿಸುವರೆಂದು ನಂಬಿರುವೆನು.

ಈಗ ಮುದ್ರಿತವಾಗಿರುವ ಈ ಗ್ರಂಥದಲ್ಲಿ ಮೂಲ ಮತ್ತು ಅದರ ಟೀಕೆ ಎಂದು ಎರಡು ಭಾಗಗಳುಂಟು. ಮೂಲಗ್ರಂಥವು ಸಂಸ್ಕೃತ ಪದಗಳ ಕೋಶವು. ಇದು [1]ಛಂದೋರೂಪದಲ್ಲಿರುವುದು. ಟೀಕೆಯು ಈ ಸಂಸ್ಕೃತ ಪದಗಳಿಗೆ ಪದವಿಭಾಗ ಪ್ರದರ್ಶನಪೂರ್ವಕವಾಗಿ ಕನ್ನಡ ಭಾಷೆಯಲ್ಲಿ ಬರೆದಿರುವ ಅರ್ಥವು. ಇದು ಗದ್ಯರೂಪದಲ್ಲಿರುವುದು. ಸಂಸ್ಕೃತ ಭಾಷೆಗೆ ಸೇರಿದ ಮೂಲಗ್ರಂಥವನ್ನು ಮುದ್ರಿಸುವ ಕಾರ್ಯವು ಈ ಶಾಖೆಯ ಕಾರ್ಯವಿಧಾನದಲ್ಲಿ ಸಾಕ್ಷಾತ್ತಾಗಿ ಸಂಬಂಧವನ್ನು ಪಡೆಯದಿದ್ದರೂ ವ್ಯಾಖ್ಯಾಗ್ರಂಥದ ಸಮಗ್ರತೆಗಾಗಿ ಆವಶ್ಯಕವಾಗಿರುವ ಪರಂಪರಾಸಂಬಂಧದಿಂದ[2] ಇಲ್ಲಿ ಅದನ್ನು ಮುದ್ರಿಸಿದೆ. ಇದನ್ನು ಮೂಲದಿಂದ ಪ್ರತ್ಯೇಕಿಸುವುದಕ್ಕಾಗಿ ಸ್ಥೂಲಾಕ್ಷರಗಳಿಂದ ಮುದ್ರಿಸಿ ರೇಖೆಯ ಕೆಳಗಡೆ ಟೀಕೆಯನ್ನು ಮುದ್ರಿಸಿದೆ; ಇದರ ಅಮುಖ್ಯತೆಯನ್ನುದ್ದೇಶಿಸಿಯೇ [3]ಹಸ್ತಲಿಖಿತ ಪ್ರತಿಗಳ ಆಧಾರದಿಂದ ಮೂಲಗ್ರಂಥವನ್ನು ಶೋಧಿಸುವ ಕಾರ್ಯವನ್ನು ಕೈಕೊಳ್ಳದೆ ಟೀಕಾಕಾರನು ಸ್ವೀಕರಿಸಿರುವ ಪಾಠವನ್ನು ಮಾತ್ರ ಮುದ್ರಿಸಿ ಅಲ್ಲಲ್ಲಿ ಮೂಲದಲ್ಲಿರುವ ಅಸಾಧು ಪಾಠಗಳನ್ನು ಮಾತ್ರ ಆದಷ್ಟು ಮಟ್ಟಿಗೆ

(1) ಈ ಮೂಲಗ್ರಂಥದಲ್ಲಿ ಅನುಷ್ಟುಪ್ ಶ್ಲೋಕವೇ ವಿಶೇಷವಾಗಿದ್ದರೂ, ಅಲ್ಲಲ್ಲಿ ಆರ್ಯೆ, ಉಪಜಾತಿ, ಶಾರ್ದೂಲ ವಿಕ್ರೀಡಿತ ಮೊದಲಾದ ಮಾತ್ರಾಜಾತಿಗಳೂ, ಸಮವೃತ್ತಗಳೂ ಇರುವವು.

(2) ಈ ಸಂಸ್ಕೃತನಿಘಂಟುವು ಆಪರ್ಟ್ ಎಂಬವರಿಂದ ದೇವನಾಗರಿಯಕ್ಷರದಲ್ಲಿ 1928ರಲ್ಲಿ ಲಾಹೋರಿನಲ್ಲಿ ಮುದ್ರಿತವಾಗಿದೆ. ಈಗ ಪುಸ್ತಕವು ದೊರಕಲು ದುರ್ಲಭವಾಗಿರುವುದು.

(3) ಮದರಾಸು ರಾಜಕೀಯ ಪುಸ್ತಕಭಾಂಡಾಗಾರದಲ್ಲಿ ಮೂರು ಹಸ್ತಲಿಖಿತಪ್ರತಿಗಳಿರುವವು. ಇನ್ನೂ ಮೂರು ನಾಲ್ಕು ಹಸ್ತಲಿಖಿತ ಪ್ರತಿಗಳು ಬೇರೆ ಬೇರೆ ಲೈಬ್ರೆರಿಗಳಲ್ಲಿಯೂ ದೊರಕುವುವು.

ಶುದ್ಧಮಾಡಿ[1] ದೇವನಾಗರಿ ಲಿಪಿಯಲ್ಲಿ ಡಾಕ್ಟರ್ ಆಪರ್ಟ (Dr. Aufrecht) ಸಾಹೇಬರು ಮುದ್ರಿಸಿರುವ ಪುಸ್ತಕಪಾಠವನ್ನು ಆವಶ್ಯಕವಾದೆಡೆಗಳಲ್ಲಿ ಕೊಟ್ಟಿದೆ; ಒಂದೆರಡು ಅಕ್ಷರಗಳ ಮಾರ್ಪಾಡನ್ನು ದುಂಡುಕಂಸಗಳಲ್ಲಿಯೂ, ಅಧಿಕ ಪಾಠಗಳು, ಟೀಕೆಯಲ್ಲಿ ಗಳಿತವಾಗಿರಬಹುದೆಂದು ತೋರಿಬಂದ ಭಾಗಗಳು ಇವನ್ನು ಚೌಕಕಂಸಗಳಲ್ಲಿಯೂ ಕೊಟ್ಟಿದೆ. ಈ ಗ್ರಂಥದಲ್ಲಿ ನೂರಹನ್ನೆರಡು ಪುಟಗಳು ಮುದ್ರಿತವಾದ ಬಳಿಕ ಎರಡುನೂರು ಕಡೆಗಳಲ್ಲಿ ಮಾತ್ರ ಮಂಗರಾಜ ನಿಘಂಟುವಿನಲ್ಲಿರುವ ಟೀಕಾಪದಗಳು ತತ್ಕಾಲದಲ್ಲಿ ಈ ಇಲಾಖೆಗೆ ಹೊಸದಾಗಿ ಬಂದ ಸೀನಿಯರ್ ಲೆಕ್ಚರರ ಸಲಹೆಯಿಂದ ಚೌಕಕಂಸಗಳಲ್ಲಿ ಸೇರಿಕೊಂಡಿರುವುವು. ಮೂಲಪಾಠಗಳಲ್ಲಿಯೂ ಟೀಕೆಯ ಪಾಠಗಳಲ್ಲಿಯೂ ತೋರಿಬಂದ ನ್ಯೂನಾತಿರೇಕಗಳನ್ನು ರೇಖೆಯ ಕೆಳಗಡೆಯಲ್ಲಿ ಟಿಪ್ಪಣಿಗಳ ಮೂಲಕ ಸೂಚಿಸಿದೆ. ಟೀಕೆಯಲ್ಲಿ ಭೂಮಿಕಾಂಡದ ೩ನೆಯ ಪದ್ಯದ ಮೊದಲು ೧೩ ಪದ್ಯಗಳೂ, ಅವುಗಳ ಟೀಕೆಯೂ ಗಳಿತವಾಗಿರುವುವು. ಹಾಗೆಯೇ ಅನೇಕಾರ್ಥ ಕಾಂಡದಲ್ಲಿಯೂ ಕೊನೆಯ ೫೬ ಪದ್ಯಗಳು ಗಳಿತವಾಗಿರುವುವು. ಇವಲ್ಲದೆ ಬೇರೆ ಗ್ರಂಥಪಾತವಿರುವಂತೆ ತಿಳಿದುಬರುವುದಿಲ್ಲ.

ಈ ಟೀಕಾಗ್ರಂಥದ ಮೂಲದಲ್ಲಿ ಹಲವು ಅಶುದ್ಧ ಪಾಠಗಳು ಅಲ್ಲಲ್ಲಿ ಕಂಡುಬಂದರೂ ಅವನ್ನು ರೇಖೆಯ ಕೆಳಗೆ ಕೊಟ್ಟಿದೆ. ಕೆಲವು ವೇಳೆಗಳಲ್ಲಿ ಇಂತಹ ಅಸಾಧು ಪಾಠಗಳೂ ಸಾಧು ಪಾಠಗಳ ನಿರ್ಣಯಕ್ಕೆ ತುಂಬಾ ಒತ್ತಾಸೆಮಾಡುವುದು ಪಂಡಿತರಿಗೆಲ್ಲಾ ತಿಳಿಯದ ವಿಷಯವಲ್ಲ. ಮುದ್ರಿತವಾದ (ಆಪರ್ಟ್ ಮುದ್ರಿಸಿರುವ ದೇವನಾಗರೀ[2]ಲಿಪಿಯ) ಪುಸ್ತಕದಲ್ಲಿ ಅಲ್ಲಲ್ಲಿ ಕಂಡುಬರುವ ಅಶುದ್ಧ ಪಾಠಗಳಿಗೆ ಪ್ರತಿಯಾಗಿ ಈ ಟೀಕಾಗ್ರಂಥದ ಮೂಲಪ್ರತಿಯಲ್ಲಿ ಶುದ್ಧಪಾಠಗಳು ದೊರಕುವುವು. ಒಂದನ್ನು ಉದಾಹರಣಕ್ಕಾಗಿ ಇಲ್ಲಿ ಕೊಟ್ಟಿದೆ–

ತ್ವಚಿಸಾರಶ್ಚ ಯೋ ವಂಶೋ ವೇಣುತ್ವಕ್ಸಾರಮುಸ್ಕರಾಃ ॥
ಸ್ವನನ್ತಿ ಯೇಽನಿಲೋದ್ಧೂತಾಃ ವೇಣವಸ್ತೇ ತು ಕೀಚಕಾಃ ॥ ೫೧ ॥[3] (ಭೂಮಿಕಾಂಡ ೨)

ಈ ಶ್ಲೋಕದ ಪೂರ್ವಾರ್ಧದಲ್ಲಿ ತ್ವಚಿಸಾರ ಮೊದಲಾದ ಬಿದಿರಿನ ಪರ್ಯಾಯ ಶಬ್ದಗಳನ್ನು ಹೇಳಿ ಉತ್ತರಾರ್ಧದಲ್ಲಿ ಗಾಳಿಯಿಂದ ಶಬ್ದಮಾಡುತ್ತಿರುವ "ಕೀಚಕ" ಎಂಬ ಬಿದಿರಿನ ವಿಶೇಷ ಲಕ್ಷಣವಾಚಕ ಶಬ್ದದ ಅರ್ಥವನ್ನು ("ಯೇತು:–ಯಾವ ಬಿದಿರುಗಳಾದರೋ ಅನಿಲೋದ್ಧತಾ:–ಗಾಳಿಯಿಂದ ಹೊಡೆಯಲ್ಪಟ್ಟವುಗಳಾಗಿ, ಸ್ವನಂತಿ:–ಶಬ್ದಮಾಡುತ್ತಿರುವುವೋ, ತೇ:–ಅವು, ಕೀಚಕಾ:–ಕೀಚಕಗಳೆಂಬ ಹೆಸರನ್ನು ಪಡೆದಿರುವುವು") ಎಂದು ಸಂಬಂಧಾರ್ಥಕ ಯತ್ತಚ್ಛಬ್ದಗಳನ್ನುಳ್ಳ ವಾಕ್ಯದಿಂದ ವಿವರಿಸಿರುವನು. ಪೂರ್ವಾರ್ಧದಲ್ಲಿಯಾದರೋ ಕೇವಲ ಬಿದಿರಿನ ಪರ್ಯಾಯಪದಗಳನ್ನು ಮಾತ್ರವೇ ಹೇಳಿರುವುದರಿಂದ ಯತ್ತಚ್ಛಬ್ದಗಳ

---

(1) ಅಮರಕೋಶ ಮೊದಲಾದ ಸಂಸ್ಕೃತ ಕೋಶಗಳು, ಕನ್ನಡದಲ್ಲಿ ಮುದ್ರಿತವಾಗಿರುವ ಅಭಿಧಾನ ವಸ್ತುಕೋಶ, ಮುದ್ರಿತವಾಗದಿರುವ ಮಂಗರಾಜ ನಿಘಂಟು, ಪಂಪ, ಪೊನ್ನ ಮೊದಲಾದ ಕರ್ಣಾಟಕ ಕವಿಪುಂಗವರ ಪ್ರಯೋಗಗಳು, ಶಬ್ದಸಾರ ಮೊದಲಾದ ಕನ್ನಡ ಭಾಷೆಯ ನಿಘಂಟುಗಳು–ಇವುಗಳ ಸಹಾಯವನ್ನೂ ಅಲ್ಲಲ್ಲಿ ಉಪಯೋಗಿಸಿಕೊಂಡಿದೆ.

(2) ಮುನ್ನುಡಿಯಲ್ಲಿ ಈ ಗ್ರಂಥವು A. B. C. D. E. F. R. ಎಂಬ (ಇದು 1363ರಲ್ಲಿ ಬರೆಯಲ್ಪಟ್ಟುದು) ಏಳು ಹಸ್ತಲಿಖಿತ ಪ್ರತಿಗಳ ಆಧಾರದಿಂದ ಮುದ್ರಿತವಾಗಿರುವುದೆಂದು ಹೇಳಿದೆ.

(3) ಆಪರ್ಟ್ ಮುದ್ರಣದ ಪುಸ್ತಕದಲ್ಲಿ ಇಲ್ಲಿಯ ಸಂಖ್ಯೆ ೪೯ ಇದೆ.

ಆವಶ್ಯಕತೆಯಿಲ್ಲ. ಆದರೆ ಈ ಗ್ರಂಥಸಂಪಾದಕರು ಉತ್ತರಾರ್ಧದಲ್ಲಿರುವ ವಾಕ್ಯದ ಭ್ರಾಂತಿಯಿಂದಲೋ, ಅಥವಾ ಮತ್ತಾವ ಕಾರಣದಿಂದಲೋ "ತ್ವಚಿಸಾರಶ್ಚ ಯೋ ವಂಶಃ . . . ." ಎಂದು ಅಲ್ಲಿಯ ಅಕ್ಷರವೊಂದನ್ನು ಯಚ್ಛಬ್ದವನ್ನಾಗಿ ಮಾರ್ಪಡಿಸಿ ಮುದ್ರಿಸಿರುವರು, ಇದು ಮುದ್ರಣದಲ್ಲಿ ಒದಗಿದ ಪ್ರಾಮಾದಿಕ ದೋಷವಿರಬಹುದು (ಎಂದರೆ—ಚಕಾರದ ಮುಂದೆ ಯೋಕಾರದ ವರೆಗೆ ಸ್ಥಳವನ್ನು ಬಿಟ್ಟು ಭಿನ್ನಪದಗಳಾಗಿ ಮುದ್ರಿಸಿರುವುದೂ, ಪೋ ಎಂಬಕ್ಷರದಲ್ಲಿ ತತ್ಸಜಾತೀಯಾಕ್ಷರವಾದ (ಯೋ) ಭ್ರಾಂತಿಯೂ ಪ್ರಾಮಾದಿಕವು ಎಂದು ಹೇಳುವುದಾದರೆ—ಈ ವಿಷಯವನ್ನು ಶುದ್ಧಿಪತ್ರದಲ್ಲಿ ಕಾಣಿಸಿರಬೇಕು. ಅದೂ ಪ್ರಾಮಾದಿಕವಾದರೆ ಈ ಪದವು ಪರಿಶಿಷ್ಟದಲ್ಲಿ ಇಂಗ್ಲೀಷ್ ಅರ್ಥವನ್ನು ಕೊಟ್ಟಿರುವ ಪದಗಳ ಅನುಕ್ರಮಣಿಕೆಯಲ್ಲಾದರೂ ಸೇರಿರಬೇಕು. ಇವೆರಡೂ ಇಲ್ಲವಾದುದರಿಂದ ಈ ಮುದ್ರಿತ ಪಾಠವು ಸಂಪಾದಕರ ಸ್ವಾಭಿಮತವಾದ ಪಾಠವೆಂದೇ ತಿಳಿದುಬರುವುದು. ಈ ಪಾಠದಲ್ಲಿ ಯೋ ವಂಶ:–ಯಾವ ಬಿದಿರು, ತ್ವಚಿಸಾರ:–ತ್ವಚಿಸಾರವೆಂದು ಹೇಳಿಸಿಕೊಳ್ಳುವುದೋ (ಸ:–ಅದು) ವೇಣುತ್ವಕ್ಸಾರ ಮುಸ್ಕರಾಃ" ಎಂದೂ ಹೇಳಿಸಿಕೊಳ್ಳುವುದು. ಎಂದು ಪರ್ಯಾಪದಗಳ ಅರ್ಥವನ್ನು ನಿರೂಪಿಸುವಾಗಲೂ ಗಡುಭೂತವೂ, ಅಸಮಂಜಸವೂ ಆದ ಯತ್ತಚ್ಛಬ್ದಗಳಿಂದ ಅನ್ವಯಿಸುವ ವಾಕ್ಯವನ್ನು ಸ್ವೀಕರಿಸಬೇಕಾಗುವುದಲ್ಲದೆ, ಸಾಧುಪಾಠದಿಂದ ಲಭ್ಯವಾಗುವ ಉಪಯುಕ್ತವಾಗಿರುವ ಪರ್ಯಾಯಪದವೊಂದರ ಲಾಭವೂ ಇಲ್ಲದೇಹೋಗುವುದು. ನಾವು ಮುದ್ರಿಸಿರುವ ಟೀಕೆಗೆ ಮೂಲಭೂತವಾದ ಪ್ರತಿಯಲ್ಲಿರುವ "ತ್ವಚಿಸಾರಶ್ಚಪೋ ವಂಶಃ ವೇಣುತ್ವಕ್ಸಾರಮುಸ್ಕರಾಃ" ಎಂಬ ಪಾಠದಿಂದ ಈ ದೋಷವು ದೂರವಾಗುವುದಲ್ಲದೆ "ಚಪಃ" ಎಂಬ ಬಿದಿರಿನ ಪರ್ಯಾಯಶಬ್ದವೊಂದೂ ದೊರಕಿದಂತಾಗುವುದು. ಅಮರವ್ಯಾಖ್ಯೆಯಲ್ಲಿ "ಚಾಪ" ಶಬ್ದದ ವ್ಯುತ್ಪತ್ತಿಯನ್ನು ಹೇಳುವಾಗ "ಚಪಸ್ಯ ವಿಕಾರಃ, ಚಾಪಃ, ಚಪೋ ವೇಣುವಿಶೇಷಃ" ಎಂದು ವ್ಯುತ್ಪತ್ತಿ ವಿವರಣಗಳನ್ನು ಬರೆದಿರುವುದರಿಂದ ಚಪ ಶಬ್ದವು ಒಂದು ಬಗೆಯ ಬಿದಿರಿನ ಹೆಸರೆಂದೇ ಸ್ಪಷ್ಟವಾಗಿ ಕಂಡುಬರುವ ಕಾರಣ ಚಪಃ ಎಂಬ ಪಾಠವೇ ಪ್ರಕೃತದಲ್ಲಿ ಉಚಿತಪಾಠವೆಂದು ದೃಢಪಡುವುದು. ಇಂತಹ ಕೆಲಕೆಲವು ಪ್ರಾಮಾದಿಕದೋಷಗಳು ಈ ಪ್ರತಿಯಲ್ಲಿ ಕಂಡುಬರದೆ ಸಾಧುಪಾಠಗಳು ಈ ಮೂಲಗ್ರಂಥದ ಮುದ್ರಣದಿಂದ ದೊರಕಬಹುದಾದ ಮತ್ತೊಂದು ವಿಶೇಷ ಪ್ರಯೋಜನವಾಗಿರುವುದು.

ಈಗ ಮುದ್ರಿತವಾಗಿರುವ ಗ್ರಂಥದ ಹಸ್ತಲಿಖಿತಪ್ರತಿಯಲ್ಲಿ ಪುಣ್ಯವಶದಿಂದ ಆದಿಭಾಗವು ದೊರಕಿದ್ದರೂ ಅಂತ್ಯದಲ್ಲಿ ಸ್ವಲ್ಪಭಾಗವು ಅಂದರೆ 56 ಪದ್ಯಗಳೂ ಅದರ ಟೀಕೆಯೂ ದೊರಕದಿರುವುದು ಕನ್ನಡಿಗರ ದೌರ್ಭಾಗ್ಯವೆಂದೇ ಹೇಳಬಹುದು. ಹೀಗೆ ದೊರಕದಿರುವ ಮೂಲಭಾಗವನ್ನು ಮಾತ್ರ ಗ್ರಂಥಪೂರಣಕ್ಕಾಗಿ ಮದ್ರಾಸ್ ಸರಕಾರದ ರಾಜಕೀಯ ಪ್ರಾಚೀನ ಪುಸ್ತಕ ಭಂಡಾಗಾರದಲ್ಲಿ ದೊರಕಿದ (ನಂ–04) ಕಾಗದದ ಪ್ರತಿಯ ಆಧಾರದಿಂದ ಬರೆದು ಸೇರಿಸಿ ಮುದ್ರಿಸಿದೆ. ಈ ಮೂಲಪ್ರತಿಯಲ್ಲೂ, ಟೀಕೆಯಲ್ಲೂ ಅಲ್ಪಸ್ವಲ್ಪ ಗ್ರಂಥಪಾತವೂ, ಲೇಖಕರ ಹಸ್ತಸ್ಖಲನಮೊದಲಾದ ಪ್ರಾಮಾದಿಕದೋಷಜನಿತಗಳಾದ ಅಸಾಧುಪಾಠಗಳೂ ಅಲ್ಲಲ್ಲಿ ಕಂಡುಬರುವುವು. ಇವೆಲ್ಲವನ್ನೂ ಯಥಾಮತಿ, ಯಥಾಶಕ್ತಿ, ಯಥಾಲಬ್ಧಿ ಸರಿಪಡಿಸಿದೆ. ಅಧ್ಯೇತೃಗಳ ಸೌಕರ್ಯಕ್ಕಾಗಿ ಗ್ರಂಥದ ಕೊನೆಯಲ್ಲಿ ಟೀಕೆಯಲ್ಲಿ ಉಪಲಬ್ಧವಾಗುವ ದೇಶ್ಯ ಮತ್ತು ಸಮಸಂಸ್ಕೃತಪದಗಳ ಅಕಾರಾದ್ಯನುಕ್ರಮಣಿಕೆಯನ್ನೂ, ಸಂಸ್ಕೃತ ಶಬ್ದಗಳ ಮತ್ತೊಂದು ಅಕಾರಾದ್ಯನುಕ್ರಮಣಿಕೆಯನ್ನೂ ಬೇರೆ ಬೇರೆಯಾಗಿ ತಯಾರಿಸಿ ಎರಡು ಪರಿಶಿಷ್ಟ

GOVERNMENT ORIENTAL MSS LIBRARY
20 OCT 1943

ಗಳಾಗಿ ಕೊಟ್ಟಿದೆ. ಮುನ್ನುಡಿಯಲ್ಲಿ ಈ ಗ್ರಂಥವಿಮರ್ಶೆಯೊಡನೆ ಸಂಸ್ಕೃತ ಭಾಷೆಯ ಕೋಶಗಳ ಮತ್ತು ಕೋಶಕಾರರ ವಿಷಯವನ್ನು ಸಂಗ್ರಹವಾಗಿ ತಿಳಿಸುವ "ಸಂಸ್ಕೃತ ಕೋಶಚರಿತ"ವೊಂದನ್ನೂ ಸಂಗ್ರಹಿಸಿ ಸೇರಿಸಿದೆ.

ಈ ಗ್ರಂಥದ ಮುದ್ರಣದ ಪ್ರತಿಯನ್ನು ಸಿದ್ಧಮಾಡಲು ಭಾಗಿಗಳಾಗಿದ್ದ ಈ ಶಾಖೆಯ ಪ್ರಧಾನೋಪನ್ಯಾಸಕರಾದ (ಸೀನಿಯರ್ ಲೆಕ್ಚರರ್) ಶ್ರೀಮಾನ್ ಎ. ವೆಂಕಟರಾಯರವರು ಮುದ್ರಣದ ಆರಂಭಕ್ಕೆ ಮೊದಲೇ ಅಕಸ್ಮಿಕವಾಗಿ ಒದಗಿದ ಮರಣದಿಂದ ಇಹಲೋಕಸುಖವಿಮುಖರಾದುದರಿಂದ ಮುದ್ರಣದ ಭಾರವೆಲ್ಲವೂ ನನ್ನ ಮೇಲೆಯೇ ಬಿದ್ದಿತು. ಸಂಪೂರ್ಣವಾಗಿ ಮುದ್ರಿತವಾದ ಈ ಗ್ರಂಥವನ್ನು ನೋಡಿ ಆನಂದಪಡುವ ಸುಯೋಗವನ್ನು ಶ್ರೀಮಾನ್ ಎ. ವೆಂಕಟರಾಯರಿಗೊದಗಿದ ಅಕಾಲಮೃತ್ಯುವು ದೂರಮಾಡಿದುದಕ್ಕಾಗಿ ಉಂಟಾಗುವ ವಿಷಾದವು ದೈವವಿಲಾಸಕ್ಕೆ ಸೇರಿದುದಾಗಿರುವುದು.

ಅನನ್ಯಪ್ರಯೋಜನರಾಗಿ ಭಾಷಾಸೇವೆಯೇ ಮುಖ್ಯಧ್ಯೇಯವೆಂದೂ, ಕನ್ನಡಿಗರ ಸೇವೆಯೇ ತಮ್ಮ ಕರ್ತವ್ಯವೆಂದೂ ಎಣಿಸಿ ಹಸ್ತಲಿಖಿತ ಪ್ರತಿಗಳನ್ನು ತಮ್ಮ ಸ್ವಂತವಾದ ಉತ್ತರವಾದಿತ್ವದಿಂದ ಕಳುಹಿಸಿಕೊಟ್ಟು ಗ್ರಂಥಪ್ರಚಾರಕ್ಕೆ ನಿದಾನಭೂತರಾಗಿರುವ ಉತ್ತರದೇಶದ ಆರಾ ಎಂಬಲ್ಲಿ ಸ್ಥಾಪಿತವಾಗಿರುವ ಜೈನ ಸಿದ್ಧಾಂತ ಭವನ ಪುಸ್ತಕಭಾಂಡಾಗಾರದ ಕಾರ್ಯದರ್ಶಿಗಳಾದ ಶ್ರೀಮಾನ್ ಕೆ. ಭುಜಬಲಿ ಶಾಸ್ತ್ರಿಗಳವರ ಉಪಕಾರವು ಚಿರಸ್ಮರಣೀಯವು; ಮತ್ತು ಈ ಗ್ರಂಥದ ಮುದ್ರಣಕ್ಕೆ ಆವಶ್ಯಕವಾಗಿದ್ದ ಹಸ್ತಲಿಖಿತ ಪ್ರತಿಗಳನ್ನು ಒದಗಿಸಿಕೊಟ್ಟು ಉಪಕಾರಮಾಡಿರುವ ಮದ್ರಾಸ್ ಲೈಬ್ರೆರಿಯ ಕ್ಯೂರೇಟರಾಗಿದ್ದು ಈಗ ಅಣ್ಣಾಮಲೆ ಯೂನಿವರ್ಸಿಟಿಯಲ್ಲಿ ಸಂಸ್ಕೃತ ಭಾಷೆಯ ಪ್ರೊಫೆಸರರಾಗಿರುವ ಮಹಾಮಹೋಪಾಧ್ಯಾಯ ಬಿರುದಾಂಕಿತರಾದ ಶ್ರೀಮಾನ್, ಎಸ್. ಕುಪ್ಪುಸ್ವಾಮಿಶಾಸ್ತ್ರಿ, ಯಮ್. ಎ., ಅವರಿಗೂ, ಶ್ರೀಮಾನ್ ಕೆ. ಭುಜಬಲಿ ಶಾಸ್ತ್ರಿಗಳವರಿಗೂ, ಅಂದವಾಗಿರುವ ಅಚ್ಚು ಮೊಳೆಗಳಿಂದ ಈ ಗ್ರಂಥವನ್ನು ಸುಂದರವಾಗಿ ಮುದ್ರಿಸಿಕೊಟ್ಟ ಶಾರದಾಪ್ರೆಸ್ ಪ್ರೊಪ್ರೈಟರವರಿಗೂ ಧನ್ಯವಾದಗಳನ್ನು ಸಮರ್ಪಿಸಿ ಈ ವಿಷಯವನ್ನು ಪ್ರಕೃತಕ್ಕೆ ಉಪಸಂಹರಿಸುವೆನು.

ಗ್ರಂಥ ಮತ್ತು ಗ್ರಂಥಕರ್ತೃವಿನ ವಿಚಾರ

ಈ "ಅಭಿಧಾನರತ್ನಮಾಲಾ" ಎಂಬ ಕೋಶದ ಮತ್ತು ಅದರ ಕರ್ತೃವಿನ ವಿಷಯವನ್ನು ತಿಳಿಯುವುದಕ್ಕೆ ಮೊದಲು ಅದುವರೆಗೆ ವಿರಚಿತವಾಗಿ ಪ್ರಚಾರಕ್ಕೆ ಬಂದಿರುವ ಸಂಸ್ಕೃತ ಕೋಶಗಳ ಮತ್ತು ಕೋಶಕರ್ತೃಗಳ ಚರಿತೆಯನ್ನು ಸಂಗ್ರಹವಾಗಿ ತಿಳಿದುಕೊಳ್ಳುವುದು ಅತ್ಯಾವಶ್ಯಕವಾಗಿರುವುದರಿಂದ ಅದನ್ನು ಇಲ್ಲಿ ಸಂಗ್ರಹವಾಗಿ ಕೊಟ್ಟಿದೆ.

ಸಂಸ್ಕೃತ ಭಾಷೆಯು ವೈದಿಕ ಲೌಕಿಕ ಭಾಷೆಗಳೆಂದು ಎರಡು ಬಗೆಯಾಗಿ ವಿಭಕ್ತವಾಗಿದೆ. ದ್ವಿಜರಿಂದ ಮಾತ್ರವೇ ಅಧ್ಯೇಯಾರ್ಹಗಳಾದ ಋಗಾದಿ ವೇದಗಳು, ಉಪನಿಷತ್ತುಗಳು, ಇವುಗಳ ಭಾಷೆಯನ್ನು ವೈದಿಕಭಾಷೆಯೆಂದೂ, ಪುರಾಣೇತಿಹಾಸಗಳು, ಸಾರ್ವಜನೀನವಾದ ಕಾವ್ಯನಾಟಕಾದಿಗಳು ಇವುಗಳಿಗೆ ಸಂಬಂಧಪಟ್ಟ ಭಾಷೆಯನ್ನು ಲೌಕಿಕ ಭಾಷೆಯೆಂದೂ,

[1] ವೈದಿಕಶಾಸ್ತ್ರಜ್ಞರು ನಿರ್ಣಯಿಸಿರುವರು, ವೇದಗಳನ್ನು ಸ್ವೀಕರಿಸದಿರುವ ಜೈನ ಬೌದ್ಧ[2] ಪಂಡಿತರುಗಳು ಲೌಕಿಕ ಭಾಷೆಯೊಂದನ್ನೇ ಅಂಗೀಕರಿಸಿರುವರು. ಇವೆರಡು ಭಾಷೆಗಳಿಗೂ ಸ್ವರೂಪದಲ್ಲೂ, ಪ್ರಯೋಗಗಳಲ್ಲೂ ತುಂಬಾ ಅಂತರವುಂಟು. ಇದರಿಂದಲೇ ಸಂಸ್ಕೃತ ವ್ಯಾಕರಣಕರ್ತೃವಾದ ಪಾಣಿಯು ಸ್ವೋಪಜ್ಞವಾದ "ಅಷ್ಟಾಧ್ಯಾಯಿ" ಎಂಬ ವ್ಯಾಕರಣಗ್ರಂಥದಲ್ಲಿ ವೈದಿಕಪ್ರಯೋಗ ವಿಚಾರವನ್ನೂ ಅಲ್ಲಲ್ಲಿ ಹೇಳಿರುವನು[3] ಇದಕ್ಕೆ ಸಿದ್ಧಾಂತಕೌಮುದೀ ಎಂಬ ವೃತ್ತಿಯನ್ನು ಬರೆದಿರುವ ಭಟ್ಟೋಜಿ ದೀಕ್ಷಿತರು ತಮ್ಮ ವೃತ್ತಿಗ್ರಂಥದಲ್ಲಿ ಈ ವೈದಿಕ ಶಬ್ದಪ್ರಕ್ರಿಯೆಯನ್ನೇ ಬೇರೆಯಾಗಿ ಎತ್ತಿ ಬರೆದು "ಸ್ವರವೈದಿಕ ಪ್ರಕರಣ"ವೆಂದು ಅದಕ್ಕೆ ಹೆಸರಿಟ್ಟಿರುವರು. ಈ ವೈದಿಕ ಭಾಷೆಯು ಅಪೌರುಷೇಯವೂ, ನಿತ್ಯವೂ ಎಂದು ವೈದಿಕರು ಉಪಪಾದಿಸಿರುವರು ಮತ್ತು ನಂಬಿರುವರು. ಈ ವೇದಗಳಿಗೆ ಅಂಗಗಳೆಂದು ಪ್ರಸಿದ್ಧವಾಗಿರುವ ಶಿಕ್ಷೆ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ ಎಂಬ ಆರುಅಂಗಗಳಲ್ಲಿ ನಿರುಕ್ತವೆಂಬುದೇ ನಿಘಂಟುವೆಂದು ರೂಢಿಯಲ್ಲಿ ಬಂದಿರುವುದು; ವೇದಗಳಂತೆ ವೇದಾಂಗಗಳಾದ ಇದೂ ಕೂಡ ಅಪೌರುಷೇಯವೂ ನಿತ್ಯವೂ ಆಗಿರುವುವು. ಇದರಿಂದಲೇ ವೈದಿಕಭಾಷೆಗೂ, ವೇದಾಂಗಳಾದ ವ್ಯಾಕರಣಾದಿ ಶಾಸ್ತ್ರಗಳಿಗೂ (ವೈದಿಕ ಛಂದಸ್ಸು, ವೈದಿಕ ವ್ಯಾಕರಣ, ವೈದಿಕನಿರುಕ್ತ) ಪೌರ್ವಾಪರ್ಯವನ್ನು ಹೇಳಲು ಶಕ್ಯವಿಲ್ಲ. ಲೌಕಿಕ ಭಾಷೆಯಲ್ಲಾದರೋ ಭಾಷೆಯು ಮೊದಲು ಹುಟ್ಟಿ ಬಳಿಕ ವ್ಯಾಕರಣಾದಿಶಾಸ್ತ್ರಗಳು ಹುಟ್ಟಿದುವೆಂದು ಸಿದ್ಧಾಂತಮಾಡಿರುವರು. ಈ ಅರ್ಥವನ್ನೇ "ಪ್ರಯೋಗಶರಣಾ ವೈಯಾಕರಣಾಃ" ಎಂಬ ಪ್ರಮಾಣವಾಕ್ಯವು ಸಮರ್ಥಿಸುವುದು. ಪ್ರಕೃತದಲ್ಲಿ ವೈದಿಕನಿರುಕ್ತವು ಅಪೌರುಷೇಯವೂ ನಿತ್ಯವೂ ಆಗಿರುವುದಾದರೆ ಲೌಕಿಕ ಭಾಷೆಯ ನಿಘಂಟುಗಳು ಪೌರುಷೇಯಗಳೂ, ಒಂದೇ ರೂಪದಲ್ಲಿರದೆ (ಯಾವನಾದರೊಬ್ಬ ಪ್ರತಿಭಾಶಾಲಿಯಾದ ಮನುಷ್ಯನಿಂದ ರಚಿತವಾದುವು) ಕಾಲದೇಶಪುರುಷಾದಿ ಭೇದಗಳಿಂದ ಆಗಾಗ ಮಾರ್ಪಡತಕ್ಕುವೂ ಆಗಿರುವುವು.

K·392

ಈಗ ನಮಗೆ ತಿಳಿದುಬಂದಿರುವ ಮತ್ತು ದೊರಕಿರುವ ವೈದಿಕ ನಿಘಂಟುಗಳಲ್ಲಿ "ನಿಘಂಟು" (ವೈದಿಕ ನಿಘಂಟು)[4]ವೆಂಬುದೇ ಮೊತ್ತಮೊದಲನೆಯದು ವೇದಗಳಂತೆಯೇ ವೇದಾಂಗವಾಗಿರುವ ಈ ನಿಘಂಟುವಿಗೂ ಕರ್ತೃವೊಬ್ಬನುಂಟೆಂದು ಹೇಳಲು ಶಕ್ಯವಿಲ್ಲ.

ವೈದಿಕ ನಿಘಂಟು

ಬ್ರಾಹ್ಮಣರು ಅನಾದಿಯಾಗಿ ವೇದಗಳ ಜತೆಯಲ್ಲೇ ಈ ನಿಘಂಟುವನ್ನೂ ಅಧ್ಯಯನಮಾಡುತ್ತಲೇ ಬಂದಿರುವರು. ಈ ನಿಘಂಟುವಿನಲ್ಲಿ ಪ್ರಕರಣಗಳು ಐದುಂಟು; ಲೌಕಿಕ ಭಾಷಾಶಬ್ದಗಳಿಗೆ ವಿಲಕ್ಷಣಗಳಾಗಿ ವೇದಗಳಲ್ಲಿ ಮಾತ್ರವೇ ಪ್ರಯೋಗಿಸಲ್ಪಟ್ಟಿರುವ ಹಲವು ನಾಮಪದಗಳೂ, ತದ್ಧಿತಾಂತಕೃದಂತಪದಗಳೂ

---

(1) ಅಥ ಶಬ್ದಾನುಶಾಸನಂ ಕೇಷಾಂ ಶಬ್ದಾನಾಂ ವೈದಿಕಾನಾಂ ಲೌಕಿಕಾನಾಂ ಚ. (ವ್ಯಾಕರಣಭಾಷ್ಯ).

(2) ಜೈನರು ಸಂಸ್ಕೃತ ಭಾಷೆಯೊಡನೆ ಅರ್ಧಮಾಗಧೀ ಭಾಷೆಯನ್ನೂ (ಪ್ರಾಕೃತ ಭಾಷಾಭೇದ) ಬೌದ್ಧರು ಪಾಲೀಭಾಷೆಯನ್ನೂ ತಮ್ಮ ತಮ್ಮ ಮತಗ್ರಂಥಗಳಿಗಾಗಿ ಸ್ವೀಕರಿಸಿರುವರು.

(3) ಗಿಕಾ ಡಃ ಛಂದಸಿ, (ವೇದದಲ್ಲಿ ಗಿರಿಶಬ್ದವು ಉಪಪದವಾಗಿರುವಾಗ ಶೀಙ್-(ಸ್ವಪ್ನೇ) ಎಂಬ ಧಾತುವಿಗೆ "ಡ" ಪ್ರತ್ಯಯವು ಬಂದು ಗಿರಿಶಃ ಎಂಬ ರೂಪವಾಗುವುದು; ಎಂದು ಈ ಸೂತ್ರಾರ್ಥವು. ಇತ್ಯಾದಿ.

(4) ನಿಘಂಟುವು ಕೇವಲ ನಾಮಪದಗಳ ಸಂಗ್ರಹವಲ್ಲದೆ (ನಿಘಂಟುರ್ನಾಮ ಸಂಗ್ರಹಃ) ಕ್ರಿಯಾಪದಗಳ ಸಂಗ್ರಹವಲ್ಲವಾದುದರಿಂದ ನಿಘಂಟುಗಳಲ್ಲಿ ಧಾತುಗಳ ಅಥವಾ ಕ್ರಿಯಾಪದಗಳ ಸಂಗ್ರಹವು ಸೇರಿರುವುದಿಲ್ಲ. ಅರ್ವಾಚೀನರು ಲೌಕಿಕಭಾಷೆಯಲ್ಲಿ ಕ್ರಿಯಾನಿಘಂಟುವೆಂಬ ಕ್ರಿಯಾಮೂಲರೂಪಗಳಾದ ಧಾತುಗಳ ನಿಘಂಟುವನ್ನೂ ವಿರಚಿಸಿ ಬಳಕೆಗೆ ತಂದಿರುವರು.

ಇದರಲ್ಲಿ ಸಂಕಲಿತಗಳಾಗಿವೆ.[1] ಇದರಲ್ಲಿ ಕೇವಲ ನಾಮವಾಚಕ ಶಬ್ದಸಂಗ್ರಹ ಮಾತ್ರವೇ ಇರುವುದಲ್ಲದೆ ಕರ್ತೃ ಕ್ರಿಯಾಪದಘಟಿತವಾದ ಪೂರ್ಣ ವಾಕ್ಯವೊಂದಾದರೂ ಕಂಡುಬರುವುದಿಲ್ಲ. ಮೊದಲನೆಯ ಮೂರು ಪ್ರಕರಣಗಳಲ್ಲಿ ಧಾತುಗಳ ಆಧಾರದಿಂದ ಪಂಗಡ ಪಂಗಡಗಳಾಗಿ ವಿಭಾಗಿಸಲ್ಪಟ್ಟಿರುವ ನಾಮಪದಗಳ ಪರ್ಯಾಯ ಪದಗಳು ಅವುಗಳ ಅರ್ಥನಿರ್ವಚನದೊಡನೆ ನಿಯತಸಂಖ್ಯಾಕಗಳಾಗಿ ಉದಾಹರಿಸಲ್ಪಟ್ಟಿವೆ; ನಾಲ್ಕನೆಯದರಲ್ಲಿ ಪ್ರಕರಣಗಳಿಂದ ಅರ್ಥವನ್ನು ನಿರ್ಣಯಿಸಬಹುದಾದ ಕೆಲವು ಪದಗಳು ಆಯಾ ಪ್ರಕರಣಗಳೊಡನೆ ನಿರೂಪಿತಗಳಾಗಿವೆ. ಐದನೆಯದರಲ್ಲಿ ವೇದಗಳಲ್ಲಿ ಹೇಳಲ್ಪಟ್ಟಿರುವ ಹಲವು ದೇವತೆಗಳ ಹೆಸರನ್ನು ಹೇಳಿದೆ.

ಈ ನಿಘಂಟುವಿಗೆ ಹಲವರು ವ್ಯಾಖ್ಯಾರೂಪವಾದ ಭಾಷ್ಯಗಳನ್ನು ಬರೆದಿರುವರು. ಈಗ ನಮಗೆ ತಿಳಿದುಬಂದಿರುವ ಈ ನಿಘಂಟುಭಾಷ್ಯ (ನಿರುಕ್ತ)ಗಳಲ್ಲಿ ಯಾಸ್ಕಕೃತವಾದ

ಯಾಸ್ಕನ ನಿರುಕ್ತ ಅಥವಾ ನಿಘಂಟು ಭಾಷ್ಯ

ಯಾಸ್ಕನಿರುಕ್ತವೆಂಬುದೇ ಮೊತ್ತಮೊದಲನೆಯದು. ಯಾಸ್ಕನು ತನ್ನೀ ನಿರುಕ್ತ ಭಾಷ್ಯದಲ್ಲಿ ವೈದಿಕನಿಘಂಟುವಿನಲ್ಲಿ ಹೇಳಿರುವ ಪದಗಳಿಗೆ ವೇದಗಳ ಪ್ರಯೋಗಗಳನ್ನು ಕೊಟ್ಟು ಅರ್ಥವನ್ನು ವಿವರಿಸಿರುವನು. ಆದರೆ ಇದು ಶಬ್ದಾರ್ಥಗಳನ್ನು ಪ್ರಯೋಗಗಳೊಡನೆ ವಿವರಿಸುವ ಸಾಮಾನ್ಯ ಭಾಷ್ಯ ಮಾತ್ರವಲ್ಲ. ಅಲ್ಲಲ್ಲಿ ವ್ಯಾಖ್ಯಾಕಾರನು ಸ್ವತಂತ್ರವಾಗಿ ತನ್ನ ಪ್ರತಿಭಾವಿಶೇಷದಿಂದ ಹೊಸದಾಗಿ ವಿಚಾರಮಾಡಿರುವ ಹಲವು ವಿಷಯಗಳೂ ಸೇರಿರುವುವು. ಇವುಗಳಲ್ಲಿ ಶಬ್ದಾರ್ಥಗಳ ವಿಷಯದಲ್ಲಿ ಭಿನ್ನ ಭಿನ್ನಾಭಿಪ್ರಾಯಗಳುಳ್ಳ ಹಲವು ಶಾಸ್ತ್ರಜ್ಞರ ಹೆಸರುಗಳು ಅವರವರ ಅಭಿಪ್ರಾಯಗಳು, ಆಯಾ ಶಬ್ದಗಳ ರೂಪನಿಷ್ಪತ್ತಿ ಇವುಗಳೂ ಅಲ್ಲಲ್ಲಿ ಕಂಡುಬರುವುವು.[2] ಇದರಲ್ಲಿ ಪ್ರತಿಯೊಂದು ಅಧ್ಯಾಯದಲ್ಲೂ ಮೂರರಿಂದ ಏಳರ ವರೆಗಣ ಪಾದಗಳನ್ನು ಒಳಕೊಂಡಿರುವ ಹನ್ನೆರಡು ಅಧ್ಯಾಯಗಳೂ, ಎರಡು ಪರಿಶಿಷ್ಟಾಧ್ಯಾಯಗಳೂ ಇರುವುವು. ಈ ಹನ್ನೆರಡಧ್ಯಾಯಗಳೂ ಕೂಡ ಆರಾರು ಅಧ್ಯಾಯಗಳಿಗೆ ಒಂದೊಂದರಂತೆ ಎರಡು ಷಟ್ಕಗಳಾಗಿಯೂ, ಮೂರು ಕಾಂಡಗಳಾಗಿಯೂ ವಿಭಾಗಿಸಲ್ಪಟ್ಟಿವೆ. ಮೊದಲನೆಯ ಷಟ್ಕದ (ಪೂರ್ವಷಟ್ಕ) ಎರಡು ಅಧ್ಯಾಯಗಳು ಉಪೋದ್ಘಾತಗಳಾಗಿವೆ. ಮೂರನೆಯ ಅಧ್ಯಾಯವು [3]ನೈಘಂಟುಕ

(1) (ನಿರುಕ್ತ ಪು. 1-1-1) 'ಸಮಾಮ್ನಾಯಃ, ಸಮಾಮ್ನಾತಃ, ಸ ವ್ಯಾಖ್ಯಾತವ್ಯಃ, ತಮಿಮಂ ಸಮಾಮ್ನಾಯಂ ನಿಘಂಟವ ಇತ್ಯಾಚಕ್ಷತೇ. ಎಂದು ನಿರುಕ್ತದಲ್ಲೂ—ಯಸ್ಮಾದರ್ಥಾನ್ನಿಘಂಟಯತಿ ತಸ್ಮಾನ್ನಿಘಂಟುಃ' ಎಂದು ವ್ಯಾಡಿಯ ಕೋಶದಲ್ಲಿಯೂ ಈ ಶಬ್ದಾರ್ಥವನ್ನು ವಿವರಿಸಿದೆ. (1-6-5) ಸಾಕ್ಷಾತ್ಕೃತಧರ್ಮಾಣೋಋಷಯೋಬಭೂವುಃ, ತೇಽಸಾಕ್ಷಾತ್ಕೃಧರ್ಮಭ್ಯಃ ಉಪದೇಶೇನ ಮಂತ್ರಾನ್ ಸಂಪ್ರಾಹುರುಪದೇಶಾಯ ಗ್ಲಾಯಂತೋಽವರೇ ಬಿಲ್ಮಗ್ರಹಣಾಯೇಮಂ ಗ್ರಂಥಂ ಸಮಾಮ್ನಾಯಿಷುಃ ವೇದಂ ವೇದಾಂಗಾನಿ ಚ, (ಬಿಲ್ಮಂ, ಭಿಲ್ಮಂ, ಭಾಷಣಮಿತಿ ನೈರುಕ್ತಾಃ)—

(2) ತತ್ಕೋವೃತ್ರಃ, ಮೇಘ ಇತಿ ನೈರುಕ್ತಾ: (ಇದರಿಂದ ಇವನಿಗಿಂತಲೂ ಹಿಂದೆ ಹಲವು ಮಂದಿ ನಿರುಕ್ತಕಾರರಿದ್ದರೆಂದು ತಿಳಿದುಬರುವುದು) ತ್ವಾಷ್ಟ್ರೋಽಸುರ ಇತ್ಯೈತಿಹಾಸಿಕಾಃ, (ನಿ. II. 62) ತತ್ಕಾವಶ್ವಿನೌ? ದ್ಯಾವಾಪೃಥಿವ್ಯಾವಿತ್ಯೇಕೇ ಸೂರ್ಯಾಚಂದ್ರಮಸಾವಿತ್ಯೇಕೇ ರಾಜಾನೌ ಪುಣ್ಯಕೃತಾವಿತ್ಯೈತಿಹಾಸಿಕಾಃ (XII-1) ಇತ್ಯಾದಿ—

(3) ಈ ಕಾಂಡದಲ್ಲಿ— "ಗೌಃ, ಗ್ಮಾ, ಕ್ಷ್ಮಾ, ಕ್ಷಾ...... ಗಾತುಃ, ಗೋತ್ರೇತ್ಯೇಕವಿಂಶತಿಃ ಪೃಥಿವೀ ನಾಮಾನಿ' ಎಂದು ಭೂವಾಚಕಪರ್ಯಾಯಪದಗಳನ್ನು ಸೂತ್ರರೂಪದಲ್ಲಿ ಹೇಳಿದೆ; ಹೀಗೆಯೇ ಚಿನ್ನ ಮೊದಲಾದ ಹಲವು ದ್ರವ್ಯವಾಚಕಶಬ್ದಗಳ ಪರ್ಯಾಯ ಪದಗಳನ್ನು ಅರ್ಥಗಳೊಡನೆ ವಿವರಿಸಿ ನಡುವೆ (ಕ್ರಿಯಾಪದ ರೂಪದಲ್ಲಿ) ಉಪಮಾನಾರ್ಥಕ ಮೊದಲಾದ ಅರ್ಥವನ್ನು ಹೇಳುವ (ಸೂಚಿಸುವ) ಕೆಲವು ನಿಪಾತಗಳನ್ನೂ ಹೇಳಿ "ಸ್ವಧೇ ಪುರಂಧ್ರೀ...... ಅಪಾರೇ ಅಪಾರೇ ಇತಿ ಚತುರ್ವಿಂಶತಿಃ ದ್ಯಾವಾಪೃಥಿವ್ಯೋರ್ನಾಮಾನಿ" ಎಂಬ ಸೂತ್ರದಿಂದ ಉಪಸಂಹೃತವಾಗಿದೆ.

ಕಾಂಡವೆಂದೂ, ನಾಲ್ಕರಿಂದ ಆರರ ವರೆಗಣ ಮೂರು ಅಧ್ಯಾಯಗಳು [1]ನೈಗಮಕಾಂಡವೆಂದೂ, ಉತ್ತರಷಟ್ಕವು ದೈವತಕಾಂಡವೆಂದೂ ಸಂಜ್ಞೆಯನ್ನು ಪಡೆದಿವೆ. ಈ ಕಾಂಡವು[2] ವೇದಗಳಲ್ಲಿ ಹೇಳಿರುವ ದೇವತೆಗಳ ಹೆಸರು, ಅಧಿದೇವತಾತ್ವ ಮೊದಲಾದ ವಿಷಯಗಳನ್ನೂ ವಿವರಿಸತಕ್ಕುದಾಗಿದೆ. (ಇದು ವೈದಿಕನಿಘಂಟುವಿನ ಐದನೆಯ ಅಧ್ಯಾಯದ ವಿವರಣವು), ಬಳಿಕ ಮುಂದಣ ಹದಿಮೂರು ಹದಿನಾಲ್ಕನೆಯ ಪರಿಶಿಷ್ಟಾಧ್ಯಾಯಗಳಲ್ಲಿ ಹಲವು ಸಂಕೀರ್ಣವಿಷಯವನ್ನೊಳಕೊಂಡಿರುವ ವೇದವಾಕ್ಯಗಳ ವಿವರಣವು ಹೇಳಲ್ಪಟ್ಟಿರುವುದು.

ಈ ನಿರುಕ್ತ ಭಾಷ್ಯಕಾರನಾದ ಯಾಸ್ಕನ ಕಾಲವನ್ನು ನಿಷ್ಕೃಷ್ಟವಾಗಿ ಹೇಳಲು ಯಾವ ಆಧಾರವೂ ಇನ್ನೂ ಸಿಕ್ಕಲಿಲ್ಲ. ಕ್ರಿ. ಪೂ. ನಾಲ್ಕನೆಯ ಶತಮಾನದಲ್ಲಿದ್ದು (ಕೆಲವರು ಆರನೆಯ ಶತಮಾನವೆಂದು ಸಮರ್ಥಿಸುವರು) "ಅಷ್ಟಾಧ್ಯಾಯಿ" ಎಂಬ ಸಂಸ್ಕೃತ ವ್ಯಾಕರಣ ಸೂತ್ರಗಳನ್ನು ಬರೆದ ಪಾಣಿನಿಗಿಂತಲೂ ಪ್ರಾಚೀನನೆಂದು ಮಾತ್ರ ಹೇಳಲು ಅವಕಾಶವುಂಟು. ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ "ಯಸ್ಕಾದಿಭ್ಯೋ ಗೋತ್ರೇ-(ಅಷ್ಟಾ-೨-೪-೬೩) ಎಂಬ ಸೂತ್ರದಲ್ಲಿ ಈ ಯಾಸ್ಕನ ಹೆಸರು ಉಕ್ತವಾಗಿರುವುದು. ಇದರಿಂದ ಯಾಸ್ಕನು ಕ್ರಿ. ಪೂ. ನಾಲ್ಕನೆಯ ಶತಮಾನಕ್ಕೆ ಹಿಂದಣವನೆಂದು ಮಾತ್ರ ಹೇಳಬಹುದಲ್ಲದೆ, ಎಷ್ಟು ವರ್ಷಕಾಲ ಹಿಂದಿದ್ದವನೆಂಡು ಹೇಳಲು ಮಾತ್ರ ಶಕ್ಯವಿಲ್ಲ. ಇದರಿಂದ ಕ್ರಿ. ಪೂ. ನಾಲ್ಕನೆಯ ಶತಮಾನಕ್ಕೆ ಮೊದಲೇ ನಿಘಂಟುವಿನ (ನಿರುಕ್ತಗಳ) ರಚನೆಗೆ ಆರಂಭವಾಗಿತ್ತೆಂದು ಹೇಳಲು ಯಾವ ಸಂದೇಹವೂ ಇಲ್ಲ.

ನಿರುಕ್ತ ಭಾಷ್ಯಗಳಲ್ಲಿ ಯಾಸ್ಕ ಭಾಷ್ಯವಲ್ಲದೆ ಮತ್ತೆ ಹಲವು ಭಾಷ್ಯಗಳೂ ಇದ್ದುವೆಂದು ತಿಳಿದುಬರುತ್ತವೆ. ಆದರೆ ಯಾಸ್ಕಭಾಷ್ಯವು ಇವುಗಳೆಲ್ಲಕ್ಕಿಂತಲೂ ಪ್ರಾಚೀನತಮವೆಂದು ಮಾತ್ರ ಮೇಲೆ ಹೇಳಿದೆ. ಅದು ವೈದಿಕ ನಿಘಂಟುವಿನ ಸಂಪೂರ್ಣವಾದ ವ್ಯಾಖ್ಯೆಯಲ್ಲವಾದುದರಿಂದಲೇ ಮತ್ತೆ ಕೆಲವರು ಈ ವೈದಿಕನಿಘಂಟುವಿಗೆ ನಿರುಕ್ತಸಂಜ್ಞಿಕವಾದ

ದೇವರಾಜ ನಿರುಕ್ತ ಭಾಷ್ಯ

ಭಾಷ್ಯವನ್ನು ಬರೆದಿರುವರು. ಇವರಲ್ಲಿ [3]ವಿಜ್ಞಾನೇಶ್ವರನ ಮಗನಾದ "ದೇವರಾಜ ಯಜ್ವ" ಎಂಬವನು ಬರೆದಿರುವ ಭಾಷ್ಯವೂ ಪ್ರಾಚೀನತಮವಾದುದೇ. ಇದರ ಹೆಸರು ನೈಘಂಟುಕಕಾಂಡನಿರ್ವಚನವೆಂದು ಗ್ರಂಥಕರ್ತೃವೇ ಹೇಳಿರುವನು[4] ಈತನು ತನ್ನನ್ನು ದಕ್ಷಿಣಾಪಥದ ರಂಗೇಶಪುರಿಯ ಪರ್ಯಂತಗ್ರಾಮವಾಸಿಯೆಂದೂ [5]ಯಜ್ಞೇಶ್ವರನ ಪೌತ್ರನೆಂದೂ ಹೇಳಿಕೊಂಡಿರುವನು. ಈತನು ತನ್ನ ಭಾಷ್ಯದಲ್ಲಿ [6]ಭೋಜರಾಜನನ್ನೂ (1018–1060) ಅಮರವ್ಯಾಖ್ಯಾಕರ್ತೃನಾದ ಕ್ಷೀರಸ್ವಾಮಿಯನ್ನೂ[7]

(1) ಈ ಕಾಂಡದಲ್ಲಿ ಜಹಾ, ನಿಧಾ ಮೊದಲಾದ ಅರುವತ್ತೆರಡು ಶಬ್ದಗಳು, ಸನ್ನಿಮ್ ಮೊದಲಾದ ಎಂಭತ್ತು ನಾಲ್ಕು ಶಬ್ದಗಳು, ಆಶುಶುಕ್ಷಣಿ ಮೊದಲಾದ ಮೂವತ್ತೆರಡು ಶಬ್ದಗಳು; ಇವುಗಳನ್ನು ವಿವರಿಸಿದೆ.

(2) ಈ ಕಾಂಡದ ಕೊನೆಯ ಸೂತ್ರವು "ದೇವಪತ್ನೋ ದೇವಪತ್ನ್ಯಃ" (ಈ ದ್ವಿರುಕ್ತಿಯು ಪ್ರಕರಣಾಂತ್ಯ ಮತ್ತು ಗ್ರಂಥಾಂತ್ಯವನ್ನೂ ಸೂಚಿಸುವುದು.)

(3) ಈತನು "ವಿಜ್ಞಾನೇಶ್ವರೀಯ"ವೆಂಬ ಧರ್ಮಶಾಸ್ತ್ರ ಸಂಗ್ರಹವನ್ನು ವಿರಚಿಸಿದವನಾಗಿರಬೇಕು.

(4) ಯಜ್ವಾ ರಂಗೇಶಪುರೀಪರ್ಯಂತ ಗ್ರಾಮವಾಸ್ತವ್ಯಃ । ವಿರಚಯತಿ ದೇವರಾಜೋ ನೈಘಂಟುಕಕಾಂಡ ನಿರ್ವಚನಮ್ ॥

(5) ತಾತಂ ಯಜ್ಞೇಶ್ವರಾಖ್ಯಂ

(6) ಭೋಜರಾಜೀಯಂ ವ್ಯಾಕರಣಂ (ಉ. ಪು. 3-1-19)

(7) ಕುಲ್ಯಾಲ್ಪಾ ಕೃತ್ರಿಮಾ ಸರಿತ್ (ಅಮ 1-9- 4) ಇತ್ಯತ್ರಕ್ಷೀರಸ್ವಾಮಿನೋ ವ್ಯಾಖ್ಯಾ (ಉ.ಪು.116-2-17)

12ನೆಯ ಶತಮಾನದ ಆದಿಯಲ್ಲಿದ್ದವನು) ಉದಾಹರಿಸಿರುವುದರಿಂದ ಹನ್ನೆರಡು ಹದಿ ಮೂರನೆಯ ಶತಮಾನಗಳ ನಡುವೆಯಿದ್ದವನೆಂದು ಹೇಳಬಹುದು. ಈತನು ಹಲವು ಮಂದಿ ನಿರುಕ್ತ ಟೀಕಾ[1]ಕಾರರು, ವೇದಭಾಷ್ಯಕಾರರು ಮತ್ತು ವ್ಯಾಕರಣಾದಿ ಶಾಸ್ತ್ರ ಪ್ರಣೇತೃಗಳು ಇವರ ಹೆಸರನ್ನು ಹೇಳಿರುವನು, ವೇದಭಾಷ್ಯಕಾರರಾದ ಸಾಯಣಾಚಾರ್ಯರು, ನಿರುಕ್ತ ವ್ಯಾಖ್ಯಾಕಾರನಾದ ದುರ್ಗಾಚಾರ್ಯರು. ಇವರ ಹೆಸರನ್ನು ಮಾತ್ರ ಉದಾಹರಿಸಿಲ್ಲ.

ದುರ್ಗಾಚಾರ್ಯ ಭಾಷ್ಯ

ದುರ್ಗಾಚಾರ್ಯನೆಂಬವನೂ ಒಂದು ನಿರುಕ್ತಭಾಷ್ಯವನ್ನು ಬರೆದಿರುವನು. ತನ್ನೀಭಾಷ್ಯದ ಪ್ರಕರಣಗಳ ಅಂತ್ಯಭಾಗದ ಗದ್ಯದಲ್ಲಿ, "ಇತಿ ಶ್ರೀ ಜಂಬೂಮಾರ್ಗಾಶ್ರಮ ವಾಸಿನಃ ಆಚಾರ್ಯಭಗವದ್ದುರ್ಗಸ್ಯ ಕೃತೌ (ಏಕಾದಶೋಽಧ್ಯಾಯಃ)" ಎಂದು ಹೇಳಿಕೊಂಡಿರುವುದರಿಂದ ಈತನು ಜಂಬೂಮಾರ್ಗಾಶ್ರಮವಾಸಿಯೂ, ಭಗವಚ್ಛಬ್ದವಾಚ್ಯನೂ, ತುಂಬಾ ಪ್ರಸಿದ್ಧನಾದ ಆಚಾರ್ಯನೂ ಆಗಿದ್ದನೆಂದು ತಿಳಿದುಬರುವುದು. ಈತನು ಹದಿಮೂರನೆಯ ಶತಮಾನದಲ್ಲಿದ್ದ ನಿರುಕ್ತ ಭಾಷ್ಯಕಾರನಾದ ದೇವರಾಜಯಜ್ವನಿಗೂ, ಹದಿನಾಲ್ಕನೆಯ ಶತಮಾನದ ಉತ್ತರಾರ್ಧದಲ್ಲಿದ್ದ ವೇದ ಭಾಷ್ಯಕರ್ತೃವಾದ ಸಾಯಣಾಚಾರ್ಯರಿಗೂ ನಡುವಣ ಕಾಲದಲ್ಲಿದ್ದವನೆಂದು ಮಾತ್ರ ಹೇಳಬಹುದಲ್ಲದೆ ಯಾವ ಕಾಲದಲ್ಲಿದ್ದನೆಂದು ನಿಷ್ಕೃಷ್ಟವಾಗಿ ಹೇಳಲು ಯಾವ ಆಧಾರವೂ ಇಲ್ಲ.

ಅಗ್ನಿಪುರಾಣ ಕೋಶ

ವೇದೋಪಬೃಂಹಣಕ್ಕಾಗಿ ವೇದಗಳ ತರುವಾಯ ಹುಟ್ಟಿದ ಇತಿಹಾಸಪುರಾಣಗಳಲ್ಲಿ ವಾಲ್ಮೀಕಿಮಹರ್ಷಿವಿರಚಿತವಾದ ರಾಮಾಯಣವೂ, ವ್ಯಾಸಮಹರ್ಷಿಗಳಿಂದ ರಚಿತವಾದ ಮಹಾಭಾರತವೂ ಇತಿಹಾಸಗಳೆಂದು ಪ್ರಸಿದ್ಧವಾಗಿವೆ. ಪುರಾಣಗಳು ಹದಿನೆಂಟು. (ಇವಲ್ಲದೆ ಉಪ ಪುರಾಣಗಳೂ ಹದಿನೆಂಟಿರುವುವು) ಇವೆಲ್ಲವನ್ನೂ ವ್ಯಾಸಮಹರ್ಷಿಗಳೇ ವಿರಚಿಸಿದವರು. ಈ ಪುರಾಣಗಳ ಕಾಲದಲ್ಲಿ ಬೇರೆಯಾಗಿ ಯಾವುದೊಂದು ನಿಘಂಟುವೂ ವಿರಚಿತವಾಗಿಲ್ಲ. ಆದರೆ ಈಹದಿನೆಂಟು ಪುರಾಣಗಳಲ್ಲಿ ಒಂದಾದ ಅಗ್ನಿಪುರಾಣದಲ್ಲಿ ೩೬೦ನೆಯ ಅಧ್ಯಾಯದಿಂದ ೩೬೭ನೆಯ ಅಧ್ಯಾಯದ ವರೆಗೆ ಉಕ್ತವಾಗಿರುವ ಒಂದು ಕೋಶವು[2] ಮಾತ್ರ ದೊರಕುತ್ತದೆ. ಪ್ರಾಯಶಃ ಅಮರ ಕೋಶದಲ್ಲಿರುವ ಪದಗಳೇ ಇದರಲ್ಲಿಯೂ ಸಂಗೃಹೀತವಾಗಿವೆ. ಆದರೂ ಅಮರಕೋಶದಲ್ಲಿರುವಷ್ಟು ಪದಗಳು ಇದರಲಿಲ್ಲವಾದುದರಿಂದ ಇದು ಅಮರಕೋಶದ ಸಂಗ್ರಹವೆಂದು ಹೇಳಲು

(1) ನಿರ್ವಚನಂ ಚ ನಿರುಕ್ತಂ, ಸ್ಕನ್ದಸ್ವಾಮಿಕೃತಾಂ ನಿರುಕ್ತಟೀಕಾಂ, ಸ್ಕನ್ದಸ್ವಾಮಿ-ಭವಸ್ವಾಮಿ-ರಾಹ ದೇವ, ಶ್ರೀನಿವಾಸ-ಮಾಧವದೇವ-ಉವ್ವಟಭಟ್ಟ-ಭಾಸ್ಕರಮಿಶ್ರ-ಭರತಸ್ವಾಮ್ಯಾದಿ ವಿರಚಿತಾನಿ ವೇದಭಾಷ್ಯಾಣಿ, ಪಾಣಿನೀಯಂ ವ್ಯಾಕರಣಂ ವಿಶೇಷತಃ, ಉಣಾದಿತದ್ವೃತ್ತಿ, ಕ್ಷೀರಸ್ವಾಮ್ಯನಂತಾಚಾರ್ಯಾದಿಕೃತಾಂ ನಿಘಂಟುವ್ಯಾಖ್ಯಾಂ, ಭೋಜರಾಜೀಯಂ ವ್ಯಾಕರಣಂ, ಕಮಲನಯನೀಯನಿಖಿಲಪದಸಂಸ್ಕಾರಾಶ್ಚ ನಿರೀಕ್ಷ್ಯ ಕ್ರಿಯತೇ-(ಪು. 3-1, 14-20)

(2) ಈ ಅಗ್ನಿಪುರಾಣದಲ್ಲಿ ರಾಮಾಯಣ ಭಾರತೇತಿಹಾಸಗಳೂ, ವ್ಯಾಕರಣಶಾಸ್ತ್ರ, ಛಂದಶ್ಶಾಸ್ತ್ರ, ಅಲಂಕಾರ ಶಾಸ್ತ್ರ, ಕಾವ್ಯಲಕ್ಷಣ, ವ್ರತಗಳು, ಚತುಷ್ಷಷ್ಟಿಕಲೆಗಳು, ವಿಷಹರಣಾದಿಮಂತ್ರೌಷಧಿಗಳು, ಹಸ್ತ್ಯಶ್ವತುರಗಾಯುರ್ವೇದಾದಿಗಳು ಮೊದಲಾದ ಸರ್ವಶಾಸ್ತ್ರ ವಿಷಯಗಳೂ ಸಂಗ್ರಹವಾಗಿ ಹೇಳಲ್ಪಟ್ಟಿವೆ. ಈ ವಿಷಯವ್ಯತಿಕರದಲ್ಲಿ ಈ ಕೋಶವೂ ಒಂದಾಗಿ ಸೇರಿರುವುದು.

ಅವಕಾಶವುಂಟು[2]. ಆದರೆ ಕಾಂಡವರ್ಗಾದಿವಿಭಾಗಕ್ರಮವಿಷಯದಲ್ಲಿ ಈ ಕೋಶವು ಅಮರ ಕೋಶಕ್ಕಿಂತ ತೀರಾ ಭಿನ್ನವಾಗಿರುವುದು. ಇದರಲ್ಲಿ ಕಾಂಡವಿಭಾಗವೇ ಇಲ್ಲ. ಅಧ್ಯಾಯಗಳು ಮಾತ್ರ ಎಂಟಿವೆ. ಪ್ರತಿಯೊಂದು ಅಧ್ಯಾಯವೂ ಒಂದೊಂದು ವರ್ಗವಾಗಿದೆ. ಈ ವರ್ಗಗಳಲ್ಲಿ ಮೊದಲನೆಯದು ಸ್ವರ್ಗ ಪಾತಾಳಾದಿ ವರ್ಗವು ಇದರಲ್ಲಿ ೬೫ ಪದ್ಯಗಳಿವೆ. ಇದರಲ್ಲಿ ಅಮರ ಕೋಶದ ಒಂದನೆಯ ಕಾಂಡದ ವಿಷಯವು ಅತಿ ಸಂಗ್ರಹವಾಗಿ ಹೇಳಲ್ಪಟ್ಟಿರುವುದು. ಈ ಸಂಗ್ರಹದ ಸ್ವರೂಪವನ್ನೂ, ಪ್ರಮಾಣವನ್ನೂ ತಿಳಿಯುವುದಕ್ಕಾಗಿ ಪುರಾಣಕೋಶದ ಮೊದಲಿನ ನಾಲ್ಕು ಪದ್ಯಗಳನ್ನು ಇಲ್ಲಿ ಕೊಟ್ಟಿದೆ.

ಸ್ವರ್ಗಾದಿನಾಮಲಿಂಗೋ ಯೋ ಹರಿಸ್ತಂ ಪ್ರವದಾಮಿ ತೇ ॥
ಸ್ವಃ ಸ್ವರ್ಗನಾಕತ್ರಿದಿವಾಃ ದ್ಯೋದಿವೌ ದ್ವೇ ತ್ರಿವಿಷ್ಟಪಂ ॥ ೧ ॥
ದೇವಾ ಬೃಂದಾರಕಾ ಲೇಖಾ ರುದ್ರಾದ್ಯಾ ಗಣದೇವತಾಃ ॥
ವಿದ್ಯಾಧರೋಽಪ್ಸರೋಯಕ್ಷರಕ್ಷೋಗಂಧರ್ವಕಿನ್ನರಾಃ ॥ ೨ ॥
ಪಿಶಾಚೋಗುಹ್ಯಕಸ್ಸಿದ್ಧೋ ಭೂತೋಽಮೀ ದೇವಯೋನಯಃ ॥
ದೇವದ್ವಿಷೋಽಸುರಾ ದೈತ್ಯಾಃ ಸುಗತಸ್ಸ್ಯಾತ್ತಥಾಗತಃ ॥ ೩ ॥
ಬ್ರಹ್ಮಾತ್ಮ ಭೂಸ್ಸುರಜ್ಯೇಷ್ಠೋ ವಿಷ್ಣುರ್ನಾರಾಯಣೋ ಹರಿಃ ॥
ರೇವತೀಶೋ ಹಲೀ ರಾಮಃ ಕಾಮಃ ಪಂಚಶರಸ್ಸ್ಮರಃ ॥ ೪ ॥
* * * * * * * *
ಇತ್ಯಾದಿ ನಾಮಲಿಂಗೋ, ಹಿ ಹರಿರುಕ್ತೋಽನ್ಯಬುದ್ಧಯೇ ॥ ೨೮ ॥

ಮೇಲಿನ ಅಗ್ನಿಪುರಾಣದ ಕೋಶಸ್ವರೂಪವನ್ನು ನೋಡಿದರೆ, ಇದರಲ್ಲಿ ಅಮರ ಕೋಶದಲ್ಲಿರುವ ಮಂಗಳ ಪದ್ಯಗಳೂ, ಸಂಜ್ಞಾ ವಿಷಯವನ್ನು ತಿಳಿಸುವ ಪೀಠಿಕಾ ಪದ್ಯಗಳೂ ಇಲ್ಲ. ಇದಕ್ಕೆ ಪ್ರತಿಯಾಗಿ 'ಹರಿಯೇ ನಾನು ನಿನಗೆ ಸ್ವರ್ಗಾದಿ ನಾಮಲಿಂಗವು ಯಾವುದುಂಟೋ ಅದನ್ನು ಹೇಳುವೆನು' ಎಂದು ಅಗ್ನಿಯು ಹೇಳಿದಂತೆ ಗ್ರಂಥಾರಂಭ ಪೀಠಿಕೆಯಿದೆ. ಇದರಲ್ಲಿ ಅಮರಕೋಶದ 'ನಾಮಲಿಂಗಾನು ಶಾಸನಂ' ಎಂಬ ನಿಜವಾದ ಹೆಸರು ನಾಮಲಿಂಗ ಎಂಬ ಈ ಶಬ್ದದಿಂದ ಈ ಆದಿಶ್ಲೋಕದಲ್ಲಿ ಸೂಚಿತವಾಗಿದೆ, ಅಥವಾ ಅಮರಸಿಂಹನೇ ಈ ಪುರಾಣದ ಆಧಾರದಿಂದ ತನ್ನ ಕೋಶಕ್ಕೆ 'ನಾಮಲಿಂಗಾನುಶಾಸನಂ' ಎಂಬ ಹೆಸರನ್ನು ಕೊಟ್ಟಿದ್ದರೂ ಕೊಟ್ಟಿರಬಹುದು. ಹೀಗೆ ಪೀಠಿಕಾಪ್ರಕರಣವಾದ ಮೇಲೆ ಅಮರಕೋಶದಲ್ಲಿ ಸ್ವರ್ಗದ ಪರ್ಯಾಯಪದಗಳನ್ನು ಹೇಳಿರುವ– "ಸ್ವರವ್ಯಯಂ....ತ್ರಿವಿಷ್ಟಪಂ" ಎಂಬ ಪದ್ಯದ ಪರ್ಯಾಯಪದಗಳೊಳಗೆ ಇಲ್ಲಿ ಆದ್ಯಂತಗಳ ಐದು ಶಬ್ದಗಳನ್ನು ಮಾತ್ರ ಗ್ರಹಿಸಿ

(2) ಇದರಲ್ಲಿ ಒಟ್ಟು (369) ಮುನ್ನೂರರುವತ್ತೊಂಬತ್ತು ಪದ್ಯಗಳಿರುವುವು. ಇದರಲ್ಲಿ ಬುದ್ಧದೇವನ ಹೆಸರಿರುವುದರಿಂದ ಈ ಪುರಾಣವು ಬುದ್ಧ ಮತಸ್ಥಾಪಕನಾದ ಗೌತಮಬುದ್ಧನ ಕಾಲದಿಂದೀಚೆಗೆ ಬರೆದ ಗ್ರಂಥವೆಂದು ಹೇಳಬೇಕಾಗುವುದು. ಆದರೆ ಬುದ್ಧನಲ್ಲಿ ಈಗ ನಮಗೆ ತಿಳಿದು ಬಂದಿರುವ ಬುದ್ಧನಿಗಿಂತಲೂ ಹಿಂದೆ ಹಲವು ಮಂದಿ ಬುದ್ಧರಿದ್ದರೆಂತಲೂ, ಅವರಲ್ಲಿ ಈ ಗೌತಮ ಬುದ್ಧನು ಅರ್ವಾಚೀನನಾದ ಒಬ್ಬನೆಂದೂ, ಬುದ್ಧ ಮತವು ಅನಾದಿಯೆಂದೂ ಕೆಲವರು ಸಮರ್ಥಿಸಿರುವರು. ಈ ಬುದ್ಧನು ವಿಷ್ಣುವಿನ ಹತ್ತು ಅವತಾರಗಳಲ್ಲಿ ಒಂಭತ್ತನೆಯ ಅವತಾರವೆಂದೂ ವೈದಿಕ ಪುರಾಣಗಳಲ್ಲಿ ಸಂಗ್ರಹಿಸಲ್ಪಟ್ಟಿರುವುದು.

"ಮತ್ಸ್ಯಃ ಕೂರ್ಮೋವರಾಹಶ್ಚ ನಾರಸಿಂಹಶ್ಚ ವಾಮನಃ ॥
ರಾಮೋ ರಾಮಶ್ಚ ಕೃಷ್ಣಶ್ಚ ಬುದ್ಧಃ ಕಲ್ಕಿಸ್ತಥೈವ ಚ" ॥

ಇಲ್ಲಿ "ರಾಮೋರಾಮಶ್ಚ ರಾಮಶ್ಚ ಕೃಷ್ಣಃ ಕಲ್ಕಿಸ್ತಥೈವಚ ॥" ಎಂಬ ಪಾಠವೂ ಉಂಟು.

ಉಳಿದ ಶಬ್ದಗಳನ್ನು ಬಿಟ್ಟು ಅರ್ಧ ಶ್ಲೋಕದಲ್ಲಿ ಅಡಗುವಷ್ಟು ಪರಿಮಿತಿಯಲ್ಲಿ ಹೇಳಿದೆ. ಬಳಿಕ ದೇವತೆಗಳ ಹೆಸರನ್ನು ತಿಳಿಸುವ ಮೂರು ಶ್ಲೋಕಗಳಿಗೆ ಪ್ರತಿಯಾಗಿ ಈ ಕೋಶದಲ್ಲಿ ಅರ್ಧ ಶ್ಲೋಕ ಮಾತ್ರವಿದೆ. ಮುಂದೆ ರಾಕ್ಷಸರ ಹೆಸರನ್ನು ಹೇಳದೆ ದೇವಯೋನಿಗಳನ್ನು ತಿಳಿಸುವ "ವಿದ್ಯಾದಾರೋಪ್ಸರೋ" ಎಂಬ ಒಂದು ಶ್ಲೋಕವಿದೆ. ಇದು ಅಮರಕೋಶದಲ್ಲಿರುವಂತೆಯೇ ಸ್ವಲ್ಪವೂ ಮಾರ್ಪಡದಿದ್ದರೂ ಬ್ರಹ್ಮನ ಹೆಸರಿಗಿಂತ ಮೊದಲು ಉಕ್ತವಾಗಿದೆ. ಬಳಿಕ ಅಮರಕೋಶದಲ್ಲಿ ರಾಕ್ಷಸ ಪರ್ಯಾಯ ಶಬ್ದಗಳನ್ನು ಹೇಳಿರುವ ಒಂದು ಪದ್ಯಕ್ಕೆ ಪ್ರತಿಯಾಗಿ ಈ ಕೋಶದಲ್ಲಿ ಅರ್ಧಪದ್ಯ ಮಾತ್ರ ಹೇಳಿದೆ. ಈ ಅರ್ಧದಲ್ಲಿಯೂ ಕೊನೆಯಲ್ಲಿ ಬುದ್ಧನ ಎರಡು ಹೆಸರುಗಳು ಸೇರಿಕೊಂಡಿವೆ. ಬಳಿಕ ಬ್ರಹ್ಮ ಮತ್ತು ನಾರಾಯಣರ ಹೆಸರುಗಳಲ್ಲಿ ಮೂರು ಮೂರು ಹೆಸರುಗಳನ್ನು ಮಾತ್ರವೇ ಒಂದು ಅರ್ಧ ಪದ್ಯದಲ್ಲಿ ಹೇಳಿದೆ. ಈ ಆನುಪೂರ್ವಿಯು ಮಾತ್ರ ಅಮರಕೋಶದಲ್ಲಿರುವಂತೆಯೇ ಇರುವುದು. ಅಮರಕೋಶದಲ್ಲಿಯಾದರೋ ಈ ಎರಡು ಹೆಸರುಗಳ ಪರ್ಯಾಯ ಪದಗಳು ಏಳು (೭) ಪದ್ಯಗಳಲ್ಲಿ ಹೇಳಲ್ಪಟ್ಟಿರುವುವು, ಬಲರಾಮನ ಹೆಸರನ್ನೂ ಮನ್ಮಥನ ಹೆಸರನ್ನೂ ಒಂದು ಪದ್ಯಾರ್ಧಗಳಲ್ಲಿ ಸಂಗ್ರಹಿಸಿ ಹೇಳಿದೆ. ಈ ಮೇಲಿನ ವಿಷಯಗಳನ್ನೆಲ್ಲಾ ಪರ್ಯಾಲೋಚಿಸಿದರೆ ಈ ಪುರಾಣಕೋಶವು ಅಮರಕೋಶದ ಸಂಗ್ರಹವೆಂದು ಹೇಳಲು ಸಾಕಾದಷ್ಟು ಅವಕಾಶವಿರುವುದು.

ಈ ಪುರಾಣ ಕೋಶದಲ್ಲಿ ಎರಡನೆಯದು ಅವ್ಯಯವರ್ಗವು. ಇದರಲ್ಲಿ (೩೮) ಮೂವತ್ತೆಂಟು ಶ್ಲೋಕಗಳಿರುವುವು. ಅಮರಕೋಶದ ಮೂರನೆಯ ಕಾಂಡದ ಅವ್ಯಯವರ್ಗದಲ್ಲಿ ಹೇಳಿರುವ ಶಬ್ದಗಳೇ ಇದರಲ್ಲಿಯೂ ಕಂಡುಬರುವುವು. ಇದರಲ್ಲಿ ಮಾತ್ರಶಬ್ದಗಳ ಸಂಗ್ರಹವು ವಿಶೇಷವಿಲ್ಲ. ತಕ್ಕಷ್ಟು ವಿಸ್ತರವಾಗಿಯೇ ಹೇಳಲ್ಪಟ್ಟಿರುವುದು. ಮೂರನೆಯದು ನಾನಾರ್ಥವರ್ಗವು. ಇದರಲ್ಲಿ ೪೧ ಪದ್ಯಗಳು ಮಾತ್ರವಿರುವುವು. ಆರಂಭವು, 'ಆಕಾಶೇ ತ್ರಿದಿವೇ ನಾಕಃ' ಎಂದು ಅಮರಕೋಶದಲ್ಲಿರುವಂತೆಯೇ ಇದೆ. ನಾಲ್ಕನೆಯದು ಭೂಮಿವನೌಷಧ್ಯಾದಿವರ್ಗವು. ಇದು ಅಮರಕೋಶದ ಎರಡನೆಯ ಕಾಂಡದ ಮೊದಲಿನ ಭಾಗದಲ್ಲಿರುವ ನಾಲ್ಕುವರ್ಗಗಳ ವಿಷಯವನ್ನೊಳಕೊಂಡಿರುವುದು. ಇದರಲ್ಲಿ (೭೮) ಎಪ್ಪತ್ತೆಂಟು ಶ್ಲೋಕಗಳಿವೆ. ಐದನೆಯದು ನೃವರ್ಗವು. ಆದರೆ ಮುದ್ರಿತ ಪುರಾಣದಲ್ಲಿ ನೃ ಬ್ರಹ್ಮಕ್ಷತ್ರವಿಟ್ ಶೂದ್ರವರ್ಗವೆಂದು ಹೇಳಿದೆ. ಇದು ಅಮರಕೋಶದ ಎರಡನೆಯ ಕಾಂಡ ಮನುಷ್ಯವರ್ಗದಲ್ಲಿರುವ ವಿಷಯವನ್ನೊಳಕೊಂಡಿರುವುದು. ಇದರಲ್ಲಿ ಶ್ಲೋಕಗಳು ಇಪ್ಪತ್ತೊಂಬತ್ತು ಮಾತ್ರವೇ. ಆರನೆಯದು ಬ್ರಹ್ಮವರ್ಗವು. ಇದರಲ್ಲಿರುವ ಶ್ಲೋಕಗಳು ೧೧. ಏಳನೆಯದು ಕ್ಷತ್ರವಿಟ್ಶೂದ್ರ ವರ್ಗವು. ಇದರಲ್ಲಿ ಶ್ಲೋಕಗಳು ನಾಲ್ವತ್ತೊಂಬತ್ತು (೪೯) ಇವೆರಡೂ ಅಮರಕೋಶದ ಎರಡನೆಯ ಕಾಂಡದ ಉತ್ತರಾರ್ಧದ ಕ್ಷತ್ರಾದಿ ಮೂರು ವರ್ಗಗಳ ವಿಷಯವನ್ನು ಒಳಕೊಂಡಿರುವುದು. ಅಂತ್ಯದಲ್ಲಿ "ಇತ್ಯಾದಿ ನಾಮಲಿಂಗೋ ಹಿ ಹರಿಹಿರುಕ್ತೋನ್ಯಬುದ್ಧಯೇ" ಎಂದು ಉಪಸಂಹೃತವಾಗಿದೆ. ಅಮರಕೋಶದಲ್ಲಿ ಹೇಳಿರುವ ಲಿಂಗಾದಿ ಸಂಗ್ರಹ ವರ್ಗದ ವಿಷಯವು ಇಲ್ಲಿ ಹೇಳಿಲ್ಲ.

ಮೇಲೆ ಹೇಳಿರುವ ವಿಷಯಪರಾಮರ್ಶದಿಂದ ಈ ಪುರಾಣಕೋಶಕ್ಕೂ ಅಮರಕೋಶಕ್ಕೂ ವರ್ಗವಿಭಾಗಕ್ರಮದ ಆನುಪೂರ್ವಿಯಲ್ಲಿ ವಿಶೇಷ ಭೇದವು ಕಂಡುಬಂದರೂ, ವರ್ಗ ವಿಭಾಗ ಕ್ರಮ, ಶಬ್ದಗಳ ಅನುಪೂರ್ವಿ ಮೊದಲಾದುವುಗಳಲ್ಲಿ ಸಾಮ್ಯವೇ ವಿಶೇಷವಾಗಿ ಕಂಡುಬರುವುದು. ಕೆಲವರು ವಿಮರ್ಶಕರು ಅಮರಕೋಶದಲ್ಲಿರುವಷ್ಟು ಪದಗಳು ಮಾತ್ರ ಈ ಕೋಶದಲ್ಲಿಲ್ಲ. ಈ ಕಾರಣಗಳಿಂದ "ಅಮರಕೋಶದ ಸಂಗ್ರಹರೂಪವಾದ ಈ ಕೋಶವು ಅಗ್ನಿ

ಪುರಾಣದಲ್ಲಿ ಆಧುನಿಕರಿಂದ ಸೇರಿಸಲ್ಪಟ್ಟಿರುವುದು. ಇದರಿಂದಲೇ ಅಗ್ನಿಪುರಾಣವೂ ಕೂಡ ಆಧುನಿಕವು" ಎಂದು ಅಭಿಪ್ರಾಯಪಡುವರು. ನಾವು ಸಕಾರಣವಾಗಿ ವಿಚಾರಮಾಡಿದರೆ–ಇದರಲ್ಲಿ ಹೇಳಿರುವ ವ್ಯಾಕರಣಾದಿ ಮತ್ತಿನ ಶಾಸ್ತ್ರಗಳ ವಿಷಯಗಳಲ್ಲಿ ಆಧುನಿಕಗಳಾದ ತತ್ತಚ್ಛಾಸ್ತ್ರಗಳಲ್ಲಿರುವ ವಿಷಯವೂ, ಅನುಪೂರ್ವಿಯೂ ಇಲ್ಲವಾದುದರಿಂದಲೂ, ಈ ಪುರಾಣವೂ ಕೂಡ ವ್ಯಾಸಮಹರ್ಷಿಕೃತವೇ ಎಂದು ವೈದಿಕರೆಲ್ಲರೂ ಐಕಕಂಠ್ಯದಿಂದ ಒಪ್ಪಿಕೊಂಡಿರುವುದರಿಂದಲೂ ಈ ಕೋಶವು ಅಮರಕೋಶದ ಸಂಗ್ರಹವೆಂದು ಹೇಳುವುದಕ್ಕಿಂತ ಅಮರಕೋಶವು ಇದರ ವಿಸ್ತರರೂಪದ ಕೋಶವೆಂದು ಹೇಳುವುದೇ ಉಚಿತವೆಂದು ತೋರುವುದು. ಆದುದರಿಂದ ಇದರ ಕಾಲವು ಕ್ರಿ. ಪೂ. ಎರಡು ಸಾವಿರ ವರ್ಷಗಳಿಗೆ ಹಿಂದಣದಾಗಿರುವುದು. ಎಂದರೆ ಕಲಿಯುಗದ ಆದಿಯಲ್ಲಿ. ಅನಾದಿಯಾದ ವೈದಿಕ ನಿಘಂಟುವಿಗೂ (ನಿರುಕ್ತಗಳಿಗೂ) ಲೌಕಿಕ ನಿಘಂಟುಗಳಿಗೂನಡುವೆ ಹುಟ್ಟಿದ ಕೋಶವೆಂದು ಹೇಳಲು ಯಾವ ಅಭ್ಯಂತರವೂ ಇರಲಾರದು.

ಇನ್ನು ಲೌಕಿಕನಿಘಂಟುಗಳಲ್ಲಿ ಯಾವುದು ಮೊತ್ತಮೊದಲನೆಯದೆಂದು ನಿರ್ಧರವಾಗಿ ಹೇಳಲು ಸಾಕ್ಷಾತ್ತಾದ ಯಾವ ಸಾಧನಗಳೂ ದೊರಕಲಿಲ್ಲ. ಆದರೆ ಅಮರಕೋಶ (ಆರನೆಯ ಶತಮಾನಕ್ಕೆ ಹಿಂದಣದು) ವ್ಯಾಖ್ಯಾಕಾರರಲ್ಲಿ ಒಬ್ಬನಾದ ಸರ್ವಾನಂದನು ಅಮರಕೋಶದ "ಸಮಾಹೃತ್ಯಾನ್ಯತಂತ್ರಾಣಿ" ಎಂಬ ಶ್ಲೋಕದ ವ್ಯಾಖ್ಯಾನಾವಸರದಲ್ಲಿ "([1]ಅನ್ಯತಂತ್ರಾಣಿ) ವ್ಯಾಡಿ ವರರುಚಿ ಮೊದಲಾದವರ ಕೋಶಗಳನ್ನು (ಸಮಾಹೃತ್ಯ) ಒಟ್ಟುಗೂಡಿಸಿ (ನಾಮಲಿಂಗಾನುಶಾಸನಂ) ನಾಮ ಮತ್ತು ನಾಮಗಳಲಿಂಗ ಇವೆರಡನ್ನೂ ತಿಳಿಸುವ ನಾಮಲಿಂಗಾಶಾಸನಂ ಎಂಬ ಹೆಸರಿನ ಕೋಶವು ಉಚ್ಯತೇ–ಹೇಳಲ್ಪಡುತ್ತದೆ. ಇದು ಸಂಪೂರ್ಣ ಕೋಶವು. ಉಳಿದುವುಗಳು ಅಸಮಗ್ರಗಳು; ಏಕೆಂದರೆ ತ್ರಿಕಾಂಡ ಉತ್ಪಲಿನೀ ಮೊದಲಾದ ಕೋಶಗಳು ಕೇವಲವಾಗಿ ನಾಮಗಳನ್ನು ಮಾತ್ರ ಅನುಶಾಸನಮಾಡುತ್ತವೆ. ವ್ಯಾಡಿವರರುಚ್ಯಾದಿ ಪ್ರಣೀತಗ್ರಂಥಗಳಾದರೋ ಶಬ್ದಗಳ ಕೇವಲಲಿಂಗಗಳನ್ನು ಮಾತ್ರವೇ ಅನುಶಾಸನಮಾಡುತ್ತವೆ. ನನ್ನೀ ಕೋಶವು ನಾಮಲಿಂಗಗಳೆರಡನ್ನೂ ಅನುಶಾಸನಮಾಡುತ್ತದೆ ಎಂಬುದು ಅಮರಸಿಂಹನ ಭಾವವು" ಎಂದು ವ್ಯಾಖ್ಯಾನಿಸಿ ಅಮರಕೋಶಕ್ಕಿಂತ ಹಿಂದೆ ಇದ್ದ [2]ಒಂದೆರಡು ಕೋಶಗಳ ಹೆಸರನ್ನೂ ಕೋಶಕಾರರ ಹೆಸರನ್ನೂ ಹೇಳಿರುವನು. ಮತ್ತೊಂದೆಡೆಯಲ್ಲಿ ಕಾಂಡವಿಭಾಗಕ್ರಮಗಳನ್ನು ವಿವರಿಸುವಾಗ ರತ್ನಕೋಶಾದಿಗಳಂತೆ ಲಿಂಗವನ್ನನುಸರಿಸಿ ಕಾಂಡವಿಭಾಗಕ್ರಮವನ್ನು ಏಕೆ ಮಾಡಲಿಲ್ಲವೆಂದು ಪೂರ್ವಪಕ್ಷಮಾಡಿರುವನು. ಮತ್ತೊಬ್ಬ ಅಮರವ್ಯಾಖ್ಯಾಕರ್ತೃವಾದ ಕ್ಷೀರಸ್ವಾಮಿಯೂ ಕೂಡ ಅಲ್ಲಲ್ಲಿ [3]ಭಾಗುರಿಯನ್ನು–ಅಮರಸಿಂಹನು ಭಾಗುರಿಯ

(1) ಅನ್ಯತಂತ್ರಾಣಿ-ವ್ಯಾಡಿವರರುಚಿ ಪ್ರಭೃತೀನಾಂ ತಂತ್ರಾಣಿ ಸಮಾಹೃತ್ಯ-ಏಕೀಕೃತ್ಯ ಅಏವ ಸಂಪೂರ್ಣಮಿದಂ ತಂತ್ರಂ ತ್ರಿಕಾಂಡೋತ್ಪಲಿನ್ಯಾದೀನಿ ನಾಮಮಾತ್ರತಂತ್ರಾಣಿ, ವ್ಯಾಡಿ ವರರುಚಿಪ್ರಣೀತಾನಿ ತು ಲಿಂಗಮಾತ್ರ ತಂತ್ರಾಣಿ (ಸರ್ವಾನಂದ ವ್ಯಾಖ್ಯಾ 2-1-15)

(2) ಕ್ಷೀರಸ್ವಾಮಿಯು ಈ ಸಂದರ್ಭದಲ್ಲಿ ಅನ್ಯತಂತ್ರಾಣಿ, ಅಭಿಧಾನ ಶಾಸ್ತ್ರಾಣಿ, ಲಿಂಗಾನುಶಾಸನಾನಿ ವಾ ಎಂದು ಹಿಂದಣ ಕೋಶಕಾರರ ಹೆಸರನ್ನು ಹೇಳದಿದ್ದರೂ ಗ್ರಂಥದ ನಡುವೆ ಅಲ್ಲಲ್ಲಿ ಸುಮಾರು 16 ಮಂದಿ ಕೋಶಕಾರರನ್ನೂ, ಆರು ಮಂದಿ ಅಮರ ಟೀಕಾಕಾರರನ್ನೂ ಚರಕಸುಶ್ರುತಾದಿಗಳ ವೈದ್ಯ ಗ್ರಂಥಗಳನ್ನೂ ಉದಾಹರಿಸಿರುವನು.

(3) 'ಬೃಹತೀ ತು ನಿದಿಗ್ಧಿಕಾ' ಇತಿ ಭಾಗುರಿವಾಕ್ಯಾತ್ ಗ್ರಂಥಕೃತ್ (ಅಮರಸಿಂಹ ಇತಿ ಭಾವಃ) ಭ್ರಾಂತಃ, ಯತೋಽನಯೋರ್ಮಹಾನ್ ಭೇದಃ—ಆಹ ಚ—'ಕಂಟಕಾರೀತು ದುಸ್ಸ್ಪರ್ಶಾ ಕ್ಷುದ್ರಾ ವ್ಯಾಘ್ರೀ ನಿದಿಗ್ಧಿಕಾ॥ ಕಂಟಾಲಿಕಾ ಕಂಟಕಾರೀ ಧಾವನೀ ದುಷ್ಪ್ರಧರ್ಷಿಣೀ॥' ಇತಿ, ಯಥಾ—'ಬೃಹತೀಸಿಂಹ್ಯನಾಕ್ರಾಂತಾ ವಾರ್ತಾಕೀ ರಾಷ್ಟ್ರಿಕಾಕುಲೀ ॥ ವಿಶದಾ ಸ್ಥೂಲಭಾಂಡೀರೀ ಮಹತೀ ತು ಮಹೋಟಿಕಾ॥—ಭಾಗುರಿರ್ಹಿ ದ್ವಯೋಃ 'ಬೃತತೀತ್ವಂ' ಮನ್ಯತೇ ಯಚ್ಛಾಶ್ವತಃ, 'ಕ್ಷುದ್ರಾಯಾಂ ಕ್ಷುದ್ರವಾರ್ತಾಯಾಂ ಬೃಹತೀ ಛಂದಸಿ ಕ್ವಚಿತ್' ದ್ವ್ಯರ್ಥೇ ಪ್ರಚೋದನೀ-ಕಂಟಕಾರಿಕಾ ದುರಾಲಭಾ ಚ॥ (ಕ್ಷೀರ-ಪು.೧೦, ೪೯೪)

ವಾಕ್ಯವನ್ನು ಅನ್ಯಥಾ ಗ್ರಹಣಮಾಡಿ ಭ್ರಾಂತನಾಗಿರುವನು ಎಂದೂ, ಪ್ರಮಾಣತ್ವೇನ ವ್ಯಾಡಿಯ ಕೋಶವನ್ನೂ ವಿಶೇಷವಾಗಿ ಉದಾಹರಿಸಿರುವನು. ಅಲ್ಲದೆ ಈತನು [1]ಕಾತ್ಯ ಮೊದಲಾದ ಹದಿನೈದು ಮಂದಿ ನಿಘಂಟುಕಾರರನ್ನೂ, [2]ಉಪಾಧ್ಯಾಯ ಮೊದಲಾದ ಆರು ಮಂದಿ ಅಮರವ್ಯಾಖ್ಯಾಕಾರರನ್ನೂ, [3]ಚರಕಸುಶ್ರುತ ಮೊದಲಾದ ವೈದ್ಯ ಗ್ರಂಥಗಳನ್ನೂ, ಧನ್ವಂತರಿ ನಿಘಂಟು ಮೊದಲಾದ ವೈದ್ಯ ನಿಘಂಟುಗಳನ್ನೂ ಉದಾಹರಿಸಿರುವುದರಿಂದ–ಈ ಕ್ಷೀರಸ್ವಾಮಿಯ ಕಾಲಕ್ಕಿಂತ (ಹದಿಮೂರನೆಯ ಶತಮಾನ) ಹಿಂದೆ ಹಲವು ಲೌಕಿಕ ನಿಘಂಟುಗಳೂ ಇದ್ದುವೆಂದು ತಿಳಿದು ಬರುವುದು. ಕಲ್ಪದ್ರು ಕೋಶಕಾರನಾದ ಕೇಶವನೂ ಕೂಡ–ತನಗಿಂತ ಹಿಂದಣ ಪ್ರಾಚೀನ ಕೋಶಕಾರರನ್ನು–"ಕಾತ್ಯ ವಾಚಸ್ಪತಿ ವ್ಯಾಡಿ ಭಾಗುರ್ಯಮರ ಮಂಕಲಾಃ ॥ ಸಾಹಸಾಂಕ ಮಹೇಶಾದ್ಯಾ ವಿಜಯಂತೇ ಜಿನಾಂತಿಮಾಃ ॥" ಎಂಬ ಪದ್ಯದಲ್ಲಿ ಹೇಳಿರುವನು. ಈ ಪದ್ಯದಲ್ಲಿ ಆಯಾ ಗ್ರಂಥಕರ್ತೃಗಳ ಕಾಲಾನುಕ್ರಮದಲ್ಲಿ ಹೆಸರನ್ನು ಹೇಳಿರುವಂತೆ ತಿಳಿದು ಬರುವುದಿಲ್ಲ. ಕ್ಷೀರಸ್ವಾಮಿಯ ಉಕ್ತಿಯಂತೆ,[4] ವ್ಯಾಡಿ, ಭಾಗುರಿ, ಕಾತ್ಯ (ವರರುಚಿ) ಮಾಲಾಕಾರ, ಕಾಟ್ಯ, ಧನ್ವಂತರಿನಿಘಂಟುಕಾರ ಇವರು ಅಮರಸಿಂಹನಿಗಿಂತ ಹಿಂದಣವರೆಂದೂ, ಶಾಶ್ವತಕಾರನು ಈಚೆಯವನೆಂದೂ ತಿಳಿದುಬರುವುದು.

ಮೇಲೆ ಹೇಳಿರುವ ಲೌಕಿಕ ನಿಘಂಟುಕಾರರೊಳಗೆಲ್ಲಾ ವ್ಯಾಡಿಯೇ ಮೊತ್ತಮೊದಲಿಗನೆಂದು ಊಹಿಸಲು ಅವಕಾಶವುಂಟು. ಇವನನ್ನು ಕ್ಷೀರಸ್ವಾಮಿಯು ಕೋಶಕಾರರ ಹೆಸರುಗಳನ್ನು ಎತ್ತಿ ಹೇಳುವಾಗ ಮುನಿಯೆಂದು ವ್ಯವಹರಿಸಿರುವನು. ಇವನ ಸಂಪೂರ್ಣ

ವ್ಯಾಡಿ ಮತ್ತು ಅವನ ಕೋಶ

ಕೋಶವು ಇದುವರೆಗೂ ಎಲ್ಲಿಯೂ ದೊರೆತಿಲ್ಲ. ವ್ಯಾಖ್ಯಾಕಾರರ ಪ್ರಯೋಗದಲ್ಲಿ ಮಾತ್ರ ಕೆಲವು ವಾಕ್ಯಗಳು ತಿಳಿದುಬರುವುವು. ಪುರುಷೋತ್ತಮನು ತನ್ನ ಹಾರಾವಲಿ ನಿಘಂಟುವಿನಲ್ಲಿ — ಶಬ್ದಾರ್ಣವ, ಉತ್ಪಲಿನಿ, ಸಂಸಾರಾವರ್ತ ಎಂಬ ಕೋಶಗಳು ಕ್ರಮವಾಗಿ ವಾಚಸ್ಪತಿ, ವ್ಯಾಡಿ, ವಿಕ್ರಮಾದಿತ್ಯ ಇವರು ರಚಿಸಿದವರೆಂದು ಹೇಳಿರುವುದರಿಂದ ವ್ಯಾಡಿಯ ಕೋಶವು [5]ಉತ್ಪಲಿನಿ ಎಂದು

---

(1) 1. ಕಾತ್ಯ, 2. ಮುನಿ (ವ್ಯಾಡಿ), 3. ಭಾಗುರಿ, 4. ಮಾಲಾಕಾರ (ಮಾಲಾನಿಘಂಟು), 5. ನಿಘಂಟು (ವೈದಿಕ ನಿಘಂಟು), 6. ಶಾಶ್ವತ, 7. ಅಮರಮಾಲಾ, 8. ನಾಮಮಾಲಾ (ಇವೆರಡೂ ಕೋಶಗಳು), 9. ಅಭಿಧಾನಕಾರ, 10. ಅಭಿಧಾನಶೇಷ, 11. ಅನೇಕಾರ್ಥ, 12. ಶ್ರೀಹರ್ಷ, 13. ದುರ್ಗ, 14. ಭೋಜ, 15. ರುದ್ರ.

(2) ಉಪಾಧ್ಯಾಯ, ಗೌಡ, ಭೋಜ, ಆಚಾರ್ಯ, ನಾರಾಯಣ, ಟೀಕಾಕಾರ.

(3) ಚರಕ, (ವೈದ್ಯ) ಸುಶ್ರುತ, ಧನ್ವಂತರಿ ನಿಘಂಟು, ಬಾಹಟ (ವಾಗ್ಭಟ) ಚಂದ್ರ, ಇಂದು, ಚಂದ್ರನಂದನ, ಧಾತುವಿದರು, ಹರಮೇಖಲಂ.

(4) ಕ್ಷೀರಸ್ವಾಮಿಯು 'ದ್ರಪ್ಸಂ ದಧಿಘನೇತರತ್॥ ೫೧॥' ಎಂಬೀ ಅಮರದ ಪದವನ್ನು ಒಕ್ಕಣಿಸುವಾಗ ದ್ರಪ್ಸಂ, ಘನಾದನ್ಯದಘನಂ ಇತ್ಯರ್ಥಃ, (ಘನೇತರತ್ = ಘನಾತ್+ಇತರತ್) — ಯನ್ಮಾಲಾ 'ದ್ರಪ್ಸಂ ದಧ್ಯಘನಂ ತಥಾ' ಏತಚ್ಚ ದ್ರಪ್ಸಂ ಶರಮಿತಿ ಭಾಗುರಿಪಾಠೇ ಸರಮಿತಿ ಬುದ್ಧ್ವಾಮಾಲಾಕಾರೋಭ್ರಾಂತಃ, ಕೇಚಿತ್ ನಷ್ಟೈಸ್ತು ನಾಶಿತಾಃ ಇತಿ ಆಯಮಪಿ ಮಾಲಾಪಾಠೇನ ವಿಪ್ರಲಬ್ಧಃ. ಯದಾಹ ದುರ್ಗಃ — ಬಾಣದ್ರಪ್ಸೌ ಶರಾವಿತಿ, ಇತ್ಥಂತು ಸಮರ್ಥ್ಯಂ, ತರತ್ — ಉಪರಿ ಪ್ಲವಮಾನಂ, ಘನಂ ದಧಿ ದ್ರಪ್ಸಂ (ದಧಿ ಘನಂ ತರತ್ — ಇತಿ ಸಾಧುಃ ಪಾಠಃ, (ಕ್ಷೀರ — ಪು. ೧೪೮, ಪ. ೫೧) ಮತ್ತು ಗಾಯತ್ರೀ ಬಾಲತನಯಾ — ಎಂಬ ಶ್ಲೋಕದ ವ್ಯಾಖ್ಯಾನಾವಸರದಲ್ಲಿ :ಬಾಲಪತ್ರೋಯವಾಸಃ ಖದಿರಶ್ಚ, ಇತಿ ದ್ವ್ಯರ್ಥೇ ಧನ್ವಂತರಿಪಾಠಮದೃಷ್ಟ್ವಾ ಬಾಲಪುತ್ರ ಭ್ರಾಂತ್ಯಾ ಗ್ರಂಥಕೃತ್ ಬಾಲತನಯಾ ಇತ್ಯಾಹ (ಕ್ಷೀರ — ಪು. ೬೨, ಪ. ೫೧).

(5) ಶಬ್ದಾರ್ಣವ ಉತ್ಪಲಿನೀ ಸಂಸಾರಾವರ್ತ ಇತ್ಯಪಿ ॥ ಕೋಶಾ ವಾಚಸ್ಪತಿ ವ್ಯಾಡಿ ವಿಕ್ರಮಾದಿತ್ಯ ನಿರ್ಮಿತಾಃ ॥

ತಿಳಿದುಬರುವುದು. ಈತನು ಹೇಳಿರುವ ಕ್ರಮದಿಂದಲೇ ಈ ಕವಿಗಳ ಕಾಲಕ್ರಮವೂ ಇರುವುದಾದರೆ ವ್ಯಾಡಿಗಿಂತಲೂ ವಾಚಸ್ಪತಿಯೇ ಮೊದಲನೆಯವನೆಂದು ಹೇಳಬೇಕಾಗುವುದು. ಈ ವಾಚಸ್ಪತಿಯ ಕೋಶವೂ ಪೂರ್ಣವಾಗಿ ದೊರೆತಿಲ್ಲ. ರಾಯಮುಕುಟನು ತನ್ನ ಅಮರ ವ್ಯಾಖ್ಯೆಯಲ್ಲಿ (ಕಾಂ. ೧. ವ. ೧. ಪ. 99)–ಎತ್ತಿ ಹೇಳಿರುವ "ಶೌರಿ ಶ್ರೀವತ್ಸದೈತ್ಯಾರಿ ವಿಷ್ವಕ್ಸೇನಜನಾರ್ದನಾಃ ॥" ಎಂಬೀ ಶ್ಲೋಕಾರ್ಧವು ವಾಚಸ್ಪತಿಕೋಶಕ್ಕೆ ಸೇರಿದುದೆಂದು ರಮಾನಾಥನು ತನ್ನ "ತ್ರಿಕಾಂಡವಿವೇಕ" ಎಂಬ ಗ್ರಂಥದಲ್ಲಿ ಹೇಳಿರುವನು. ಅಮರಚಂದ್ರನು ತನ್ನ ಕಾವ್ಯಕಲ್ಪಲತಾಪರಿಮಳದಲ್ಲಿ ಎರಡಾವರ್ತಿ ಉತ್ಪಲಿನೀ ಕೋಶವನ್ನು ಪ್ರಮಾಣತ್ವೇನ ಉದಾಹರಿಸಿರುವನು. ಆದರೆ ಸರ್ವಾನಂದನೂ ಅವನನ್ನು ಹಿಂಬಾಲಿಸುವ ರಾಯಮುಕುಟನೂ ವ್ಯಾಡಿಯ ಕೋಶಕ್ಕಿಂತಲೂ ಉತ್ಪಲಿನಿಯು ಬೇರೆಯೆಂದೂ ಹೇಳಿರುವರು.[1] (ಉತ್ಪಲಿನಿಯು ಕೇವಲ ನಾಮಮಾತ್ರವನ್ನು ಹೇಳುವ ಕೋಶವೆಂದೂ, ವ್ಯಾಡಿಯ ಕೋಶವು ಕೇವಲ ಲಿಂಗ ಮಾತ್ರವನ್ನು ಹೇಳುವ ಕೋಶವೆಂದೂ ಸರ್ವಾನಂದನ ಹೇಳಿಕೆಯು)- ಇವೆರಡು ವಾಕ್ಯಗಳನ್ನೂ ಪರ್ಯಾಲೋಚಿಸಿದರೆ ವ್ಯಾಡಿಯು ನಾಮಗಳನ್ನು ಹೇಳತಕ್ಕ ಉತ್ಪಲಿನೀ ಎಂಬ ಕೋಶವೊಂದನ್ನೂ, ಲಿಂಗಮಾತ್ರವನ್ನು ಹೇಳುವ ಮತ್ತೊಂದು ಕೋಶವನ್ನೂ ಒಟ್ಟು ಎರಡು ಕೋಶಗಳನ್ನು ಬರೆದಿರಬಹುದೆಂದು ಹೇಳುವುದರಲ್ಲಿ ಭಾದಕವಾವುದೂ ಇಲ್ಲ. ಈತನು ಹೇಳುವ ಚಂದ್ರ, ಕುದುರೆ, ಗಣಗಳು ಮೊದಲಾದ ಪರ್ಯಾಪದಗಳು, ಅಪ್ಸರ ಸ್ತ್ರೀಯರ ಉತ್ಪತ್ತಿ ಮತ್ತು ಇನ್ನೂ ಹಲವು ವಿಷಯಗಳಲ್ಲಿ ಬುದ್ಧಮತದ ಪ್ರಕ್ರಿಯಾನುವಾದವು ಕಂಡುಬರುವುದರಿಂದ ಈತನು ಬುದ್ಧಮತದವನಿರಬಹುದೆಂದು ಊಹಿಸಲು ಅವಕಾಶವಿದ್ದರೂ ಹಲವು ಬಾಹ್ಯ ಸಾಧನಗಳಿಂದ ಈತನು ಸ್ವತಃ ಬುದ್ಧಮತೀಯನಲ್ಲವೆಂದೂ, ಬುದ್ಧಮತೀಯರೊಡನೆ ವಿಶೇಷವಾಗಿ ಪರಿಚಯವನ್ನು ಪಡೆದಿದ್ದವನೆಂದೂ ಇಷ್ಟುಮಾತ್ರ ಹೇಳಬಹುದು. ಇವನ ನಿಘಂಟುವಿನಲ್ಲಿ ಒಂದು ವಿಶೇಷವುಂಟು. ಪದಗಳಿಗೆ ಅರ್ಥವನ್ನು ಹೇಳುವಾಗ ಕೆಲವು ಸಮಯಗಳಲ್ಲಿ [2]ವ್ಯುತ್ಪತ್ತಿ ಪ್ರದರ್ಶನವನ್ನು ಮಾಡಿರುವನಲ್ಲದೆ ಪದಾರ್ಥ ನಿರೂಪಣದಲ್ಲಿ ಭಿನ್ನಾಭಿಪ್ರಾಯವುಳ್ಳ[3] ಇತರ ಶಾಸ್ತ್ರಜ್ಞರ ಮತವನ್ನೂ ಹೇಳಿರುವನು. ಇವನು ಒಂದು ವ್ಯಾಕರಣ ಗ್ರಂಥ ಪ್ರವರ್ತಕನೆಂದೂ ತಿಳಿದುಬರುವುದು. ಇವನ ಕಾಲವು ಕ್ರಿ. ಪೂ. 6ನೆಯ ಶತಮಾನ (ಪಾಣಿನಿಯ ಕಾಲ)ಕ್ಕಿಂತಲೂ ಪೂರ್ವವೆಂದು ಹೇಳಬಹುದು.

ವರರುಚಿಯು ಸಂಸ್ಕೃತದಲ್ಲಿ "ಅಷ್ಟಾಧ್ಯಾಯಿಾ ಸೂತ್ರಪಾಠ"ಗಳೆಂದು ಪ್ರಸಿದ್ಧವಾಗಿರುವ ವ್ಯಾಕರಣ ಶಾಸ್ತ್ರವನ್ನು ಬರೆದಿರುವ ಪಾಣಿನಿಯ (ನು 6 ಶತಮಾನ) ಸಮಕಾಲದವನು. ಈತನು ಪಾಣಿನಿ ಸೂತ್ರಗಳಲ್ಲಿರುವ ನ್ಯೂನಾತಿರೇಕಗಳನ್ನು ಸರಿಪಡಿಸಲು ಸೂತ್ರಗಳಿಗೆ

ವರರುಚಿ ಕಾತ್ಯ, ಕಾತ್ಯಾಯನ

ಸಮಾನವಾಗಿರುವ ವಾರ್ತಿಕಸೂತ್ರಗಳನ್ನು ರಚಿಸಿದ ಪ್ರಸಿದ್ಧ ಪಂಡಿತನು. ಈ ವಾರ್ತಿಕ ಸೂತ್ರಪಾಠವು ಪಾಣಿನಿಸೂತ್ರಗಳಿಗೆ ಅನುಬಂಧಗಳಂತಿರುವುವು. ಇವನಿಗೆ ಕಾತ್ಯಾಯನನೆಂದೂ ಹೆಸರು. ಕಾತ್ಯನೆಂಬ ಸಂಗ್ರಹವಾದ ಹೆಸರೂ ಉಂಟು. ವರರುಚಿಯು ಸಂಪೂರ್ಣವಾದ ಕೋಶವೊಂದನ್ನು ಬರೆಯದೆ ಕೇವಲ

---

(1) ಯತಸ್ತ್ರಿಕಾಂಡೋತ್ಪಲಿನ್ಯಾದೀನಿ ನಾಮಮಾತ್ರತಂತ್ರಾಣಿ, ವ್ಯಾಡಿವರರುಚ್ಯಾದಿಪ್ರಣೀತಾನಿ ತು ಲಿಂಗ ಮಾತ್ರ ತಂತ್ರಾಣಿ — (ಸರ್ವಾ — 4-2-1-15).

(2) ಅರ್ಥಾನ್ನಿಘಂಟಯತ್ಯಸ್ಮಾತ್ ನಿಘಂಟುಃ ಪರಿಕೀರ್ತಿತಃ ।

(3) ಚಂಡಮಾಲಂ ವೃಷಾ ಯುಸ್ಯೇತ್ಯರ್ಥಶ್ಶಬ್ದವಿದಾಂ ಮತಃ ।

GOVERNMENT ORIENTAL ... 20 OCT 1943 TRIPLICANE P.O. MADRAS

“ಲಿಂಗವಿಶೇಷವಿಧಿ” ಎಂಬ ನಾಮುಗಳ ಲಿಂಗವನ್ನು ಮಾತ್ರ ತಿಳಿಸತಕ್ಕ ಗ್ರಂಥವನ್ನು ಬರೆದಿರುವಂತೆ ಸರ್ವಾನಂದನನು ಹೇಳಿರುವನು. ಈಗ ನಮಗೆ ದೂರೆತಿ [1] ರುವ ವರರುಚಿಯ ಕೋಶದಲ್ಲಿ ಕೇವಲ ಲಿಂಗಮಾತ್ರವೇ ಉಕ್ತವಾಗಿದೆ. ಆದರೆ ಕ್ಷೀರಸ್ವಾಮಿಯು ಅಲ್ಲಲ್ಲಿ ಉದಾಹರಿಸಿರುವ ಕಾತ್ಯನ ಕೋಶ ವಾಕ್ಯವನ್ನು ನೋಡಿದರೆ ಅದು ಎಷ್ಟು ಮಾತ್ರಕ್ಕೂ ಲಿಂಗಾನುಶಾಸನವಾಗಿರದೆ [2] ನಾಮುಗಳ ಅನುಶಾಸನವೆಂದೇ ತಿಳಿದುಬರುವುದು. ಈ ಕಾತ್ಯನ ನಿಘಂಟುವಿಗೆ ನಾಮಮಾಲೆಯೆಂಬ ಹೆಸರಿತ್ತೆಂದು [3]ವಾಮನ ಸೂತ್ರದಿಂದ ತಿಳಿದುಬರುವುದು. ಕ್ಷೀರಸ್ವಾಮಿಯು ಕೆಲವೆಡೆಗಳಲ್ಲಿ ಪ್ರಮಾಣವಾಗಿಯೂ ಕೆಲವೆಡೆಗಳಲ್ಲಿ ಪೂರ್ವಪಕ್ಷ ರೂಪದಲ್ಲೂ ಉದಾಹರಿಸಿರುವ ವಾಕ್ಯಗಳಲ್ಲೆಲ್ಲಾ ಕಾತ್ಯನೆಂದೇ ಇರುವುದಲ್ಲದೆ ವರರುಚಿ ಎಂದಿಲ್ಲ. ಆದ ಕಾರಣ ವರರುಚಿಯೂ ಕಾತ್ಯನೂ ಭಿನ್ನರೆಂದು ಹೇಳಲು ಸಾಕಾದಷ್ಟು ಕಾರಣಗಳಿದ್ದರೂ ವರರುಚಿಯೇ ವ್ಯಾಡಿಯಂತೆ ಈ ಎರಡು ಬಗೆಯ ನಿಘಂಟುಗಳನ್ನೂ ಬರೆದಿರಬಹುದೆಂದು ಅಂಗೀಕರಿಸುವುದಾದರೆ ಈ ಭಿನ್ನತ್ವವು ಹೋಗಿ ಐಕ್ಯವು ಏರ್ಪಡುವುದು—ಆದರೆ ಅಮರಕೋಶಕಾರನು ತನ್ನ ಪೂರ್ಣಕೋಶದಲ್ಲಿ [4]ಲಿಂಗಾದಿ ಸಂಗ್ರಹವರ್ಗವೊಂದನ್ನು ಸೇರಿಸಿರುವಂತೆ, ವರರುಚಿಯೂ ತನ್ನ ಸಮಗ್ರಕೋಶದಲ್ಲಿ ಒಂದು ಭಾಗವಾಗಿ ಸೇರಿಸಿದ ಈ ಲಿಂಗವಿಶೇಷವಿಧಿಯು ಲೇಖಕರ ಮತ್ತು ಸಂಗ್ರಾಹಕರ ಇಷ್ಟದಂತೆ ಪ್ರತ್ಯೇಕಿಸಲ್ಪಟ್ಟಿರಬಹುದು ಎಂದೂ ಅಥವಾ ವ್ಯಾಕರಣ ಶಾಸ್ತ್ರಜ್ಞರು “ಲಿಂಗಾನುಶಾಸನ”ವೆಂಬ ಪ್ರಕರಣವನ್ನು ತಂತಮ್ಮ ಬರೆದ ವ್ಯಾಕರಣ ಶಾಸ್ತ್ರಗಳಲ್ಲಿ ಸೇರಿಸಿರುವಂತೆ ಈ ವರರುಚಿಯೂ ವ್ಯಾಕರಣಶಾಸ್ತ್ರವೊಂದನ್ನು ಬರೆದು ಅದರಲ್ಲಿ ಸೇರಿಸಿದ ಶ್ರೀ ಲಿಂಗವಿಶೇಷ ವಿಧಿಯು ಕಾಲಕ್ರಮದಲ್ಲಿ ಬೇರ್ಪಟ್ಟಿರಬಹುದು ಎಂದೂ ಊಹಿಸುವುದು ತಪ್ಪಾಗದೆಂದು ತೋರುವುದು. ಈ ಕಾರಣಗಳಿಂದ ವರರುಚಿ ಅಥವಾ ಕಾತ್ಯನು ನಾಮಮಾತ್ರ ತಂತ್ರವೊಂದು, ಲಿಂಗಮಾತ್ರ ತಂತ್ರವೊಂದು ಇವೆರಡನ್ನೂ ಬರೆದಿರುವನು. ಇವುಗಳಲ್ಲಿ ನಾಮಮಾತ್ರ ತಂತ್ರವು ಪುಸ್ತಕರೂಪದಲ್ಲಿ ಸಂಪೂರ್ಣವಾಗಿ ದೊರಕದೆ ಲಿಂಗಮಾತ್ರ ತಂತ್ರವು ಗ್ರಂಥರೂಪದಲ್ಲಿ ಸಂಪೂರ್ಣವಾಗಿ ದೊರಕಿರುವುದು ಎಂದು ತಿಳಿಯಬರುವುದು.

---

(1) ಈ ಗ್ರಂಥದ ಹಸ್ತಲಿಖಿತಪ್ರತಿಯು ಮದ್ರಾಸ್ ಓರಿಯೆಂಟಲ್ ಲೈಬ್ರರಿಯಲ್ಲಿದೆ. ಇದಕ್ಕೆ ವ್ಯಾಖ್ಯಾನವೂ ಒಂದುಂಟು. ಮೂಲಗ್ರಂಥವು ಶಾಕಟಾಯನ ಮತ್ತು ಹರ್ಷವರ್ಧನರ ಲಿಂಗಾನುಶಾಸನೊಡನೆ ಜರ್ಮನಿಯಲ್ಲಿ 1890ನೆಯ ಇಸವಿಯಲ್ಲಿ Dr. R. Otto-Franke-ಎಂಬವರಿಂದ ಮುದ್ರಿತವಾಗಿದೆ– ವರರುಚಿಯ ಲಿಂಗವಿಶೇಷವಿಧಿಯಲ್ಲಿ ಆರ್ಯಾ ಮತ್ತು ಅನುಷ್ಟುಪ್ ಶ್ಲೋಕಗಳು ೮೦ ಇವೆ.

ಯಾವಾನ್ ಕಶ್ಚಿತ್ತ್ರಾಂತಃ ಶಬ್ದೋಽತ್ರ ನಪುಂಸಕೇ ಹಿ ಬೋದ್ಧವ್ಯಃ ‖
ವರ್ಜಂ ಹಿ ಪುತ್ರಮಂತ್ರಾನ್ಶ್ವಿತ್ರಾನೇವಂ ಗರಿತ್ರಂ ಚ ‖ ೧ ‖
ವಾಗ್ವಿಷಯಸ್ಸ ಚ ಮಹತಃ ಸಂಕ್ಷೇಪಾದೇಷ ವಿಧಿರುಕ್ತಃ ‖
ಯನ್ನೋಕ್ತಮತ್ರ ಸದ್ಭಿಃ ತಲ್ಲೋಕತ ಏವ ಬೋದ್ಧವ್ಯಂ ‖ ೮೦ ‖

ಶಾಕಟಾಯನನು 8ನೆಯ ಶತಮಾನದ ಕೊನೆಯಲ್ಲಿದ್ದವನು. ಹರ್ಷವರ್ಧನನು ಪ್ರಾಯಶಃ 6ನೆಯ ಶತಮಾನದಲ್ಲಿದ್ದು ರತ್ನಾವಳಿ ಮೊದಲಾದ ನಾಟಕತ್ರಯವನ್ನು ಬರೆದಿರುವ ಭರತಖಂಡದ ಚಕ್ರವರ್ತಿಯಾಗಿರಬಹುದು. ಇವನ ಲಿಂಗಾನುಶಾಸನದ ಅಂತ್ಯಶ್ಲೋಕದಿಂದ-‘ವ್ಯಾಡೇಃ ಶಂಕರ ಚಂದ್ರಯೋಃ ವರರುಚೇಃ ವಿದ್ಯಾನಿಧೇಃ ಪಾಣಿನೇಃ ಲಿಂಗಾನಾಮನುಶಾಸನಂ...ವಿಚಾರ್ಯ ಸುಗಮಂ ಶ್ರೀವರ್ಧನಸ್ಯಾತ್ಮಜಃ‖ ...ಹರ್ಷವರ್ಧನ ಇದಂ... ಸೂಕ್ತಾನ್ ಲಿಂಗವಿಧೀನ್ ರಚಿತವಾನ್...... ‖ ೯೬ ‖

(2) ಯತ್ಕಾತ್ಯಃ–ಧನುರ್ವದ್ಯಂತ್ಯಾಜಗವಂ ಪಿನಾಕಿರವಗೋಚರಂ ‖

(3) ಯತ್ಕಾತ್ಯಃ-ನೀವಿ ರಾಗ್ರಂಥನಂನಾರ್ಯಾ ಜಘನಸ್ಥಸ್ಯ ವಾಸಸಃ ‖ ಎಂದು ಕ್ಷೀರಸ್ವಾಮಿಯು (ಪು. 219 213) ಹೇಳಿರುವ ವಾಕ್ಯವನ್ನು ವಾಮನನು ‘ನೀವಿರಾಗ್ರಂಥನಂ ನಾರ್ಯಾಜಘನಸ್ಥಸ್ಯ ವಾಸಸಃ’ ಇತಿ ನಾಮಮಾಲಾ ಪ್ರತೀಕಮುಪಶ್ಯನ್’ ಎಂದು ನಾಮಮಾಲಾ ಗ್ರಂಥಸ್ಥವಾದುದೆಂದು ಹೇಳಿರುವನು.

(4) ವಷ್ಟಿ ವಾಗುರಿರಲ್ಲೋಪಮವಾಪ್ಯೋರುಪಸರ್ಗಯೋಃ ‖
ಆಬಂಚೈವ ಹಲನ್ತಾನಾಂ ಯಥಾ ವಾಚಾ ನಿಶಾ ದಿಶಾ ‖

ಭಾಗುರಿಯು ಕೂಡ ಪ್ರಸಿದ್ಧನಾದ ಒಬ್ಬ ಕೋಶಕರ್ತೃವೇ. ಇವನು ಅಮರಸಿಂಹನಿಗಿಂತಲೂ ಪ್ರಾಚೀನನು. ಇವನ ಕೋಶಕ್ಕೆ‘ತ್ರಿಕಾಂಡ ಕೋಶ’ವೆಂದು ಹೆಸರುಂಟೆಂದು ಆಪರ್ಟ್, ಅವರು ತಮ್ಮ ಕ್ಯಾಟಲಾಗಿನಲ್ಲಿ ಬರೆದಿರುವರು. ಇದಕ್ಕೆ ಆಧಾರವಾವುದೆಂದು ಹೇಳಿಲ್ಲ. ಇದು

ಭಾಗುರಿ ಅವನ ತ್ರಿಕಾಂಡ-ಕೋಶ

ತ್ರಿಕಾಂಡವುಳ್ಳ (ಮೂರು ಕಾಂಡಗಳುಳ್ಳ) ಅಮರಕೋಶಕ್ಕಿಂತ ಭಿನ್ನವಾದುದೆಂಬುದರಲ್ಲಿ ಸಂದೇಹವೇ ಇಲ್ಲ. ಅಮರ ವ್ಯಾಖ್ಯಾಕಾರರಾದ ಸರ್ವಾನಂದ, ರಾಯಮುಕುಟ ಮೊದಲಾದವರು ತ್ರಿಕಾಂಡಕೋಶದ ಸ್ವರೂಪವನ್ನು ಹೇಳಿ ಇದರ ಒಂದೆರಡು ವಾಕ್ಯಗಳನ್ನು ಎತ್ತಿಹೇಳಿರುವರು[1]. ಇವುಗಳಿಗೂ ಕ್ಷೀರಸ್ವಾಮಿ ಮೊದಲಾದವರು ಹೇಳಿರುವ ಭಾಗುರಿ ವಾಕ್ಯಗಳಿಗೂ ವಿಶೇಷ ವ್ಯತ್ಯಾಸವು ಕಂಡುಬರುವುದಿಲ್ಲ. ಅಲ್ಲದೆ ಸರ್ವಾನಂದನು ಹೇಳುವಂತೆ (ತ್ರಿಕಾಂಡ, ಉತ್ಪಲಿನಿ ಮೊದಲಾದುವು, ಲಿಂಗಮಾತ್ರ ತಂತ್ರಗಳು, ತಂತ್ರ=ಪ್ರಧಾನ) ಈ ತ್ರಿಕಾಂಡಕೋಶವು ನಾಮಮಾತ್ರವನ್ನು ತಿಳಿಸುವುದು. ಭಾಗುರಿಯ ಕೋಶವಾಕ್ಯಗಳೂ ನಾಮಮಾತ್ರವನ್ನೇ ಹೇಳುವುವು. ಮತ್ತು ಇವೆರಡೂ ಅನುಷ್ಟುಪ್ ವೃತ್ತದಲ್ಲಿ ಬರೆಯಲ್ಪಟ್ಟಿರುವುವು. ಈ ಸಾಮ್ಯದಿಂದ ಇವೆರಡೂ ಒಂದೇ ಎಂದು ಹೇಳಲು ಯಾವ ಬಾಧಕವೂ ಇಲ್ಲ. ಪುರುಷೋತ್ತಮಕೃತವಾದ ಭಾಷಾವೃತ್ತಿಯೆಂಬ ಪಾಣಿನೀಯಾಷ್ಟಾಧ್ಯಾಯಿಯ ವ್ಯಾಖ್ಯಾನದಲ್ಲಿ ಹೇಳಿರುವ ಶಿವತಾತಿಃ ಶಂತಾತಿಃ, ಅರಿಷ್ಟತಾತಿಃ ಅಮೀ ಶಬ್ದಾಛಾಂದಸಾ ಅಪಿ ಕ್ವಚಿತ್ ಭಾಷಾಯಾಂ ಪ್ರಯುಜ್ಯಂತೇ ಇತಿ ತ್ರಿಕಾಂಡೇ ಭಾಗುರಿನಿಬಂಧನಾದ್ವಾ” ಎಂಬೀ ವಾಕ್ಯವೂ, ಸೃಷ್ಟಿಧರನು ತನ್ನ ಅರ್ಥ ವಿವೃತಿಯಲ್ಲಿ “ತ್ರಿಕಾಂಡೇ ಕೋಶವಿಶೇಷೇ ಭಾಗುರೇರೇವಾಚಾರ್ಯಸ್ಯ ಯದೇಷಾ ನಿಬಂಧನಾ ತಸ್ಮಾಚ್ಚ ಎಂಬೀ ವಾಕ್ಯವೂ ತ್ರಿಕಾಂಡಕೋಶವು ಭಾಗುರಿಕೃತವೆಂದು ಸ್ಪಷ್ಟವಾಗಿ ಹೇಳಿರುವುವು. ಈ ಭಾಗುರಿಯು”ವ್ಯಾಕರಣ ಶಾಸ್ತ್ರವೊಂದನ್ನೂ ಬರೆದಿರುವಂತೆ ತಿಳಿದುಬರುವುದು.

ರತ್ನಕೋಶ

ಸರ್ವಾನಂದನು ಹೇಳುವಂತೆ ರತ್ನಕೋಶವು ಲಿಂಗಗಳನ್ನನುಸರಿಸಿ ಶಬ್ದಗಳನ್ನು ವಿಭಾಗಮಾಡಿ ಹೇಳಿರುವ ಕೋಶವೆಂದು ಕಂಡುಬರುವುದು. ಪರ್ಯಾಯ ಪದಗಳಲ್ಲಿ ಕಂಡುಬರುವ ಭಿನ್ನಲಿಂಗಗಳು ಲಿಂಗಸೂಚಕವಾದ್ ಬೇರೊಂದು ವಿಶೇಷ ಶಬ್ದದಿಂದಾಗಲಿ, ಸ್ವರೂಪದಿಂದಾಗಲಿ ಅಲ್ಲಲ್ಲಿ ಸೂಚಿಸಲ್ಪಟ್ಟಿರುವುವು.

ಮಾಲಾಕೋಶ ಮತ್ತು ಮಾಲಾಕಾರ

ಮಾಲಾ ಕೋಶವನ್ನೂ, ಈ ಕೋಶಕಾರನನ್ನೂ, ಅಮರವ್ಯಾಖ್ಯಾಕರ್ತನಾದ ಕ್ಷೀರಸ್ವಾಮಿಯೂ, ಹೇಮಚಂದ್ರನೂ ಮುಖ್ಯವಾಗಿ ಉದಾಹರಿಸಿರುವರು. ಈ ಮಾಲಾಕೋಶವೇ ಅಮರಮಾಲಾ ಎಂಬ ಕೋಶವೆಂದು ಹೇಳಲು ಆಧಾರಗಳಿರುವುವು — ಸರ್ವಾನಂದನೂ, ರಾಯಮುಕಟನೂ ಅಮರಮಾಲೆಯೆಂದೇ ಉದಾಹರಿಸಿರುವರು; ಈ ಹೆಸರನ್ನೇ ಕ್ಷೀರಸ್ವಾಮಿಯೂ ಹೇಮಚಂದ್ರನೂ ಒಂದೆರಡು ಕಡೆಗಳಲ್ಲಿ ಹೇಳಿರುವರು. ರಾಯಮುಕುಟ[2]ನು ತನ್ನ ವಾಖ್ಯೆಯಲ್ಲಿ (ಕಾಂ. II5-15) ಅಮರಮಾಲೆಯದೆಂದು ಹೇಳಿರುವ ವಾಕ್ಯವನ್ನು [3] ಕ್ಷೀರಸ್ವಾಮಿಯು ತನ್ನ ವ್ಯಾಖ್ಯೆಯಲ್ಲಿ ಮಾಲಾವಾಕ್ಯವೆಂದು ಹೇಳಿರುವನು. ಮತ್ತು ತ್ರಿಕಾಂಡ [4]ಚಿಂತಾಮಣಿಯಲ್ಲಿ

---

(1) ಹ್ರೀರ್ಲಜ್ಜಾ ಪತ್ರಪಾ ವ್ರೀಡಾ ಮಂದಾಕ್ಷಂ ಹಂಡಕೇತ್ರಪಾ ‖ (ತ್ರಿ. ಚಿಂ-51–197)
ವೀರ್ಯಂ ವೀರ್ಯರ್ತಿ ಶಕ್ತಿತಾ (ಪು. 52-204)

(2) ಶ್ಯೇನೌ ಪತ್ರಿ ಶಶಾದನೌ–ಇತ್ಯಮರ ಮಾಲಾ. (II.5-15)

(3) ಮಾಲಾ–ಶ್ಯೇನಃ ಪತ್ರಿಶಶಾದನೌ, (86-1-31)

(4) ವಾನಾ ದ್ವೀಪಂ ಚ ಪುಲಿನಂ. ಇತ್ಯಮರ ಮಾಲಾ, (p.p. 59-23)

ಅಮರಮಾಲೆಯದೆಂದು ಹೇಳಿರುವ ವಾಕ್ಯವನ್ನೂ ಕ್ಷೀರಸ್ವಾಮಿ[1]ಯು ಮಾಲಾ ವಾಕ್ಯವೆಂದೇ ಹೇಳಿರುವನು. ಇದರಿಂದ ಇವೆರಡು ಕೋಶಗಳೂ ಒಂದೇ ಎಂದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ. ಅಮರಮಾಲಾ ಎಂಬುದನ್ನೇ ಸಂಗ್ರಹಕ್ಕಾಗಿ ಮಾಲಾ ಎಂದೂ ವ್ಯವಹಾರಕ್ಕೆ ತಂದಿರಬಹುದು. ಇದರ ಕರ್ತೃವು ಪ್ರಾಯಶಃ ಅಮರದತ್ತನಾಗಿರಬೇಕು. ಈ ಅಮರದತ್ತಕೃತ ವಾದುದರಿಂದಲೇ ಇದಕ್ಕೆ[2] ಅಮರಮಾಲಾ ಎಂಬ ಹೆಸರು ಬಂದಿರುವುದು; ಇವನು ನಾಮಲಿಂಗಾನುಶಾಸನ (ಅಮರಕೋಶ)ವೆಂಬ ಕೋಶ ಕರ್ತೃವಾದ ಅಮರಸಿಂಹನಿಗಿಂತ ಭಿನ್ನನು. ಹಲಾಯುಧನು ತನ್ನ ಕೋಶಕ್ಕೆ ಆಧಾರಭೂತರೆಂದು ಹೇಳುವ ನಾಲ್ವರಲ್ಲಿ ಈ ಅಮರದತ್ತನೂ ಒಬ್ಬನಾಗಿರುವನು[3]. ಮಾಲಾಕೋಶ ಮತ್ತು ಅಮರಮಾಲಾಕೋಶಗಳಲ್ಲಿ ಶಬ್ದಗಳು ಲಿಂಗವನ್ನನುಸರಿಸಿ ವಿಭಾಗಮಾಡಲ್ಪಟ್ಟಿರುವುವು. ಹಲಾಯುಧನು ಹಲವೆಡೆಗಳಲ್ಲಿ ಈ ಮಾಲಾ—ಅಥವಾ ಅಮರಮಾಲೆಯ(ಮಾಲಾ ನಿಘಂಟುವಿನ) ಪಾಠವನ್ನೇ ಸ್ವೀಕರಿಸಿರುವುದರಿಂದ[4] ಆತನು ಹೇಳುವ ಅಮರದತ್ತನು ಈ ಮಾಲಾಕೋಶಕಾರನೇ ಎಂಬ ಅಂಶವು ಬಲಪಡುವುದು; ಕ್ಷೀರಸ್ವಾಮಿಯಾದರೋ ಈ ಮಾಲಾಕಾರನು ಹಳೆಯ ನಿಘಂಟುಗಳನ್ನು ನೋಡಿ ಸರಿಯಾಗಿ ಅರ್ಥಮಾಡಿಕೊಳ್ಳದೆ ಭ್ರಾಂತನಾಗಿರುವನು ಎಂದು ಅಲ್ಲಲ್ಲಿ ಹೇಳುತ್ತಿರುವನು. ಅಮರದ ವ್ಯಾಖ್ಯಾಕರ್ತೃವಾದ ಸುಧಾಕಾರನು, ಕ್ಷೀರಸ್ವಾಮಿಯ ವಾಕ್ಯವನ್ನೂ ತನ್ನ ವ್ಯಾಖ್ಯೆಯಲ್ಲಿ ಅನುವದಿಸುತ್ತಾ ಅವನು ಹೇಳಿರುವ "ಮಾಲಾಕೃತ್" ಎಂಬಲ್ಲಿಯ ಮಾಲಾಶಬ್ದಕ್ಕೆ ನಾಮಮಾಲಾ ಎಂದು ಅರ್ಥಮಾಡಿಕೊಂಡಿರುವನು.

ಹನ್ನೊಂದನೆಯ ಶತಮಾನದಲ್ಲಿದ್ದು ಅಭಿಧಾನ ಚಿಂತಾಮಣಿಯೆಂಬ ಕೋಶವನ್ನು ಬರೆದಿರುವ ಹೇಮಚಂದ್ರನು ಅದರ ವ್ಯಾಖ್ಯೆಯಲ್ಲಿ ವಾಚಸ್ಪತಿಯ ಹೆಸರನ್ನು ಹೇಳಿರುವುದಲ್ಲದೆ

---

(1) ಮಾಲಾ-ವಾನಾ ದ್ವೀಪಂ ಚ ಪುಲಿನಂ-(41-1-16)
ಕಿಣ್ವಂ ಪುಂಸಿ ತು ನಗ್ನಹೂಃ । ನಗ್ನಹುರ್ಮಾಲಾಯಾಂ. (ಕ್ಷೀರ-2-1-34)
ಕ್ಲೀಬೇ ಕಿಣ್ವಂ ಚ ನಗ್ನಹೂಃ ಇತ್ಯಮರಮಾಲಾ ಚ (ಸರ್ವಾ)

(2) ಮಾಲಾಕಾರೋ ಹಿ ಸ್ತ್ರೀಲಿಂಗಾದೀನ್ ಪ್ರಕರಣೈರ್ನಿರದಿಕ್ಷತ್-(ಕ್ಷೀರ-2-1-34) ಮತ್ತು ಇತಿ ಪುಂಸ್ಕಾಂಡೇ ಅಮರಮಾಲಾ, (ರಾಯ II: 5) ಕಂಕತೀ ಚ ಪ್ರಸಾಧನೀ–ಇತಿ ಸ್ತ್ರೀಕಾಂಡೇ ಅಮರಮಾಲಾ

(3) ಇಯಮಮರದತ್ತ ವರರುಚಿ ಭಾಗುರಿ ವೋಪಾಲಿತಾದಿ ಶಾಸ್ತ್ರೇಭ್ಯಃ (ಅಭಿ. ಕಾಂ. I ಪ. ೧)

(4) ಪ್ರಷ್ಠೌಹೀ ಬಾಲಗರ್ಭಿಣೀ–(ಅಮರಕೋಶ)—ಪ್ರಷ್ಠೌಹೀ ಬಾಲಗರ್ಭಿಣೀತಿ ಸರ್ವೇ, ಅಸಿಕ್ನೀ ಬಾಲಗರ್ಭಿಣೀ ಇತಿ ಭಾಗುರಿಃ, ಪಲಿಕ್ನೀ ಬಾಲಗರ್ಭಿಣೀ- ಇತಿ ಮಾಲಾ, (ಕ್ಷೀರ–ಪು–೧೫೧–ಕಾಂ–೨–ವೈಶ್ಯ–೨೦೦ ಹಲಾಯುಧನು—"ಪಲಿಕ್ನೀ ಬಾಲಗರ್ಭಿಣೀ" ಎಂದು ಮಾಲಾ ಪಾಠವನ್ನೇ ಸ್ವೀಕರಿಸಿರುವನು— ಮತ್ತು ಅಮರಸಿಂಹನು-ದ್ರಪ್ಸಂ ದಧ್ಯಘನಂ (ಅಘನಂ-ಘನಾದನ್ಯತ್) (ಯನ್ಮಾಲಾ ದ್ರಪ್ಸಂ ದಧ್ಯಘನಂ ತಥಾ) ಎಂಬ ಮಾಲಾ ಪಾಠವನ್ನು ನೋಡಿ (ಕೇಚಿನ್ನಷ್ಟೈಸ್ತು ನಾಶಿತಾಃ) ಎಂಬ ನ್ಯಾಯದಂತೆ. (ದ್ರಪ್ಸ) ಶರಮಿತಿ ಭಾಗುರಿ ಪಾಠೇ ಸರಮಿತಿ ಬುದ್ಧ್ವಾ ಮಾಲಾಕಾರೋ ಭ್ರಾಂತಃ,—ಅಯಮಪಿ ಮಾಲಾಪಾಠೇನ ಭ್ರಾಂತಃ) ಭಾಗುರಿ ಪಾಠವನ್ನು ನೋಡಿ ಭ್ರಾಂತಿಗೊಂಡ ಮಾಲಾಪಾಠವನ್ನು ನೋಡಿ ಅಮರಸಿಂಹನೂ ಭ್ರಾಂತನಾದನು ಎಂದು ಹೇಳಿರುವನು. (ಕ್ಷೀರ–೧೪೮-III. ೫೧) ಹಲಾಯುಧನು-ದ್ರಪ್ಸಂ ದಧ್ಯಘನಂ ಎಂದು ಮಾಲಾ ಪಾಠವನ್ನೇ ಸ್ವೀಕರಿಸುವನು. (ಇಲ್ಲಿ ಅಮರ ಪಾಠಕ್ಕೆ—ದಧಿಘನೇ-ಮೊಸರಿನ ಘನವಾದ ವಿಭಾಗದಲ್ಲಿ, ತರತ್. ಮೇಲೆ ತೇಲುತ್ತಿರುವ ಭಾಗವು ದ್ರಪ್ಸಂ-ದ್ರಪ್ಸವೆನಿಸಿಕೊಳ್ಳುವುದು ಎಂದು ಬೇರೆ ವಿಧವಾಗಿ ಅರ್ಥ ಮಾಡುವುದು ಉಚಿತವು—ಇತ್ಥಂ ಸಮರ್ಥ್ಯಂ-(ಉಪರಿ ಪ್ಲವಮಾನಂ ಘನಂ ದಧಿ ದ್ರಪ್ಸಂ)

ಇವನ ಕೋಶದಿಂದ ಶಬ್ದಪ್ರಪಂಚಜ್ಞಾನವಾಗುವುದು[1] ಎಂಬ ವಿಶೇಷ ಗುಣವನ್ನೂ ಈ ಗ್ರಂಥಕ್ಕೆ ಹೇಳಿರುವನು. ಈ ಕೋಶವು ಗ್ರಂಥದ ಆಕಾರದಲ್ಲಿ ಪೂರ್ಣವಾಗಿ ಎಲ್ಲಿಯೂ ದೊರಕಿಲ್ಲ. ಇತರ ಕೋಶವ್ಯಾಖ್ಯಾಕಾರರೂ, ಗ್ರಂಥ ವ್ಯಾಖ್ಯಾಕಾರರೂ ಅಲ್ಲಲ್ಲಿ ಹೇಳಿರುವ ಕೆಲವು ವಾಕ್ಯಗಳು ಮಾತ್ರ ದೊರಕುವುವು.

ವಾಚಸ್ಪತಿ-ಅವನ ಶಬ್ದಾರ್ಣವನಿಘಂಟು

ಈ ವಾಕ್ಯಗಳಿಂದ ಈ ಗ್ರಂಥದ ಸ್ವರೂಪವನ್ನು ಹೀಗೆ ಊಹಿಸಬಹುದು. ಇದು ಅನುಷ್ಟುಪ್ ಛಂದಸ್ಸಿನಲ್ಲಿ ಬರೆಯಲ್ಪಟ್ಟಿರುವ ಕೋಶವು, ಇದಕ್ಕೆ ಶಬ್ದಾರ್ಣವವೆಂದು ಹೆಸರು. ಇದರಲ್ಲಿ ಕೊನೆಯ[2] ವ್ಯಂಜನಾಕ್ಷರವನ್ನನುಸರಿಸಿ ಶಬ್ದಗಳನ್ನು(ಪದಗಳನ್ನು) ವಿಂಗಡಿಸಿ ಸಂಗ್ರಹಿಸಿರುವಂತೆ ತೋರುವುದು, ಕೊನೆಯಲ್ಲಿ ನಾನಾರ್ಥ ಶಬ್ದಗಳನ್ನೂ ಸೇರಿಸಿರುವನು, ಮತ್ತು ಶಬ್ದಗಳ ಭಿನ್ನಭಿನ್ನೋಚ್ಚಾರಗಳನ್ನೂ ಅಲ್ಲಲ್ಲಿ ತಿಳಿಸಿರುವನು.

ಧನ್ವಂತರಿ ನಿಘಂಟುವಿನ ಹೆಸರನ್ನು ಕ್ಷೀರಸ್ವಾಮಿಯು ತನ್ನ ಅಮರ ವ್ಯಾಖ್ಯೆಯಲ್ಲಿ ಒಂದೆರಡೆಡೆಗಳಲ್ಲಿ ಎತ್ತಿ ಹೇಳಿರುವನು. ಈ ಕೋಶವು ಮಾತ್ರ ಎಲ್ಲಿಯೂ ದೊರಕಲಿಲ್ಲ. ಇದು ಅಮರಕೋಶಕ್ಕೆ ಹಿಂದಣದೆಂಬುದರಲ್ಲಿ ಸಂದೇಹವಿಲ್ಲ. ಧನ್ವಂತ್ರಿಯೆಂಬುದು ಕೋಶದ

ಧನ್ವಂತರಿ ನಿಘಂಟು

ಹೆಸರೋ? ಕೋಶಕಾರನ ಹೆಸರೋ? ಯಾವುದೆಂದು ನಿರ್ಧರಿಸಲೂ ಆಧಾರವಿಲ್ಲ. ಧನ್ವಂತ್ರಿಯೆಂಬವನು ಮೊತ್ತಮೊದಲಿನ ವೈದ್ಯಶಾಸ್ತ್ರ ಪ್ರವರ್ತಕನು ದಿವ್ಯ ಪುರುಷನು, ಎಂದು ತಿಳಿದುಬರುವುದು. ಆತನ ಹೆಸರಿನ ಈ ಶಬ್ದವು ವನೌಷಧಿವರ್ಗದಲ್ಲಿ ಮಾತ್ರ ಉದ್ಧೃತವಾಗಿರುವುದರಿಂದ ಈ ಕೋಶವು ಒಂದು ವೈದ್ಯ ನಿಘಂಟಾಗಿದ್ದರೂ ಇರಬಹುದು. ಕ್ಷೀರಸ್ವಾಮಿಯು ತನ್ನ ಅಮರವ್ಯಾಖ್ಯೆಯಲ್ಲಿ ಚರಕ, ಸುಶ್ರುತ ಮೊದಲಾದ ವೈದಿಕಮತಾನುಸಾರಿಗಳಾದ ವೈದ್ಯ ಗ್ರಂಥಗಳನ್ನೂ, ವಾಗ್ಭಟ, ಚಂದ್ರ, [3]ನಿಮಿ ಮೊದಲಾದ ಜೈನ ಮತೀಯರಾದ ಭಿಷಗ್ವರರ ಗ್ರಂಥಗಳನ್ನೂ ಅಲ್ಲಲ್ಲಿ ಉದಾಹರಿಸಿರುವಂತೆ ಇದೂ ಧನ್ವಂತರಿಕೃತವಾದ ಒಂದು ವೈದ್ಯ ಗ್ರಂಥವೇ ಏಕೆ ಆಗಿರಬಾರದೆಂದು ಹೇಳಬಹುದಾದರೂ—ಉದಾಹೃತವಾದ

K.392

(1) ಪ್ರಾಮಾಣ್ಯಂ ವಾಸುಕೇರ್ವ್ಯಾಡೇರ್ವ್ಯುತ್ಪತ್ತಿಃ ಧನಪಾಲತಃ ॥
ಪ್ರಪಂಚಶ್ಚ ವಾಚಸ್ಪತಿಪ್ರಭೃತೇರಿಹ ಲಕ್ಷ್ಯತಾಂ॥ (ಅ. ೫. ವ್ಯಾ-ಪು. ೧ ಪ. ೩)

(2) ಅಮರಸಿಂಹನು ತನ್ನ ಕೋಶದ ನಾನಾರ್ಥವರ್ಗದಲ್ಲಿ ಮಾತ್ರ ಈ ಪದ್ಧತಿಯನ್ನನುಸರಿಸಿ, ಕಾಂತ, ಗಾಂತಗಳಾಗಿ ಶಬ್ದಗಳನ್ನು ಸಂಗ್ರಹಿಸಿರುವನು. ಮಲ್ಲಿಕಾ ಶೀತಭೀರುಶ್ಚ ಗವಾಕ್ಷೀ ಭದ್ರಮಲ್ಲಿಕಾ । ಶೀತಭೀರುರ್ಮದಯಂತೀ ಭೂಪದೀ ತೃಣಶೂನ್ಯಕಂ ॥(ರಘುನಾಥ ಚಕ್ರವರ್ತಿ ಅಮರ ವ್ಯಾಖ್ಯಾ- ತ್ರಿಕಾಂಡ ಚಿಂತಾಮಣಿಪು. 150-70)
ಅಪಿ ಗಾಂಧರ್ವಗಂಧರ್ವ ದಿವ್ಯ ಗಾಯನಗಾತವಃ, (ಸರ್ವಾ-ಪು.40-1-6)
ಕೃಷ್ಣಪಾಕಫಲಃ ಕೃಷ್ಣಫಲಪಾಕೋ ವನಾಲಕಃ ॥ ಕೃಷ್ಣಪಾಕಃ ಪಾಕಕೃಷ್ಣಃ ಫಲಕೃಷ್ಣೋ ವನಾಲಯಃ॥
ಪಾಕಕೃಷ್ಣಫಲಃ ಪಾಕಫಲ ಕೃಷ್ಣಕರಾಮ್ಲಕಃ॥ ಫಲಪಾಕಃ ಪಾಕಫಲೋ ಬೋಲಃ ಕೃಷ್ಣಫಲೋರಸಃ॥
(ತ್ರಿಕಾಂ. — ಪು.99-67)
ದಶಪೂರಂ ದಶಪುರಂ ಪ್ಲವನಂ ಜೀವಿತಾಹ್ವಯಂ (ತ್ರಿಕಾಂ—ಪು. 113-130)
ಕೋಷೋ ದಿವ್ಯಧನೇಽ ಪಿಸ್ಯಾತ್ ಕುಟ್ಮಲಾಸಿಪಿಧಾನಯೋಃ॥
ಪನಸಾದಿಫಲಸ್ಯಾಂತಃ ಕೋಷಃ ಶಬ್ದಸ್ಯಸಂಗ್ರಹಃ॥ ಇತಿ ಮೂರ್ಧನ್ಯಾಂತೇ ಶಬ್ದಾರ್ಣವಃ(ತ್ರಿಕಾಂ–64-39)
ಬಾಲಪತ್ರೋಽಯವಾಸಃ ಖದಿರಶ್ಚೇತಿ ದ್ವ್ಯರ್ಥೇಷು ಧನ್ವಂತರಿಪಾಠಂ ತತ್ವತೋಽದೃಷ್ಟ್ವಾ ಬಾಲಪುತ್ರ ಭ್ರಾಂತ್ಯಾ ಗ್ರಂಥಕೃತ್ (ಬಾಲಪುತ್ರಾಂ ಬಾಲತನಯಾಮಾಹ (ಅಮರ-ವನೌಷಧಿ-ಪು. 62-1-17)

(3) ನಿಮಿ ಎಂಬ ಹೆಸರು ತಿಮಿ ಎಂದಿರಬಹುದೇನೋ ಎಂಬ ಸಂದೇಹಕ್ಕೆ ಆಸ್ಪದವಾಗಿದೆ. 'ತಿಮಿರಸ್ತಕಾಲೇ ಎಂದು ಯಶಸ್ತಿಲಕ ಚಂಪುವಿನಲ್ಲಿ ತಿಮಿಯೆಂಬುವನೊಬ್ಬ ವೈದ್ಯನೆಂದು ಹೇಳಿರುವನು. ಹಾಗಲ್ಲದಿದ್ದರೆ ಆ ಗ್ರಂಥದಲ್ಲಿಯೇ ನಿಮಿಯೆಂಬುದು ತಿಮಿಯೆಂದು ಮುದ್ರಿತವಾಗಿರುವುದೆಂದು ಹೇಳಬೇಕಾಗುವುದು.

ವಾಕ್ಯಸ್ವರೂಪವು ವೈದ್ಯಗ್ರಂಥದ ಸ್ವರೂಪದಲ್ಲಿರದೆ ನಿಘಂಟುವಿನ ರೂಪದಲ್ಲಿರುವುದರಿಂದ ಇದೊಂದು ವೈದ್ಯ ನಿಘಂಟು ಎಂದು ಹೇಳುವುದರಲ್ಲಿ ಯಾವ ಅನುಪಪತ್ತಿಯೂ ಇರಲಾರದು.

ಅಮರಸಿಂಹನ ನಾಮಲಿಂಗಾನುಶಾಸನ ಅಥವಾ ಅಮರಕೋಶ

ಕೋಶಗಳೊಳಗೆಲ್ಲಾ ಅಮರಸಿಂಹಕೃತವಾದ ನಾಮಲಿಂಗಾನುಶಾಸನವೆಂಬ ಕೋಶವೇ ಆಸೇತು ಹಿಮಾಚಲವಾದ ಭರತಖಂಡದಲ್ಲಿ ಮಾತ್ರವೇ ಅಲ್ಲ ಎಲ್ಲಾ ಪಾಶ್ಚಾತ್ಯದೇಶಗಳಲ್ಲಿಯೂ ಜಾತಿ ಮತದೇಶ ಮೊದಲಾದ ಭಿನ್ನಭಾವನೆಗಳನ್ನಳಿದು ಪ್ರತಿಯೊಬ್ಬ ಸಂಸ್ಕೃತ ಭಾಷಾಭ್ಯಾಸಿಯಿಂದಲೂ ಪರಿಗೃಹೀತವಾಗಿರುವ ಪ್ರಸಿದ್ಧ ಕೋಶವಾಗಿರುವುದು, ಇದರ ಅಸದೃಶವಾಗಿರುವ ಗುಣಗಳೇ ಇದರ ಪ್ರಸಿದ್ಧಿಗೆ ಕಾರಣಭೂತವಾಗಿರುವುವು. ಈ ಕೋಶದಲ್ಲಿ ಸಂಸ್ಕೃತ ನಾಟಕಾದಿ ಕಾವ್ಯಗಳಲ್ಲಿ ಪ್ರಯುಕ್ತವಾಗಿರುವ ಮುಕ್ಕಾಲು ಮೂರು ವೀಸೆಯ [1]ಪದಗಳೆಲ್ಲಾ ದೊರಕುವುವು. ಈ ಕೋಶಕ್ಕೆ ಹಿಂದೆಯಿದ್ದ ತ್ರಿಕಾಂಡ, ಉತ್ಪಲಿನೀ ಮೊದಲಾದ ಕೋಶಗಳು ಕೇವಲ ನಾಮಗಳನ್ನುಮಾತ್ರ ಒಳಕೊಂಡಿರುವುವು. ವ್ಯಾಡಿವರರುಚಿ ಮೊದಲಾದವರ ಮತ್ತೆ ಕೆಲವು ಕೋಶಗಳು ಮುಖ್ಯವಾಗಿ ನಾಮಗಳ ಲಿಂಗಗಳನ್ನು ಮಾತ್ರವೇ ಪ್ರತಿಪಾದಿಸತಕ್ಕವುಗಳಾಗಿರುವುವು. ಈ ಕೋಶವಾದರೋ ನಾಮಮತ್ತು ಲಿಂಗ ಇವೆರಡು ವಿಷಯಗಳನ್ನೂ ಒಳಕೊಂಡಿರುವುದಲ್ಲದೆ, ಕಾಂಡ ಮತ್ತು ವರ್ಗ ವಿಭಾಗ ಕ್ರಮಗಳಲ್ಲಿಯೂ ತುಂಬಾ ಸೌಕರ್ಯವುಳ್ಳದಾಗಿ ನಾಮಲಿಂಗಾನುಶಾಸನವೆಂಬ ತನ್ನ ಹೆಸರನ್ನು ಅನ್ವರ್ಥ ಮಾಡಿಕೊಂಡಿರುವುದು. ಈ ಗುಣ ವಿಶೇಷದಿಂದಲೇ ಈ ಕೋಶವು ಮತ್ತಿನ ಕೋಶಗಳ ವ್ಯವಹಾರವನ್ನೆಲ್ಲಾ ಹಿಂದಿಕ್ಕಿ ತಾನೇ ತಾನಾಗಿ ಎಲ್ಲೆಲ್ಲಿಯೂ ಹರಡಿಕೊಂಡಿರುವುದಲ್ಲದೆ ಮತ ವೈಷಮ್ಯವನ್ನೂ ದೂರಮಾಡಿಸಿರುವುದು ಇದರ ಮತ್ತೊಂದು ಅನ್ಯಾದೃಶವಾದ ಗುಣವಿಶೇಷವು. ಬುದ್ಧ ಮತದವನಾದ ಅಮರಸಿಂಹನಿಂದ ಬರೆಯಲ್ಪಟ್ಟ ಈ ಕೋಶಕ್ಕೆ ವೈದಿಕ ಮತೀಯರಾದ ಕ್ಷೀರಸ್ವಾಮಿ, ಮಲ್ಲಿನಾಥ (ಇವರ ವ್ಯಾಖ್ಯೆಗೆ ಅಮರಪದಪಾರಿಜಾತ ಎಂದು ಹೆಸರು) ಮೊದಲಾದವರೂ, ಬುದ್ಧ ಮತದವನಾದ ಸುಭೂತಿಚಂದ್ರ, ಜೈನಮತದ ನಾಚಿರಾಜ, ಅಶಾಧರ ಇವರೂ ಇದಕ್ಕೆ ವ್ಯಾಖ್ಯಾನಗಳನ್ನು ಬರೆದಿರುವರು. ಈ ಕೋಶಕ್ಕೆ ದ್ರಾವಿಡ ಭಾಷೆಗಳಲ್ಲೆಲ್ಲಾ ಟೀಕೆಯು ದೊರಕುವುದು. ಇದರ ಕನ್ನಡ ಟೀಕೆಗೆ "ಲಿಂಗಾಂಭಟ್ಟೀಯ"ವೆಂದು ಹೆಸರು ರೂಢಿಯಲ್ಲಿರುವುದು—ಅಲ್ಲದೆ ಇದು ಚೀನ ಭಾಷೆ, ಟಿಬೆಟಿಯರ್ ಭಾಷೆಗಳಲ್ಲಿಯೂ ಪರಿವರ್ತಿಸಲ್ಪಟ್ಟಿರುವುದೆಂದು ಈಗ ತಾನೇ ತಿಳಿದುಬಂದಿರುವುದು.

ಈ ಕೋಶದ ಮುಖ್ಯ ವಿಭಾಗಗಳಿಗೆ ಕಾಂಡಗಳೆಂದು ಸಂಜ್ಞೆಯು, ಇಂತಹ ಕಾಂಡಗಳು ಮೂರಿವೆ. ಅವುಗಳಿಗೆ ವಿಶೇಷವಾದ ಸಂಜ್ಞೆಯಿಲ್ಲ. ಒಂದನೆಯ ಕಾಂಡ, ಎರಡನೆಯ ಕಾಂಡ, ಮೂರನೆಯ ಕಾಂಡ ಎಂದು ಸಂಖ್ಯಾ ವಿಶಿಷ್ಟವಾದ ಸಾಮಾನ್ಯ ಸಂಜ್ಞೆಯು

---

(1) ಕಿರಾತ_ರತ್ನಾವಳೀನಾಟಕೆ ಪಂಪಾದಿ ಕರ್ಣಾಟಕ ಪ್ರಾಚೀನ ಪ್ರಸಿದ್ಧ ಕವಿಗಳ ಕಾವ್ಯಗಳು ಇವುಗಳಲ್ಲಿ ಪ್ರಯುಕ್ತವಾಗಿರುವ ಕುಳ್ಳರ ವಿಶೇಷವನ್ನು ಹೇಳುವ ಕಿರಾತವೆಂಬ ಪದವು ಅಮರಕೋಶದಲ್ಲಿ ದೊರಕುವುದಿಲ್ಲ. ಹೀಗೆಯೇ ಕಾಳಿದಾಸ, ಮಾಘ ಮೊದಲಾದ ಸಂಸ್ಕೃತಕವಿಗಳ ಕಾವ್ಯಗಳಲ್ಲಿಪ್ರಯುಕ್ತರಾಗಿರುವ ಕೆಲವು ಪದಗಳೂ ಅಮರಕೋಶದಲ್ಲಿ ಕಂಡುಬರುವುದಿಲ್ಲ. ಇಂತಹ ಹಲವು ಪದಗಳು ಹಲಾಯುಧ ಕೋಶದಲ್ಲಿ ದೊರಕುವುದು — ಉದಾ- (1) ಕಲ್ಯಾಣ ಭೂಧರ ಮಾದರಾರ್ (ಚಂಪೂರಾಮಾ ೪) ರಾಪಿ ಕಲ್ಯಾಣಂ ನಿಷ್ಕಮಷ್ಟಾಪದಂ ಚ॥ ಅಭಿ- ಕಾಂ.- ಪ.೧೯) ಪ್ರಶ್ನಿರಲ್ಪತನುಃ ಪ್ರೋಕ್ತಃ ಕಿರಾತಸ್ಸ ಚ (ಅಭಿ) ,,,ರೇಣೂತ್ತಮಾಂಗಂ ತವಂಗಂ (ಅರ್ಧನೇಮಿ_೭-೬೩) ಇಂದ್ರಕೋಶ ಸ್ತವಂಗಸ್ಸ್ಯಾತ್ (ಭೂ_೧೩೭)

ಮಾತ್ರವೇ ಇರುವುದು. ಕಾಂಡಗಳ ಅವಾಂತರ ಭೇದಗಳಿಗೆ ವರ್ಗಗಳೆಂದು ಹೆಸರು. ಮೊದಲನೆಯ ಕಾಂಡದಲ್ಲಿ ಸ್ವರ್ಗ ವರ್ಗವೆಂಬುದು ಆದಿಯಾಗಿ ವಾರಿ ವರ್ಗದ ವರೆಗೆ ಹನ್ನೆರಡು ವರ್ಗಗಳುಂಟು. ಇದರಲ್ಲಿ [1]ಸ್ವರ್ಗ ಮತ್ತು ಪಾತಾಳ ಲೋಕಗಳಿಗೆ ಸಂಬಂಧಪಟ್ಟ ಚೇತನಾಚೇತನ ಪ್ರಾಣಿವಾಚಕಗಳಾದ ಶಬ್ದಗಳೆಲ್ಲವೂ ಉಕ್ತವಾಗಿವೆ. ದಿಕ್ಕು, ಕಾಲ, ಬುದ್ಧಿ ವಾಕ್ಕು, ಶಬ್ದ, ನಾಟ್ಯ (ಆಪ್ಸರ ಸ್ತ್ರೀಯರು, ಮುಖ್ಯ ಶಿಲ್ಪ) ಇವೆಲ್ಲವೂ ಸ್ವರ್ಗಕ್ಕೆ ಸೇರಿದುವೆಂದೂ, ನರಕ, ಹಾವು, ನೀರು ಇವುಗಳು ಪಾತಾಳಲೋಕಕ್ಕೆ ಸಂಬಂಧಪಟ್ಟವುಗಳೆಂದೂ ಇಲ್ಲಿ ಸಂಗ್ರಹೀತವಾಗಿದೆ. ಇನ್ನು ಎರಡನೆಯ ಕಾಂಡದಲ್ಲಿ ಭೂವರ್ಗ ಮೊದಲಾಗಿ ಶೂದ್ರವರ್ಗದ ವರೆಗೆ [2] ಹತ್ತು ವರ್ಗಗಳಿರುವುವು. ಇದರಲ್ಲಿ ಭೂಮಿ ಮತ್ತು ಭೂಮಿಗೆ ಸಂಬಂಧಪಟ್ಟ (ಎಂದರೆ ನಗರ, ಬೆಟ್ಟ, ಅರಣ್ಯ, ಮೃಗ, ಬ್ರಹ್ಮ ಮೊದಲಾದ ನಾಲ್ಕು ವರ್ಣಗಳು) ಚೇತನಾಚೇತನ ವಸ್ತು ವಾಚಕ ಶಬ್ದಗಳೆಲ್ಲವೂ ಸಂಗ್ರಹಿಸಲ್ಪಟ್ಟಿರುವವು. ಮೂರನೆಯ ಕಾಂಡದಲ್ಲಿ[3] (ಸಾಮಾನ್ಯ ಕಾಂಡ) ವಿಶೇಷ್ಯ ನಿಘ್ನ ಮೊದಲಾದ ಐದು ವರ್ಗಗಳಿರುವುವು. ಇವುಗಳಲ್ಲಿ ವಿಶೇಷ್ಯ ಪದಗಳು, ಮಿಶ್ರಗಳು (ಕೃದಂತ ತದ್ಧಿತಾಂತ ಮೊದಲಾದುವು) ನಾನಾರ್ಥಗಳುಳ್ಳ ಪದಗಳು, ಅವ್ಯಯಗಳು ಸಂಗ್ರಹಿಸಲ್ಪಟ್ಟಿರುವುದಲ್ಲದೆ ಅಂತ್ಯದಲ್ಲಿ ಶಬ್ದಗಳ ಲಿಂಗವನ್ನು ನಿರ್ಣಯವಾಗಿ ತಿಳಿಸತಕ್ಕ ವಿಧಾನವುಳ್ಳ ಲಿಂಗಾದಿ ಸಂಗ್ರಹವರ್ಗವೂ ಹೇಳಿದೆ.

ಈ ಕೋಶವನ್ನು ಬರೆದವನು ಅಮರಸಿಂಹನು; ಈತನು ವಿಕ್ರಮಾದಿತ್ಯನ ಆಸ್ಥಾನದ ನವಮಣಿಗಳೆಂದು ಪ್ರಸಿದ್ಧರಾದ [4]ಒಂಭತ್ತು ಮಂದಿಗಳಲ್ಲಿ ಒಬ್ಬನೆಂದು ಗುರ್ತಿಸಲ್ಪಟ್ಟಿರುವನು. ಇವನು ಬುದ್ಧಮತಕ್ಕೆ ಸೇರಿದವನೆಂದು ಇದರ ವ್ಯಾಖ್ಯಾಕಾರರೆಲ್ಲರೂ ಹೇಳಿರುವರು. ಇದು ಇವನ ಮಂಗಳ ಶ್ಲೋಕದಿಂದಲೂ, ದೇವರ ಹೆಸರನ್ನು ಹೇಳುವಾಗ ಬುದ್ಧನ ಹೆಸರನ್ನು ಮೊದಲಲ್ಲಿ ಹೇಳಿ ಬಳಿಕ ಬ್ರಹ್ಮ ವಿಷ್ಣು ಮಹೇಶ್ವರರೆಂಬ ವೈದಿಕ ಮತದ ದೇವರ ಹೆಸರನ್ನು ಹೇಳಿರುವುದರಿಂದಲೂ ಸೂಚಿತವಾಗುವುದು. ಅಲ್ಲದೆ ದೇವರ ಉತ್ಪತ್ತಿಯನ್ನು ಹೇಳುವಾಗ "ದಿವ್ಯೋಪಪಾದುಕಾ ದೇವಾಃ" ಎಂದು ಜಿನಮತದ ಸಂಪ್ರದಾಯವನ್ನೂ ಸೂಚಿಸಿರುವನು. ಜಿನಮತದಲ್ಲಿ ಈ ಲೋಕದೊಳಗೆ ದೇವತ್ವವನ್ನು ಪಡೆಯುವ ಪುಣ್ಯವನ್ನು ಮಾಡಿದವನು–ಕಲ್ಪಗಳೆಂದು ಹೇಳಲ್ಪಡುವ ಹದಿನಾರು ಸ್ವರ್ಗಲೋಕಗಳಲ್ಲಿ ಇವನಿಗಾಗಿ ಸಿದ್ಧವಾಗಿರುವ ಒಂದು ಭವನದ ಒಂದು ಕೋಣೆಯಲ್ಲಿ ಹಾಸಿರುವ ಉಪಪಾತ (ದೇವನಾಗತಕ್ಕವನು ಹೋಗಿ ಹತ್ತಿರದಲ್ಲಿ ಬೀಳುವ ಹಾಸುಗೆ) ತಲ್ಪದ ಮೇಲೆ ಈ ಭೂಮಿಯಲ್ಲಿ

---

(1) ಉಕ್ತಂ—ಸ್ವರ್ವ್ಯೋಮದಿಕ್ಕಾಲ ಧೀವಾಕ್ ಶಬ್ದಾದಿನಾಟ್ಯಕಂ॥
ಪಾತಾಳಭೋಗಿನರಕವಾರಿ ಚೈ ಷಾಂ ಚ ಸಂಗತಂ॥

(2) ವರ್ಗಾಃ ಪೃಥ್ವೀ ಪುರಕ್ಷ್ಮಾಭೃದ್ವನೌಷಧಿಮೃಗಾದಿಭಿಃ ॥
ನೃಬ್ರಹ್ಮಕ್ಷತ್ರವಿಟ್ ಶೂದ್ರೈಃ ಸಾಂಗೋಪಾಂಗೈರಿಹೋದಿತಾಃ॥

(3) ವಿಶೇಷ್ಯನಿಘ್ನೈಸ್ಸಂಕೀರ್ಣೈರ್ನಾನಾರ್ಥೈರವ್ಯಯೈರಪಿ ॥
ಲಿಂಗಾದಿಸಂಗ್ರಹೈರ್ವರ್ಗಾ ಸಾಮಾನ್ಯೇ ವರ್ಗಸಂಶ್ರಯಾಃ ॥

1 2 3 4 5 6 7
(4) ಧನ್ವಂತರಿ ಕ್ಷಪಣಕಾಮರಸಿಂಹ ಶಂಕು ವೇತಾಳಭಟ್ಟ ಘಟಕರ್ಪರ ಕಾಳಿದಾಸಾಃ ॥
8 9
ಖ್ಯಾತೋ ವರಾಹಮಿಹಿರೋ ನೃಪತೇಸ್ಸಭಯಾಂ ರತ್ನಾನಿ ವೈ ವರರುಚಿರ್ನವ ವಿಕ್ರಮಸ್ಯ ॥
(ಜ್ಯೋತಿರ್ವಿದಾಭರಣಂ — ಕೊನೆಯ ಪದ್ಯ)

ದೇಹವನ್ನುತ್ಯಾಗಮಾಡಿದ ಉತ್ತರ ಕ್ಷಣದಲ್ಲಿಯೇ ಕಾಣಿಸಿಕೊಳ್ಳುವನು-ಎಂದು ದೇವರಿಗೆ ಉಪಪಾತ ತಲ್ಪವೇ ಉತ್ಪತ್ತಿ ಸ್ಥಾನವೆಂದು ಹೇಳಿರುವ ಸಂಪ್ರದಾಯವನ್ನು ಅನುಸರಿಸಿ "ದಿವ್ಯೋಪಪಾತು(ದು)ಕಾ" ಎಂದು ಹೇಳಿರುವನೆಂದು ತಿಳಿದುಬರುವುದು. ಭರತಖಂಡದಲ್ಲಿ ಕೆಲವು ಕಾಲದ ಹಿಂದೆ ಹರಡಿದ್ದ ವೇದಬಾಹ್ಯಗಳಾದ ಮತಗಳಲ್ಲಿ ಬುದ್ಧಮತವೆಂದೂ, ಜೈನಮತವೆಂದೂ ಎರಡು ಮತಗಳು ಮುಖ್ಯವಾಗಿದ್ದುವು. ಈ ಮತಗಳ ಉದ್ಧಾರಕರಾದ (ಸಂಸ್ಥಾಪಕರಾದ) ಅರ್ಹಂತನೂ, ಬುದ್ಧದೇವನೂ ಭಿನ್ನರು ಮತ್ತು ಸಮಕಾಲಿಕರು. ಇವೆರಡುಮತಕ್ಕೂ ತುಂಬಾ ಅಂತರವುಂಟು. ವೈದಿಕ ಮತಾನುಯಾಯಿಗಳು ವೇದಬಾಹ್ಯಗಳಾದುದರಿಂದ ಇವೆರಡು ಮತಗಳನ್ನೂ ಒಂದೇ ಎಂದು ಭಾವಿಸಿದಂತೆ ತಿಳಿದುಬರುತ್ತದೆ. ಆದರೆ ಈ ಅಮರಸಿಂಹನು ಜೈನಮತೀಯನೇ? ಅಥವಾ ಬುದ್ಧಮತೀಯನೇ? ಎಂಬುದನ್ನು ಈ ಕಾರಣಗಳಿಂದ ನಿಷ್ಕೃಷ್ಟವಾಗಿ ತಿಳಿಯಬಹುದು. ಜೈನಮತದಲ್ಲಿ ಮುಖ್ಯ ದೈವವು ಅರ್ಹಂತನು. ಮನ್ಮಥನನ್ನು ಜಯಿಸಿರುವುದರಿಂದ ಇವನಿಗೆಜಿನನೆಂಬ ಹೆಸರೂ ರೂಢಿಯಾಗಿಯಿರುವುದು. ಈತನು ಕೇವಲ ಜ್ಞಾನದಿಂದ ಈ ತ್ರಿಲೋಕಜ್ಞಾನವನ್ನು ಕರತಲಾಮಲಕವಾಗಿ ತಿಳಿಯುವುದರಿಂದ ಸರ್ವಜ್ಞನು, ಬುದ್ಧನು, ಎಂದೂ ವ್ಯವಹರಿಸಲ್ಪಡುವನು. ಹೀಗೆಯೇ ಬುದ್ಧಿಮತೀಯರ ಮುಖ್ಯ ದೈವವು ಬುದ್ಧನು. (ಶಾಕ್ಯದೇವ-ಸರ್ವಾರ್ಥಸಿದ್ಧನು) ಅವನೂ ಮನ್ಮಥನನ್ನು ಜಯಿಸಿರುವುದರಿಂದ ಜಿನನೆಂದು ವ್ಯವಹರಿಸಲ್ಪಡುವನು. ಜ್ಞಾನಸ್ವರೂಪನಾದುದರಿಂದ ಸರ್ವಜ್ಞನು ಎಂದೂ ವ್ಯವಹರಿಸಲ್ಪಡುವನು. ಈ ಹೆಸರುಗಳ ವಿಷಯದಲ್ಲಿ ಉಭಯಮತೀಯರಿಗೂ ಭೇದವನ್ನು ಹೇಳಲು ಶಕ್ಯವಿಲ್ಲ. ನಾಗಾನಂದ ನಾಟಕದ ನಾಂದೀ ಪದ್ಯದಲ್ಲಿ—"ಬುದ್ಧೋಜಿನಃ ಪಾತುವಃ" ಎಂದು ಬುದ್ಧನೂ ಜಿನನೂ ಒಂದೇ ಎಂದು ವ್ಯವಹರಿಸಲ್ಪಟ್ಟಿದೆ. ಯಾವನು ಜ್ಞಾನ ದಯೆಗಳಿಗೆ ಸಮುದ್ರಪ್ರಾಯನೋ ಎಂದು ತನ್ನಿಂದು ಪಾಸ್ಯವಾದ ದೈವವು ಜ್ಞಾನರೂಪವೂ ದಯಾಮಯವೂ ಆಗಿರುವುದೆಂದು ಹೇಳಿ ಈ ಗ್ರಂಥದ ಮಂಗಳಪದ್ಯದಲ್ಲಿ ನಿಬದ್ಧವಾಗಿರುವ ವಿಷಯವು ಕೂಡ ಬುದ್ಧಜಿನಮತಗಳೆರಡಕ್ಕೂ ಸಾಮಾನ್ಯವಾಗಿಯೇ ಇರುವುದು. ಆದರೆ ಜೀವನಿಗೆ ಕರ್ಮಾನುಗುಣವಾದ ಪಾಪಪುಣ್ಯಗಳನ್ನೂ, ಇವುಗಳಿಂದ ದೊರಕುವ ಸ್ವರ್ಗನರಕಗಳನ್ನೂ ಬುದ್ಧನು ಒಪ್ಪುವುದಿಲ್ಲ. ಈ ವಿಷಯದಲ್ಲಿ ಇವನ್ನು ಒಪ್ಪಿಕೊಳ್ಳುವ ಜೈನರು ಅರ್ಧ ಆಸ್ತಿಕರೆಂದು ಹೇಳಬಹುದು. ಇದರಿಂದ ಇವೆರಡು ಮತಗಳಿಗೂ ತುಂಬಾ ಅಂತರವುಂಟು. ಅಮರಸಿಂಹನು-ಸರ್ವಜ್ಞಸ್ಸುಗತೋ ಬುದ್ಧೋ ಧರ್ಮರಾಜ........ ಲೋಕಜಿಜ್ಜಿನಃ ಎಂಬ ಪದ್ಯದಲ್ಲಿ ಬುದ್ಧ ಜಿನಸಾಮಾನ್ಯ ನಾಮಗಳನ್ನೂ ಸುಗತ, ಶಾಕ್ಯಸಿಂಹ ಎಂಬ ಬುದ್ಧನ ವಿಶೇಷ ನಾಮಗಳನ್ನೂ ಹೇಳಿ ಅರ್ಹಂತನ ವಿಶೇಷ ನಾಮಗಳನ್ನು ಹೇಳದಿರುವುದರಿಂದ ಇವನು ಬುದ್ಧಮತದವನೆಂದು ಹೇಳುವುದು ಎಷ್ಟುಮಾತ್ರಕ್ಕೂ ಅನುಚಿತವಲ್ಲ. ಈತನು ಬುದ್ಧಮತದವನಾದರೂ ಬ್ರಹ್ಮವರ್ಗದಲ್ಲಿ ಬುದ್ಧಮತಕ್ಕಾಗಲಿ ಜೈನಮತಕ್ಕಾಗಲಿ ಸಂಬಂಧಪಟ್ಟ ಯಾವ ವಿಷಯವನ್ನೂ[1] ಹೇಳದೆ ಮುಖ್ಯವಾಗಿ ವೈದಿಕಮತಕ್ಕೆ ಸಂಬಂಧಪಟ ವಿಷಯಗಳನ್ನೇ ಹೇಳಿರುವನು.

ಈ ಅಮರಸಿಂಹನು ವಿಕ್ರಮಾದಿತ್ಯದ ಆಸ್ಥಾನದಲ್ಲಿದ್ದವನೆಂದು ಊಹಿಸಲ್ಪಟ್ಟಿದೆಯೆಂದು ಹೇಳಿದೆ. ಈ ವಿಕ್ರಮಾದಿತ್ಯನಾರೆಂಬುದು ಇನ್ನೂ ನಿರ್ಧರವಾಗಿಲ್ಲ. ಶಕಸ್ಥಾಪಕನಾದ

(1) 11ನೆಯ ಶತಮಾನದಲ್ಲಿದ್ದ ಹೇಮಚಂದ್ರನು ತನ್ನ ಅಭಿಧಾನಚಿಂತಾಮಣಿ ಕೋಶದಲ್ಲಿ ಆರಂಭದಲ್ಲಿ ದೇವಾಧಿದೇವಕಾಂಡವೆಂದು ಅರ್ಹನ್ಮತಪ್ರತಿಪಾದ್ಯರಾದ ತ್ರಿಷಷ್ಟಿಶಾಲಾಕಾಪುರುಷರಿಗೆ ಸಂಬಂಧಪಟ್ಟ ವಿಷಯಗಳನ್ನು ತಿಳಿಸುವ ಶಬ್ದಗಳನ್ನು ಸಂಗ್ರಹಿಸಿ ಹೇಳಿ ತನ್ನ ಜೈನಮತ ಪರಾಕಾಷ್ಠೆಯನ್ನು ವ್ಯಕ್ತಪಡಿಸಿರುವನು,

ವಿಕ್ರಮಾದಿತ್ಯನು ಕ್ರಿ.ಪೂ. 56ರಲ್ಲಿದ್ದವನು. ಮತ್ತು ಭೋಜನ(ಕ್ರಿ.ಶ.1060)ದೊಡ್ಡಪ್ಪನು ವಿಕ್ರಮಾದಿತ್ಯನೆಂದು ಪ್ರಸಿದ್ಧನಾದವನು 11ನೆಯ ಶತಮಾನಕ್ಕೆ ಸೇರಿದವನು. ಇವರಿಬ್ಬರೂ ಅಮರಸಿಂಹನು ಆಶ್ರಯಿಸಿದ್ದ ರಾಜರಲ್ಲ-ಚರಿತ್ರಕಾರರು ವಿಕ್ರಮಾದಿತ್ಯನೆಂಬುದು ಒಂದು ಬಿರುದಲ್ಲದೆ ರಾಜನ ಹೆಸರಲ್ಲವೆಂದು ಹೇಳಿ ಅನೇಕ ಮಂದಿ ವಿಕ್ರಮಾದಿತ್ಯರಿದ್ದರೆಂದು ಹೇಳುವುದರಿಂದ ಈ ವಿಕ್ರಮಾದಿತ್ಯನು 6ನೆಯ ಶತಮಾನದಲ್ಲಿದ್ದ ರಾಜನೆಂದು ಹೇಳಬಹುದಾದುದರಿಂದಲೂ 6ನೆಯ ಶತಮಾನದಲ್ಲಿಯೇ ಇದು ಚೀನಾ ಭಾಷೆಗೆ ಪರಿವರ್ತಿತವಾಗಿರುವುದರಿಂದಲೂ ಈ ಅಮರಸಿಂಹನು 6ನೆಯ ಶತಮಾನಕ್ಕೆ ಹಿಂದಣವನೆಂದು ಹೇಳಲು ಅವಕಾಶವುಂಟು. ಅಲ್ಲದೆ 8ನೆಯ ಶತಮಾನದಾದಿಯಲ್ಲಿದ್ದ ಜಿನೇಂದ್ರಬುದ್ಧಿಯ ಕಾಶಿಕಾವಿವರಣಪಂಚಿಕೆಯಲ್ಲಿ-ಅಮರಕೋಶದ (ಕಾಂ. 3-3-186)"ತಂತ್ರಂ ಪ್ರಧಾನೇ ಸಿದ್ಧಾಂತೇ" ಎಂಬ ಪದ್ಯವು ಉದಾಹೃತವಾಗಿರುವುದು. ಅಲ್ಲದೆ 789ರಲ್ಲಿ ಬರೆಯಲ್ಪಟ್ಟ ಅಮೋಘವೃತ್ತಿಯಲ್ಲಿಯೂ ಈ ಅಮರಕೋಶದ ವಾಕ್ಯವು ಪ್ರಮಾಣತ್ವೇನ ಉದಾಹೃತವಾಗಿರುವುದು. ಆದುದರಿಂದ ಈ ಕಾಲಕ್ಕೆಅಮರಕೋಶವು ತುಂಬಾಪ್ರಸಿದ್ಧಿಗೆ ಬಂದು ಸರ್ವಜನದಿಂದಲೂ ಪ್ರಮಾಣತ್ವೇನ ಅಂಗೀಕರಿಸಲ್ಪಟ್ಟಿರಬೇಕು. ಆದಕಾರಣ ಈ ಕೋಶಕಾರನು ಕ್ರಿ. ಶ. 6ನೆಯ ಶತಮಾನಕ್ಕೆ ಹಿಂದಣವನೆಂದು ಹೇಳುವುದರಲ್ಲಿ ಯಾವ ಅಡ್ಡಿಯೂ ಇಲ್ಲ—ಅಮರಸಿಂಹನು ಬುದ್ಧಮತೀಯನಾದರೂ ಆತ್ಮನ ವಿಷಯವನ್ನು ಹೇಳುವಾಗ ಕಪಿಲನ ಸಾಂಖ್ಯಮತವನ್ನು ಚೆನ್ನಾಗಿ ತಿಳಿದಿದ್ದನೆಂದು ಗೊತ್ತಾಗುವುದು. ಈ ಕಪಿಲನ ಸಾಂಖ್ಯನು ಬುದ್ಧಮಿತ್ರನ ಮತ್ತು ಅವನ ಶಿಷ್ಯನಾದ ವಸುಬಂಧುವಿನ ಕಾಲದಲ್ಲಿ (ಕ್ರಿ. ಶ. 480) ಈಶ್ವರ ಕೃಷ್ಣ ಎಂಬವನಿಂದ ನಿರಾಕೃತವಾಗಿರುವುದೆಂದೂ, ಈ ಕೃಷ್ಣನು ವಿಂಧ್ಯವಾಸಿಯೆಂದೂ ಕುಮಾರಿಲಭಟ್ಟರು ತಮ್ಮ ಶ್ಲೋಕವಾರ್ತಿಕದಲ್ಲಿ—

ಅಂತರಾಭವದೇಹಸ್ತು ನೇಷ್ಯತೇ ವಿಂಧ್ಯವಾಸಿನಾ ॥
ತದಸ್ತಿತ್ವೇ ಪ್ರಮಾಣಂ ಹಿ ನ ಕಿಂಚಿದುಪಪದ್ಯತೇ ॥

ಎಂದು ಹೇಳಿರವರು. ಅಮರಸಿಂಹನು ಈ ಕೃಷ್ಣಮಿಶ್ರನ ಸಾಂಖ್ಯಮತನಿರಾಕರಣವನ್ನು ತಿಳಿದಿರಲಿಲ್ಲ. ಆದುದರಿಂದಲೇ "ಅಂತರಾಭವ ಸತ್ವೇಽಶ್ವೇ ಗಂಧರ್ವೋ ದಿವ್ಯಗಾಯನೇ" ಎಂದು ನಾನಾರ್ಥವರ್ಗದಲ್ಲಿ ಸಾಂಖ್ಯಮತದ "ಅಂತರಾಭವಸತ್ವ"ವೊಂದನ್ನು ಒಪ್ಪಿಕೊಂಡಿರುವನು. ಈಶ್ವರ ಕೃಷ್ಣನ ಮತವನ್ನು ತಿಳಿದಿದ್ದರೆ ಇದನ್ನು ಹೇಳುತ್ತಿರಲಿಲ್ಲವೆಂದು ಕಾಣುವುದು. ಆದುದರಿಂದ ಈ ಅಮರಸಿಂಹನು 5ನೆಯ ಶತಮಾನಕ್ಕೆ ಹಿಂದೆ 4ನೆಯ ಶತಮಾನದಲ್ಲಿದ್ದವನೆಂದು ಊಹಿಸಬಹುದು. ಅಮರವ್ಯಾಖ್ಯಾತೃಗಳಲ್ಲಿ ಮುಖ್ಯರಾದವರ ಕೆಲವರನ್ನೂ ಅವರ ಗ್ರಂಥಗಳನ್ನೂ ಕುರಿತು ಒಂದೆರಡು ಮಾತುಗಳನ್ನು ಇಲ್ಲಿ ಹೇಳುವುದು ಅವಶ್ಯಕವಾಗಿರುವುದು.

ಈಗ ನಮಗೆ ದೊರಕಿರುವ ಅಮರ ವ್ಯಾಖ್ಯೆಗಳಲ್ಲಿ ಭಟ್ಟಕ್ಷೀರಸ್ವಾಮಿಯಿಂದ ಬರೆಯಲ್ಪಟ್ಟಿರುವ ಅಮರ ಕೋಶೋದ್ಘಾಟನವೇ ಮೊತ್ತಮೊದಲನೆಯದು. ಈತನು ಹನ್ನೊಂದ

(2) ಇದರ ವ್ಯಾಖ್ಯಾಕಾರರಲ್ಲಿ ಒಬ್ಬನಾದ ಕ್ಷೀರಸ್ವಾಮಿಯು—(ಗ್ರಂಥಾರಂಭೇ) ಗ್ರಂಥಾರಂಭದಲ್ಲಿ (ಅಭೀಪ್ಸಿತ ಸಿದ್ಧಿಹೇತಂ) ಇಷ್ಟಸಿದ್ಧಿಗೆ ಕಾರಣಭೂತನಾಗಿರುವ (ಜಿನಮನುಸ್ಮೃತ್ಯ) ಜಿನನನ್ನು ಸ್ಮರಿಸಿ—ಎಂದು ಅಮರದ ಮಂಗಳ ಶ್ಲೋಕಕ್ಕೆ ಅರ್ಥವನ್ನು ಬರೆಯುವಾಗ ಜಿನಪರವಾಗಿ ಅರ್ಥ ಬರೆದಿರುವನು—ಮತ್ತೊಬ್ಬ ವ್ಯಾಖ್ಯಾಕರ್ತೃವಾದ ಸರ್ವಾನಂದನ (ಅತ್ರ ಅನುಕ್ತೋಽಪಿ) ಇಲ್ಲಿ ಹೇಳಲ್ಪಡದಿದ್ದರೂ (ಶಾಕ್ಯಲಕ್ಷಣೋಽರ್ಥೋ) ಬುದ್ಧನ ಲಕ್ಷಣವುಳ್ಳ ಅರ್ಥವು (ಜ್ಞಾನದಯಾದಿಭಿಃ) ಜ್ಞಾನದಯಾದಿ ಶಬ್ದಗಳಿಂದ (ಸ್ಪಷ್ಟಂಪ್ರತೀಯತೇ) ಸ್ಪಷ್ಟವಾಗಿ ತೋರಿಬರುವುದು. ಎಂದು ಬುದ್ಧಪರವಾಗಿ ವ್ಯಾಖ್ಯಾನಿಸಿರುವನು. ರಾಯಮುಕುಟನು ಬ್ರಹ್ಮವಿಷ್ಣು ಮಹೇಶ್ವರರೆಂಬ ತ್ರಿಮೂರ್ತಿಗಳ ಪರವಾಗಿಯೂ ಅರ್ಥಮಾಡಿರುವನು.

ನೆಯ ಶತಮಾನದ ಪೂರ್ವಾರ್ಧದಲ್ಲಿದ್ದವನು. ಈತನು ರಾಜಶೇಖರ (880-920) ಮತ್ತು ಭೋಜರಾಜ (1018-1060) ಇವರನ್ನು ತನ್ನ ವ್ಯಾಖ್ಯಾನದಲ್ಲಿ ಉದಾಹರಿಸಿರುವನು. 1140ರಲ್ಲಿದ್ದ ವರ್ಧಮಾನನು ಈತನನ್ನು ತನ್ನ ಗಣರತ್ನಮಹೋದಧಿಯಲ್ಲಿ ಉದಾಹರಿಸಿರುವನು. ಆದುದರಿಂದ ಈತನ ಕಾಲವು 11ನೆಯ ಶತಮಾನದ ಉತ್ತರಾರ್ಧವೆಂದು ಹೇಳಲು ಅವಕಾಶವುಂಟು. ಈತನು ಹೇಳುವ ತನಗಿಂತಲೂ ಪ್ರಾಚೀನರಾದ ಅಮರ ವ್ಯಾಖ್ಯಾಕಾರರಲ್ಲಿ ಮೂವರ--ಉಪಾಧ್ಯಾಯ, ಗೌಡ. ಶ್ರೀ ಭೋಜ--ವ್ಯಾಖ್ಯಾನಗಳು ದೊರಕಿಲ್ಲ. ಈತನು ಕಾತ್ಯನೇ ಮೊದಲಾದ ಸುಮಾರು ಹದಿನೈದು ಮಂದಿ ಕೋಶಕಾರರ ಕೋಶಗಳನ್ನು ಉದಾಹರಿಸಿರುವನು.

ಇದರ ತರುವಾಯ ಹುಟ್ಟಿದ ಅಮರ ವ್ಯಾಖ್ಯೆಯು 'ಟೀಕಾಸರ್ವಸ್ವವೆಂಬುದು. ಇದನ್ನು ಬರೆದವನು ವಂದಿಘಟ್ಟೀಯ ಸರ್ವಾನಂದನು. ಆರ್ತಿಹರನ ಮಗನು. ಈತನು ವಂಗದೇಶೀಯನು. ಈ ಗ್ರಂಥರಚನಾಕಾಲವು ಕ್ರಿ. ಶ. 1159.[2] ಗ್ರಂಥಕಾಲವನ್ನು ಗ್ರಂಥಕರ್ತೃವೇ ಕಾಲವರ್ಗದಲ್ಲಿ ಈಗಣ ಶಕವರ್ಷವು ೧೦೮೧ (ಕ್ರಿ. ಶ. 1159) ಎಂದು ಹೇಳಿರುವನು. ಈತನು ತನ್ನ ಹಿಂದಣ ಹತ್ತುಮಂದಿ ವ್ಯಾಖ್ಯಾನಕಾರರ ಹೆಸರನ್ನು ಹೇಳಿರುವನು. ಇವನ ವ್ಯಾಖ್ಯಾನವು ಪ್ರೌಢವಾಗಿರುವುದು. ಯಾವ ಬಗೆಯಲ್ಲಿಯೂ ಕ್ಷೀರಸ್ವಾಮಿಯ ವ್ಯಾಖ್ಯಾನಕ್ಕೆ ಕಡಿಮೆಯಾಗಿಲ್ಲ. ಇವನ ವ್ಯಾಖ್ಯಾನವೇ ಈಚೆಯ ವಂಗೀಯರಾದ ಅಮರ ವ್ಯಾಖ್ಯಾಕರ್ತೃಗಳಿಗೆ ಆಧಾರವೆಂದು ಹೇಳಬಹುದು.

ಸುಭೂತಿ ಅಥವಾ ಸುಭೂತಿಚಂದ್ರನೆಂಬವನು ಮತ್ತೊಬ್ಬ ಪ್ರಾಚೀನನಾದ ಅಮರ ವ್ಯಾಖ್ಯಾಕಾರನು. ಇವನು ಬುದ್ಧಮತಕ್ಕೆ ಸೇರಿದವನು. ಇವನ ವ್ಯಾಖ್ಯೆಗೆ ಕಾಮಧೇನುವೆಂದು ಹೆಸರು. ಇವನ ಹೆಸರನ್ನು ಸರ್ವದೇವನು ದುರ್ಘಟವೃತ್ತಿಯಲ್ಲಿ (1173) ಹೇಳಿರುವನು.

ನಾಚಿ ರಾಜೀಯವೆಂಬುದು ನಾಚಿರಾಜ ಎಂಬ ಜೈನಮತದವನಿಂದ ಬರೆಯಲ್ಪಟ್ಟ ವ್ಯಾಖ್ಯೆಯು, ಈತನು ಕನ್ನಡ ಟೀಕೆಯನ್ನೂ ಬರೆದಿರುವನು. ಬೃಹಸ್ಪತಿ ಎಂಬ ಬಿರುದಿನ ರಾಯಮುಕುಟಮಣಿ (ರಾಯಮುಕುಟ) ಯೆಂಬಪಂಡಿತನಿಂದ ಬರೆಯಲ್ಪಟ್ಟ "ಪದಪಂಚಿಕಾ" ಎಂಬ ವ್ಯಾಖ್ಯಾನವು ಮತ್ತೊಂದು. ಇದು 1431ರಲ್ಲಿ ಬರೆಯಲ್ಪಟ್ಟುದು. (ಇದು ಇವನ ವ್ಯಾಖ್ಯೆಯಿಂದಲೇ ತಿಳಿದುಬರುವುದು[3]) ಇವನು ಬಂಗಾಳ ದೇಶದ ರಾಜಾ ಎಂಬ ನಗರವಾಸಿಯು, ಇವನಿಂದ ಉದಾಹರಿಸಲ್ಪಟ್ಟಿರುವ ಗ್ರಂಥಗಳು ಮತ್ತು ಗ್ರಂಥಕರ್ತೃಗಳು ಸುಮಾರು 270ಕ್ಕೆ ಹೆಚ್ಚಾಗಿವೆ.

"ವ್ಯಾಖ್ಯಾಸುಧಾ ರಾಮಾಶ್ರಮಿ" ಎಂಬುದು ಮತ್ತೊಂದು ವ್ಯಾಖ್ಯೆಯು, ಇದು ೧೭ನೆಯ ಶತಮಾನದಲ್ಲಿ ಬರೆಯಲ್ಪಟ್ಟುದು. ಇದನ್ನು ಬರೆದವನು ಭಟ್ಟೋಜೀದೀಕ್ಷಿತನ ಮಗನಾದ ಭಾನುಜಿ ದೀಕ್ಷಿತನು. ಈತನು ವಘೆಲಾ ವಂಶದ ಕೀರ್ತಿಸಿಂಹನ[4] ಆಳಿಕೆಯಲ್ಲಿ ಅವನ ಪ್ರಾರ್ಥನೆಯಂತೆ ಈ ವ್ಯಾಖ್ಯೆಯನ್ನು ಬರೆದಂತೆ ತಿಳಿಯಬರುತ್ತದೆ.

---

(1) ಕಾವ್ಯಮೀಮಾಂಸಾ ಉಪೋದ್ಘಾತ (ಸಿ. ಡಿ. ಡಲಾಲ್)

(2) ಈತನು ತನ್ನ ವ್ಯಾಖ್ಯೆಯಲ್ಲಿ ಕಾಲವರ್ಗದಲ್ಲಿ. ಇದಾನೀಂ ಚೈಕಾಶೀತಿವರ್ಷಾಧಿಕ ಸಹಸ್ರೈಕಪರ್ಯಂತೇನ ಶಕಾಬ್ದಕಾಲೇನ ೧೦೮೧ (ಶಕ) ಷಷ್ಟಿವರ್ಷಾಧಿಕ ದ್ವಿಚತ್ವಾರಿಂಶಚ್ಛತಾನಿ ಕಲಿಸಂಧ್ಯಾಯಾ ಭೂತಾನಿ (೪೨೬೦-ಕಲಿವರ್ಷ) (1-4-21)

(3) ಇದಾನೀಂ ಚ ಶಕಾಬ್ದಾಃ ೧೩೫೩ ದ್ವಾತ್ರಿಂಶದಬ್ದಾಧಿಕಪಂಚಶತವರ್ಷೋತ್ತರಚತುಃಸಹಸ್ರವರ್ಷಾಣಿ ಕಲಿಸಂಧ್ಯಾಯಾಂ ಭೂತಾನಿ (4532) (ರಾಯ-ಅಮರ-1-3-22)

(4) ಪ್ರತಿಯೊಂದು ಕಾಂಡದ ಕೊನೆಯ ಗದ್ಯದಿಂದ ತಿಳಿದುಬರುವುದು.

"ಅಮರಕೋಶಪಂಚಿಕಾ" ಅಥವಾ "ಪದಾರ್ಥ ಕೌಮುದಿ"ಯೆಂಬ ಮತ್ತೊಂದು ವ್ಯಾಖ್ಯೆಯು 1619ರಲ್ಲಿ ನಾರಾಯಣ ಶರ್ಮ ಎಂಬವನಿಂದ ವಿರಚಿತವಾಯಿತು. ಮತ್ತು 1633ರಲ್ಲಿ ತ್ರಿಕಾಂಡ ವಿವೇಕವೆಂಬ ಮತ್ತೊಂದು ವ್ಯಾಖ್ಯೆಯೂ ರಾಮನಾಥ ವಿದ್ಯಾ ವಾಚಸ್ಪತಿಯಿಂದ ರಚಿತವಾಗಿರುವುದು. ಈತನು ಪೀಠಿಕೆಯಲ್ಲಿ ಹಲವು ಆಧಾರಗಳನ್ನು ಹೇಳಿರುವನು.

ಭರತಮಲ್ಲಿಕ ಅಥವಾ ಭರತಸೇನನಿಂದ ಬರೆಯಲ್ಪಟ್ಟಿರುವ "ಅಮರ ಟೀಕೆ" ಯೆಂಬ ವ್ಯಾಖ್ಯಾನವು ಎಲ್ಲಕ್ಕಿಂತಲೂ ಮೇಲಾದುದು ಮತ್ತು ವಿಸ್ತೃತವಾದುದು. ಇದರಲ್ಲಿ ಪದಾರ್ಥಗಳು ತುಂಬಾ ವಿಶದವಾಗಿ ವಿವರಿಸಲ್ಪಟ್ಟಿರುವುವು. ಇದರಲ್ಲಿ ಹಲವು ಪಾಠಭೇದಗಳು ಹಲವು ಮಂದಿ ಪ್ರಯೋಗಕಾರರ ಪ್ರಮಾಣಗಳಿಂದ ವಿವರಿಸಲ್ಪಟ್ಟಿರುವುವು. ಇವನು ವ್ಯಾಕರಣ ವಿಷಯದಲ್ಲಿ ವೋಪದೇವನ (ಮುಗ್ಧಬೋಧ) ವ್ಯಾಕರಣವನ್ನನುಸರಿಸಿರುವನು. ಇದು ೧೮ನೆಯ ಶತಮಾನದ ಮಧ್ಯಕಾಲದಲ್ಲಿ ಬರೆಯಲ್ಪಟ್ಟುದೆಂದು ನಿರ್ಣಯವಾಗಿರುವುದು ವಿಚಾರಾಸ್ಪದವು ಏಕೆಂದರೆ 1639ರಲ್ಲಿ ಬರೆಯಲ್ಪಟ್ಟ ವೋಪದೇವನ "ಕವಿಕಲ್ಪದ್ರುಮದ ವ್ಯಾಖ್ಯೆ"ಯಲ್ಲಿ[1] ದುರ್ಗಾದಾಸನು ಈ ಭರತನ ಅಮರ ಟೀಕೆಯನ್ನು ಉದಾಹರಿಸಿರುವನು.

ಈ ಅಮರಸಿಂಹನ ತರುವಾಯ ಪುರುಷೋತ್ತಮನೆಂಬವನು (1) ತ್ರಿಕಾಂಡಶೇಷ (2) ಹಾರಾವಲಿ, (3) ವರ್ಣದೇಶನಾ ಎಂಬ ಮೂರು ಕೋಶಗಳನ್ನು ಬರೆದಿರುವನು. ಏಕಾಕ್ಷರ ಕೋಶ ಮತ್ತು ದ್ವಿರೂಪ ಕೋಶಗಳನ್ನೂ ಈತನೇ ಬರೆದಿರಬಹುದೆಂದು ಊಹಿಸಲು ಅವಕಾಶವುಂಟು.

ಪುರುಷೋತ್ತಮನ ಹಾರಾವಳೀ ಕೋಶ

ಈತನು ಭಾಷಾವೃತ್ತಿಯೆಂಬ ಪಾಣಿನಿಯ ಅಷ್ಟಾಧ್ಯಾಯಿಯ ವೃತ್ತಿಯೊಂದನ್ನೂ ಬರೆದಿರುವನು. ಇವನ ಕಾಲವು ನಿರ್ದಿಷ್ಟನಾಗಿ ತಿಳಿಯಬಂದಿಲ್ಲ. 1159ರಲ್ಲಿದ್ದ ಸರ್ವಾನಂದನು ಇವನ ನಾಲ್ಕು ಕೋಶಗಳನ್ನೂ ತನ್ನ ವ್ಯಾಖ್ಯೆಯಲ್ಲಿ ಉದ್ಧರಿಸಿರುವನು ಮತ್ತು ಅದೇ ಶತಮಾನಕ್ಕೆ ಸೇರಿದವನಾದ ಸೋಮಚಂದ್ರನು ಕೂಡ ಇವನ ಭಾಷಾವೃತ್ತಿ ಮತ್ತು ಸಂಕ್ಷಿಪ್ತಸಾರಗಳನ್ನು ತನ್ನ ಗ್ರಂಥದಲ್ಲಿ ಎತ್ತಿ ಹೇಳಿರುವನು. ಈತನು 1170ರಿಂದ 1200ರ ವರೆಗೆ ಆಳಿದ ಲಕ್ಷ್ಮಣಸೇನನ ಆಜ್ಞೆಯಂತೆ ಕೇವಲ ಲೌಕಿಕಭಾಷಾ ಶಬ್ದಗಳಿಗೆ ಸಂಬಂಧಪಟ್ಟ ಅಷ್ಟಾಧ್ಯಾಯಿಯ ಸೂತ್ರಗಳಿಗೆ ವೃತ್ತಿ ಬರೆಯುವೆನೆಂದು ಹೇಳಿರುವುದರಿಂದ ಈತನು 1170ರಿಂಚ ಈಚೆಗೆ ಅವನ ಕಾಲದಲ್ಲಿದ್ದವನೆಂದು ಹೇಳಬಹುದಾದರೂ 1159ರಲ್ಲಿದ್ದ ಸರ್ವಾನಂದನು ಇವನ ಗ್ರಂಥವನ್ನು ಉದ್ಧರಿಸಿರುವುದರಿಂದ ಈತನು 1159ಕ್ಕೆ ಹಿಂದೆಯೂ ಇದ್ದು ಆ ಕಾಲದಲ್ಲಿಯೇ ಈ ಗ್ರಂಥಗಳನ್ನು ಬರೆದಿರಬೇಕೆಂಬುದು ಸ್ಪಷ್ಟವಾಗಿಯೇ ಇರುವುದು. ಆದರೆ ಈತನು ಈ ಗ್ರಂಥಗಳನ್ನು (ತ್ರಿಕಾಂಡ ಶೇಷಾದಿ ಕೋಶತ್ರಯಗಳು) ಬರೆಯುವ ಕಾಲದಲ್ಲಿ ಲಕ್ಷ್ಮಣಸೇನನು ರಾಜನಾಗಿರಲಿಲ್ಲವೆಂದು ಹೇಳಬೇಕಾಗಿರುವುದು; ಈತನು ಶಬ್ದಾರ್ಣವ, ಉತ್ಪಲಿನೀ, ಸಂಸಾರವರ್ತ, ಈ ನಿಘಂಟುಗಳನ್ನೂ, ವಾಚಸ್ಪತಿ, ವ್ಯಾಡಿ ವಿಕ್ರಮಾದಿತ್ಯ ಇವರ ಕೋಶಗಳನ್ನೂ ಉದಾಹರಿಸಿರುವನು. ಈತನೂ ಅಮರಸಿಂಹನಂತೆಯೇ ಬುದ್ಧಮತದವನಾಗಿರಬಹುದೆಂದು ಕಾಣುವುದು. ಇವನ ತ್ರಿಕಾಂಡಶೇಷದಲ್ಲಿ ಕಾಂಡಗಳು ವರ್ಗಗಳು, ಮತ್ತು ಶಬ್ದಗಳನ್ನು ಆರಿಸಿರುವ ಕ್ರಮಗಳು ಇವೆಲ್ಲವೂ ಅಮರಕೋಶದಂತೆಯೇ ಇರುವುದಲ್ಲದೆ ಅಮರಕೋಶದಲ್ಲಿ ಬಿಟ್ಟುಹೋಗಿ ವಿಶೇಷ ಪ್ರಯೋಗಗಳಲ್ಲಿರುವ ಅಧಿಕ ಶಬ್ದಗಳು ಇದರಲ್ಲಿ ಶೇಖರಿಸಲ್ಪಟ್ಟಿರುವುವು. ಉದಾಹರಣಕ್ಕಾಗಿ-ಅಮರದಲ್ಲಿ ಬುದ್ಧನಿಗೆ ಹದಿನೇಳುಹೆಸರುಗಳನ್ನು ಹೇಳಿದೆ. ಇದರಲ್ಲಿ ಮೂವತ್ತೇಳು ಹೆಸರುಗಳಿ

---

(1) ಕ್ಷಿಶ ವಾಸಗತ್ಯೋರಾಧಾರೇ ಕ್ತಿಃ, ಇತ್ಯ ಮರಟೀಕಾಯಾಂ ಭರತಃ (ಕವಿಕಲ್ಪದ್ರುಮ, ಜೀವಾನಂದ ವಿದ್ಯಾಸಾಗರ ಮುದ್ರಿತ) (ಪು. 33-1-5)

ರುವುವು. ಬುದ್ಧಮತದಲ್ಲಿ ಪ್ರಸಿದ್ಧರಾಗಿರುವ ರಾಹುಲ, ದೇವದತ್ತ ಇವರ ಹೆಸರುಗಳೂ ಇದರಲ್ಲಿ ಹೆಚ್ಚಾಗಿ ಸೇರಿಸಿದೆ. ಹಲಾಯುಧನ ಅಭಿಧಾನ ರತ್ನಮಾಲೆಯಂತೆ ಅನುಷ್ಟುಪ್ ಶ್ಲೋಕಗಳೊಡನೆ ಹಲವು ವೃತ್ತಗಳೂ ಅಲ್ಲಲ್ಲಿ ಸೇರಿರುವುವು. ಇವನ "ಹಾರಾವಲಿ" ಎಂಬ ಗ್ರಂಥವು 270 ಪದ್ಯಗಳುಳ್ಳ ಚಿಕ್ಕ ಗ್ರಂಥವು. ಇದನ್ನು ರಚಿಸಲು ಹನ್ನೆರಡು ವರ್ಷಗಳಾದುವೆಂದು ಆತನೇ ಹೇಳಿಕೊಂಡಿರುವನು "ವರ್ಣದೇಶನಾ" ಎಂಬುದು ಶಬ್ದಗಳ ಮಾರ್ಗಗಳಲ್ಲಿ ಭಿನ್ನಭಿನ್ನೋಚ್ಚಾರಣೆಗಳಿರುವ ವರ್ಣಗಳನ್ನು ಧಾತುಪಾಠ ಮೊದಲಾದ ಆಧಾರಗಳಿಂದ ವಿಮರ್ಶಿಸಿ ನಿರ್ಧರಮಾಡಿರುವ ಗ್ರಂಥವಾಗಿರುವುದು.

ಶಾಶ್ವತನಿಂದ ಬರೆಯಲ್ಪಟ್ಟ "ಅನೇಕಾರ್ಥ ಸಮುಚ್ಚಯ"ವೆಂಬ ಕೋಶವು ಕೇವಲ ನಾನಾರ್ಥಶಬ್ದಗಳನ್ನು ಮಾತ್ರ ಹೇಳುವುದೆಂದು ಹೆಸರಿನಿಂದಲೇ ಸ್ಪಷ್ಟವಾಗುವುದು. ಇದರಲ್ಲಿ ಆರು ವರ್ಗಗಳಿರುವುವು. ಇವನ ಕಾಲವು ನಿರ್ದಿಷ್ಟವಾಗಿ ತಿಳಿಯುವುದಿಲ್ಲ.

ಶಾಶ್ವತನ ಅನೇಕಾರ್ಥ ಸಮುಚ್ಚಯ

ಆದರೆ ಆತನು ತನ್ನ ಗ್ರಂಥದ ಕೊನೆಯಲ್ಲಿ "ವಿದ್ಯಾವಿಲಾಸನೆಂಬರಸನ ಸಭೆಯಲ್ಲಿ ವಿದ್ಯಾವಂತನೂ, ಕವಿಶ್ರೇಷ್ಠರೂ ಆದ ಖಡುಲ ಮೊದಲಾದವರಿಂದ ತನ್ನೀಗ್ರಂಥವು ಆಮೂಲಾಗ್ರವಾಗಿ ಪರಿಶೀಲಿಸಲ್ಪಟ್ಟಿರುವುದು. ಮಹಾಬಲ ಮತ್ತು ವರಾಹ ಎಂಬಿಬ್ಬರು ಈ ಗ್ರಂಥರಚನೆಯಲ್ಲಿ ತನಗೆ ಸಲಹೆಗಳನ್ನೂ ಕೊಟ್ಟಿರುವರು" ಎಂದು ಹೇಳಿರುವುದರಿಂದ ಈ ವರಾಹನು ಕ್ರಿ. ಶ. 6ನೆಯ ಶತಮಾನದಲ್ಲಿದ್ದ ವರಾಹಮಿಹಿರನೆಂಬ ಪಂಡಿತವರ್ಯನೆಂದು ತಿಳಿಯುವುದಾದರೆ ಈತನ ಕಾಲವೂ 6ನೆಯ ಶತಮಾನವಾಗಿರಬೇಕೆಂದು ಹೇಳಬಹುದು. ಹಲವು ಪದ್ಯಗಳಲ್ಲಿ ಅಮರಕೋಶದ ಅನುಪೂರ್ವಿಯೇ ಇರುವುದರಿಂದ ಈತನು ಅಮರಕೋಶವನ್ನು ಸಂಪೂರ್ಣವಾಗಿ ನೋಡಿ ಕೆಲವು ಭಾಗದಲ್ಲಿಯಾದರೂ ಅದನ್ನು ಅನುಕರಣಮಾಡಿರುವನೆಂದು ಹೇಳಲು ಅವಕಾಶವಿರುವುದರಿಂದ ಈತನ ಕಾಲವು 6ನೆಯ ಶತಮಾನಕ್ಕೆ ಈಚಿನದೆಂದು ಹೇಳಲು ಯಾವ ಅನುಪಪತ್ತಿಯೂ ಇಲ್ಲ.

ಹಲಾಯುಧ ಭಟ್ಟನ "ಅಭಿಧಾನರತ್ನಮಾಲೆಯು" ಒಂಬತ್ತನೆಯ ಶತಮಾನದ ನಡುವೆ ಬರೆಯಲ್ಪಟ್ಟುದು. ಇದರ ಟೀಕೆಯೇ ಈಗ ಮುದ್ರಿತವಾಗಿರುವುದು.

ಅಭಿಧಾನರತ್ನಮಾಲೆ ಮತ್ತು ಹಲಾಯುಧಭಟ್ಟ

ಸಂಸ್ಕೃತ ಭಾಷೆಯ ನಾಮವಾಚಕಗಳ ಸಂಗ್ರಹರೂಪವಾದ 'ಅಭಿಧಾನರತ್ನಮಾಲೆ'ಯೆಂಬ ಮೂಲಕೋಶವನ್ನು ರಚಿಸಿದವನು ಭಟ್ಟ ಹಲಾಯುಧನೆಂಬುವನು. ಸಂಸ್ಕೃತ ಪಿಂಗಳ ಸೂತ್ರವೆಂಬ ಒಂದು ಗ್ರಂಥಕ್ಕೆ ವ್ಯಾಖ್ಯೆಯನ್ನು ಬರೆದ ಹಲಾಯುಧನೂ, ಕವಿರಹಸ್ಯವನ್ನು ಬರೆದ ಹಲಾಯುಧನೂ ಇವನಿಗಿಂತಲೂ ಭಿನ್ನರೆಂದು ಕೆಲವು ಆಧಾರಗಳಿಂದ ನಿರ್ಧರಿಸಿರುವರು. ಆದರೆ ಕೆಲವರು ಅದನ್ನು ಒಪ್ಪದೆ ಛಂದೋವೃತ್ತಿಕಾರನೂ, ಈತನೂ ಅಭಿನ್ನರೆಂದು ಹೇಳುತ್ತಿರುವರು. ಈತನ ಕಾಲವು ಒಂಬತ್ತನೆಯ ಶತಮಾನದ ಆದಿಭಾಗವೆಂದು ಸಂಸ್ಕೃತ ಭಾಷಾ ವಿಮರ್ಶಕರು ನಿರ್ಧರಿಸಿರುವರು. ಆದರೆ ಈ ಗ್ರಂಥವನ್ನು ಮುದ್ರಿಸಿರುವ "ಆಪರ್ಟ್" ಎಂಬವರು ತಮ್ಮ ಮುನ್ನುಡಿಯಲ್ಲಿ "ಅಭಿಧಾನ"ಚಿಂತಾಮಣಿ ಕರ್ತೃವಾದ ಆಚಾರ್ಯ ಹೇಮ

ಚಂದ್ರನಿಗಿಂತಲೂ ಸ್ವಲ್ಪ ಹಿಂದಣವನೆಂದು ಕೆಲವು[1] ಕಾರಣಗಳನ್ನು ಹೇಳಿ ಹನ್ನೊಂದನೆಯ ಶತಮಾನದ ಕೊನೆಯಲ್ಲಿದ್ದವನೆಂದು ನಿರೂಪಿಸಿರುವರು. ಈತನು ತನಗಿಂತ ಹಿಂದಣವರಾದ ಅಮರದತ್ತ (ಈತನು ನಾಮಲಿಂಗಾನುಶಾಸನ ಕರ್ತೃವಾದ ಅಮರಸಿಂಹನಲ್ಲ) ವರರುಚಿ, ಭಾಗುರಿ, ವೋಪಾಲಿತ ಇವರುಗಳ ನಿಘಂಟುಗಳನ್ನು ನೋಡಿ ತನ್ನೀ ನಿಘಂಟುವನ್ನು ಬರೆದಂತೆ ಈತನೇ ಗ್ರಂಥದಲ್ಲಿ ಹೇಳಿಕೊಂಡಿರುವನು. ಇವರೆಲ್ಲರೂ ಪ್ರಾಯಶಃ ಕ್ರಿ. ಶ. ಒಂದೆರಡನೆಯ ಶತಮಾನಗಳ ಪೂರ್ವದಲ್ಲಿಯೋ, ಪರದಲ್ಲಿಯೋ ಇದ್ದವರು, ಈ ಆಧಾರದಿಂದ ಗ್ರಂಥಕರ್ತೃವಿನ ಕಾಲವು ಎರಡನೆಯ ಶತಮಾನಕ್ಕೆ ಈಚೆಯದೆಂದು ಮಾತ್ರ ತಿಳಿದುಬರುವುದಲ್ಲದೆ ಇವನ ಕಾಲವು ಇದೇ ಎಂದು ನಿರ್ದಿಷ್ಟವಾಗಿ ತಿಳಿಯಲವಕಾಶವಿಲ್ಲ. ಗ್ರಂಥಾದಿಯಲ್ಲಿ ಸ್ವೇಷ್ಟದೇವತೆಯನ್ನುಸ್ತುತಿಸುವ ಸಂದರ್ಭದಲ್ಲಿ ಈತನು ಕೇವಲ [2]ಸರಸ್ವತೀ ಸ್ತುತಿಯನ್ನು ಮಾತ್ರ ಮಾಡಿರುವನು. ಈ ಆಧಾರವೊಂದರಿಂದಲೇ ಇವನು ಯಾವ ಮತದವನೆಂದು ಹೇಳಲು ಅವಕಾಶವಿಲ್ಲ. ಈತನು ಅಮರಸಿಂಹನಿಗಿಂತಲೂ ಅಧಿಕವಾಗಿ ಜೈನಮತದ ಋಷಿಗಳನ್ನೂ, ಶ್ರವಣರ ಹೆಸರನ್ನೂ ಹೇಳಿರುವನಾದರೂ, ಹೇಮಚಂದ್ರಾದಿಗಳಂತೆ ಜಿನಮತ ಪ್ರಕ್ರಿಯೆಯನ್ನು ಹೆಚ್ಚಾಗಿ–ಮುಖ್ಯವಾಗಿ–ಹೇಳಿಲ್ಲವಾದುದರಿಂದಇವನು ಜೈನಬೌದ್ಧಪಂಗಡಗಳಿಗೆ ಸೇರಿದವನಲ್ಲವೆಂದು ವ್ಯಕ್ತವಾಗುವುದು. ಆದರೆ ಜೈನಮತವು ವಿಶೇಷ ಪ್ರಚಾರದಲ್ಲಿದ್ದಕಾಲದಲ್ಲಿದ್ದವನು–ಎಂದರೆ 8–9ನೆಯ ಶತಮಾನದ ಹತ್ತಿರದಲ್ಲಿದ್ದನೆಂದು ಮಾತ್ರ ಹೇಳಬಹುದು. ಇವನ ಕೋಶವನ್ನು ರಘುವಂಶವೇ ಮೊದಲಾದ ಸಂಸ್ಕೃತಮಹಾಕಾವ್ಯಗಳಿಗೆ ವ್ಯಾಖ್ಯಾಕರ್ತರಾದ ಮಲ್ಲಿನಾಥರು ವಿಶೇಷವಾಗಿ ಪ್ರಮಾಣೀಕರಿಸಿ ಅಲ್ಲಲ್ಲಿ ಉದಾಹರಿಸಿರುವರು. ವಿಕ್ರಮೋರ್ವಶೀಯ ವ್ಯಾಖ್ಯಾಕರ್ತೃವಾದ ರಂಗನಾಥ, ಅಮರವ್ಯಾಖ್ಯಾಕರ್ತೃ ಭಾನೋಜೀದೀಕ್ಷಿತ, ಶಾಕುಂತಲ ವ್ಯಾಖ್ಯಾಕರ್ತೃ ಕಾಟ್ಯವೇಮ, ಭಟ್ಟಿಕಾವ್ಯ ಜಯಮಂಗಳವ್ಯಾಖ್ಯಾಕಾರ, ಉತ್ತರರಾಮಚರಿತ ವ್ಯಾಖ್ಯಾಕರ್ತೃವಾದ ನಾರಾಯಣ; ವಾಲ್ಮೀಕಿ ರಾಮಾಯಣಕ್ಕೆ ಶ್ರೀ ವೈಷ್ಣವ ಸಂಪ್ರದಾಯವನ್ನನುಸರಿಸಿ ವ್ಯಾಖ್ಯಾನ ಬರೆದಿರುವ ಶ್ರೀಮಾನ್ ಗೋವಿಂದರಾಜರು. ಇವರೇ ಮೊದಲಾದ ಸಂಸ್ಕೃತ ಭಾಷೆಯ ಪುರಾಣೇತಿಹಾಸ ಕಾವ್ಯನಾಟಕ ವ್ಯಾಖ್ಯಾತೃಗಳು ಈ ನಿಘಂಟುವನ್ನು ಅಲ್ಲಲ್ಲಿ ವಿಶೇಷವಾಗಿ ಪ್ರಮಾಣೀಕರಿಸಿ ಉದಾಹರಿಸಿರುವರು. ಇವರೆಲ್ಲರೂ ಹದಿಮೂರು ಹದಿನಾಲ್ಕನೆಯ ಶತಮಾನಕ್ಕೆ ಸೇರಿದವರು. ಅಮರಕೋಶವೇ ಮೊದಲಾದ ಹಲವು ನಿಘಂಟುಗಳಲ್ಲಿ ದೊರಕದೆ ಕಾವ್ಯಾದಿಗಳಲ್ಲಿ ಪ್ರಯೋಗಿಸಲ್ಪಟ್ಟಿರುವ ಹಲವು ಪದಗಳು ಈ ಕೋಶದಲ್ಲಿ ಸಂಗ್ರಹಿಸಲ್ಪಟ್ಟಿವೆ".[4]

---

(1) ಸ್ತ್ರೀಯರ ಶೃಂಗಾರಚೇಷ್ಟೆಗಳಾದ ಹಾವಾದಿಗಳಲ್ಲಿ ಆರನ್ನು ಮಾತ್ರ ಅಮರಸಿಂಹನು ಹೇಳಿರುವನು. ಹಲಾಯುಧನು ಒಂಬತ್ತನ್ನು ಹೇಳಿರುವನು; ಹೇಮಚಂದ್ರನು ಹತ್ತನ್ನು ಹೇಳಿರುವನು. ಹಾಗೆಯೇ ಗಜಭೇದಗಳಲ್ಲಿ ಹಲಾಯುಧನು ಮೂರನ್ನು ಹೇಳಿರುವಾಗ ಹೇಮಚಂದ್ರನು ನಾಲ್ಕನ್ನು ಹೇಳಿರುವನು. ಕಾಂಡವಿಭಾಗ ಮೊದಲಾದುವನ್ನು ಹಲಾಯುಧನಿಗಿಂತ ಹೇಮಚಂದ್ರನು ವಿಶೇಷವಾಗಿ ಅಭಿವೃದ್ಧಿಮಾಡಿರುವನು.

(2) ಎಲ್ಲಾ ಮತದವರೂ ಸರಸ್ವತಿಯನ್ನು ವಾಗಧಿದೇವತೆಯೆಂದು ದೇವತಾಸ್ತ್ರೀಯನ್ನಾಗಿ ಅಂಗೀಕರಿಸಿರುವರು ಜೈನರು ಮಾತ್ರ ಸ್ತ್ರೀವ್ಯಕ್ತಿಯೆಂದು ಸಾಕಾರೆಯಾದ ಸರಸ್ವತಿಯನ್ನು ಅಂಗೀಕರಿಸಿಲ್ಲ. "ಪರಮ ಜಿನೇಂದ್ರವಾಣಿಯೆ ಸರಸ್ವತಿ ಬೇರದು ಪೆಣ್ಣ ರೂಪಮಂ ಧರಿಯಿಸಿ ನಿಂದುದಲ್ಲ"(ಪಂಪನಆದಿಪುರಾಣ-೧೧-೫೧೦)

(3) "ಇಯಮಮರದತ್ತ.........ಧ್ರಿಯತೇ ॥"—

(4) ಕಿರಾತ ಶಬ್ದವು ರತ್ನಾವಳಿ ನಾಟಕೆಯಲ್ಲಿಯೂ...(ಪರ್ಯಂತಾಶ್ರಯಿಭಿರ್ನಿಜಸ್ಯ ಸದೃಶಂ ನಾಮ್ನಃ ಕಿರಾತೈಃ ಕೃತಂ) ವಾಲ್ಮೀಕಿ ರಾಮಾಯಣದಲ್ಲಿಯೂ, "ಕುಬ್ಜ ಕೈರಾತಕಾವೃತಂ (ಅಯೋಧ್ಯಾ–15 ಸರ್ಗ–ಪ.೨೦) ಆದಿಪುರಾಣ ಮೊದಲಾದ ಕನ್ನಡ ಕಾವ್ಯಗಳಲ್ಲಿಯೂ ಕುಬ್ಜವಾಮನಬಧಿಕ ಮೂಕಕಿರಾತೋನ್ಮತ್ತಜಡ (ಆ.4–ಪು. ೫೪) ಕುಳ್ಳ ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿರುವುದು. ಈ ಅರ್ಥವುಳ್ಳ ಈ ಶಬ್ದವು ಅಮರಕೋಶದಲ್ಲಿ ದೊರಕುವುದಿಲ್ಲ. (...ಕಿರಾತಪುಳಿಂದಾ ಮ್ಲೇಚ್ಛಜಾತಯಃ ಎಂದು ಬೇಡನು ಎಂಬರ್ಥದಲ್ಲಿ ಅಮರಕೋಶದಲ್ಲಿ ಹೇಳಲ್ಪಟ್ಟಿದೆ.) ಗೋವಿಂದರಾಜರು ತಮ್ಮ ರಾಮಾಯಣ ವ್ಯಾಖ್ಯೆಯಲ್ಲಿ ಈ ಹಲಾಯುಧನನ್ನೇ ಕಿರಾತ ಶಬ್ದಾರ್ಥದಲ್ಲಿ ಪ್ರಮಾಣವಾಗಿ ಉದಾಹರಿಸಿರುವರು.

ಇದರಲ್ಲಿ ಅಮರಕೋಶದಂತೆ ವರ್ಗವಿಭಾಗಗಳಿಲ್ಲ. ಆದರೂ ವರ್ಗವಿಭಾಗವನ್ನುಮಾಡಿಕೊಳ್ಳಲನುಕೂಲವಾಗುವ ಕ್ರಮದಲ್ಲಿಶಬ್ದಗಳು ಸಂಗ್ರಹಿಸಲ್ಪಟ್ಟಿವೆ. ಕಾಂಡವಿಭಾಗವಿದ್ದರೂ ಅಮರಕೋಶದ ಕಾಂಡವಿಭಾಗಕ್ಕಿಂತ ಇದು ತೀರಾಭಿನ್ನವಾಗಿದೆ. ಇದರಲ್ಲಿ ಸ್ವರ್ಗ, ಮರ್ತ್ಯ, ಪಾತಾಳ, ಸಾಮಾನ್ಯ, ಅನೇಕಾರ್ಥ ಎಂದು ಕಾಂಡಗಳು ಐದು. ಮೊತ್ತದಲ್ಲಿ (೮೮೪) ಎಂಟು ನೂರೆಂಬತ್ತನಾಲ್ಕು ಶ್ಲೋಕಗಳಿವೆ. ಅನುಷ್ಟುಪ್ ಛಂದಸ್ಸಿನ ವೃತ್ತಗಳೇ ವಿಶೇಷವಾಗಿದ್ದರೂ ಅಲ್ಲಲ್ಲಿ ಆರ್ಯಾವೃತ್ತವೂ, ಶಾರ್ದೂಲವಿಕ್ರೀಡಿತ, ಉಪೇಂದ್ರವಜ್ರ ಮೊದಲಾದ ಸಮವೃತ್ತಗಳೂ ಕಂಡುಬರುವುವು. ಪ್ರಾಯಶಃ ಅಮರಕೋಶದಲ್ಲಿರುವ ಹಲವು ಪದಗಳು ಇದರಲ್ಲಿ ಕಂಡುಬರದಿದ್ದರೂ, ಅಮರಕೋಶದಲ್ಲಿಲ್ಲದ ಹಲವು ಉಪಯುಕ್ತವಾಗಿರುವ (ಸಂಸ್ಕೃತ ಕರ್ಣಾಟಕ ಮಹಾಕಾವ್ಯನಾಟಕಾದಿಗಳಲ್ಲಿ ಪ್ರಯುಕ್ತವಾಗಿರುವ) ಪದಗಳು ಇದರಲ್ಲಿ ಸಂಗ್ರಹಿಸಲ್ಪಟ್ಟಿರುವುವು. ಆದಕಾರಣ ಈ ಕೋಶವು ಸಂಸ್ಕೃತ ಕರ್ಣಾಟಕ ಪ್ರಾಚೀನ ಕಾವ್ಯಾದಿಗಳನ್ನು ಅಭ್ಯಾಸ ಮಾಡುವವರಿಗೆ ವಿಶೇಷವಾಗಿ ಪ್ರಯೋಜನಕಾರಿಯಾಗಿರುವುದು; ಸಂಸ್ಕೃತ ಪದಗಳಿಗೆ ತಕ್ಕ ಕರ್ಣಾಟಕ ಶಬ್ದಗಳನ್ನುಳ್ಳ ಇದರ ಟೀಕೆಯೂ ಕೂಡ ಕನ್ನಡಿಗರಿಗೂ ಸಂಸ್ಕೃತ ಭಾಷಾವಿದರಿಗೂ ಮತ್ತಷ್ಟು ಪ್ರಯೋಜನಕಾರಿಯಾಗಿರುವುದನ್ನು ಇಲ್ಲಿ ಮತ್ತೆ ಮತ್ತೆ ಒತ್ತಿ ಹೇಳಬೇಕಾಗಿಲ್ಲ.

ಅಭಿಧಾನರತ್ನಮಾಲಾ ಟೀಕೆ

ಈ ಟೀಕೆಯು ಭಟ್ಟಹಲಾಯುಧ ವಿರಚಿತವಾದ "ಅಭಿಧಾನರತ್ನಮಾಲೆ"ಯೆಂಬ ಸಂಸ್ಕೃತ ಅಥವಾ [1]ಸಮಸಂಸ್ಕೃತ ಶಬ್ದಗಳಿಗೆ ಸಮಾನಾರ್ಥಕವಾದ ಕನ್ನಡ ಪದಗಳಿಂದ (ಕೆಲವೆಡೆಗಳಲ್ಲಿ ಸಮಸಂಸ್ಕೃತ ಪದಗಳೂ ಉಂಟು) ಅರ್ಥವನ್ನು ಬರೆದಿರುವ ಒಂದು ನಿಘಂಟುವು. ನಿಘಂಟುವೆಂಬುದು ಕಾವ್ಯಗಳಲ್ಲೂ, ವ್ಯವಹಾರದಲ್ಲೂ ಪ್ರಯೋಗದಲ್ಲಿರುವ ಪದಗಳ ಅರ್ಥಜ್ಞಾನವನ್ನುಂಟುಮಾಡುವ [2]ಸಾಧನಗಳಲ್ಲಿ ಒಂದಾಗಿರುವುದು. ವ್ಯಾಕರಣ ಶಾಸ್ತ್ರವು ಪ್ರಯೋಗದಲ್ಲಿರುವ ಪದಗಳನ್ನು ಪ್ರಕೃತಿಪ್ರತ್ಯಯವಿಭಾಗಪೂರ್ವಕವಾಗಿ ವಿಂಗಡಿಸಿ ತೋರಿಸುವುದರ ಮೂಲಕ ಸಾಧುಶಬ್ದಾಸಾಧು ಶಬ್ದಗಳ ಸ್ವರೂಪವನ್ನು ಮಾತ್ರ ಮುಖ್ಯವಾಗಿ ನಿರ್ಣಯಿಸಿಕೊಡುವುದಲ್ಲದೆ, ಕೃದಂತ, ತದ್ಧಿತಾಂತ, ಸಮಾಸಪದಗಳು ನಾಮಾಖ್ಯಾತವಿಭಕ್ತಿ ಪ್ರತ್ಯಯ, ಕೃತ್ಪ್ರತ್ಯಯ, ತದ್ಧಿತಪ್ರತ್ಯಯ, ಸ್ತ್ರೀಪ್ರತ್ಯಯ ಸಮಾಸಶಕ್ತಿ ಇವುಗಳಲ್ಲಿರುವ ಅರ್ಥವನ್ನೂ ಗೌಣವೃತ್ತಿಯಿಂದ ತಿಳಿಸಿಕೊಡುವುದು. ಹೀಗೆ ವ್ಯಾಕರಣದಿಂದ ಸಿದ್ಧವಾದ ಪದಗಳಲ್ಲಿ ಏಕಾರ್ಥಕಪದಗಳನ್ನೂ ಅನೇಕಾರ್ಥಕಪದಗಳನ್ನೂ ಸಂಗ್ರಹಿಸಿ ಅವುಗಳ ಅರ್ಥವನ್ನು ತಿಳಿಸಿಕೊಡುವ ಎಂದರೆ ಪ್ರಾತಿಪದಿಕದ ಅಥವಾ ಲಿಂಗದ ಅರ್ಥವನ್ನೂ, ಲಿಂಗವನ್ನೂ ತಿಳಿಸಿಕೊಡುವ ಗ್ರಂಥವೇ ನಿಘಂಟುವು. ಇದಕ್ಕೆ ಕೋಶ ಅಭಿಧಾನಮಾಲೆ, ಅಭಿಧಾನಚಿಂತಾಮಣಿ

(1) ಸಮುದಿತಸಂಖ್ಯಾವ್ಯಯ ರಹಿ। ತಮೆನಿಸಿ ವರ್ತಿಪ ನಿಘಂಟುವಿನ ನಾಮಪದೋ॥
ತ್ತಮ ವರ್ಣಪ್ರಕೃತಿಗಳಂ। ಸಮಸಂಸ್ಕೃತವೆಸರನಿಟ್ಟು ಲಿಂಗಂಮಾಳ್ಪರ್॥ (ಶ. ದ. ಸೂ. ೬೨)

(2) ಶಕ್ತಿಗ್ರಹಂ ವ್ಯಾಕರಣೋಪಮಾನಕೋಶಾಪ್ತವಾಕ್ಯವ್ಯವಹಾರತಶ್ಚ॥
ವಾಕ್ಯಸ್ಯ ಶೇಷಾದ್ವಿವೃತೇರ್ವದನ್ತಿ ಸಾನ್ನಿಧ್ಯತಸ್ಸಿದ್ಧಪದಸ್ಯ ವೃದ್ಧಾಃ॥

ನಾಮಮಾಲೆ ಮೊದಲಾದ ಹಲವು ಹೆಸರುಗಳುಂಟು. ಸಂಸ್ಕೃತದಲ್ಲಿರುವ ನಾಮಲಿಂಗ (ಪ್ರಾದಿಪದಿಕ) ಶಬ್ದಗಳಿಗೆಲ್ಲಾ ವ್ಯುತ್ಪತ್ತಿಯುಂಟೆಂದೂ ಇಲ್ಲವೆಂದೂ ಎರಡು ಪಕ್ಷಗಳುಂಟು. ವ್ಯುತ್ಪತ್ತಿಪಕ್ಷವನ್ನು ಸ್ವೀಕರಿಸಿದರೆ ಎಲ್ಲ ಶಬ್ದಗಳೂ ಧಾತುವಿನಿಂದಲೇ ಯಾವುದಾದರೊಂದು ಅರ್ಥದ ಪ್ರತ್ಯಯದೊಡನೆ ಸೇರಿ ಹುಟ್ಟತಕ್ಕವುಗಳಾದುದರಿಂದ ವ್ಯಾಕರಣಶಾಸ್ತ್ರದ ಅಂಗವಾಗಿರುವ ಧಾತುಪಾಠಗಳ ಅರ್ಥವನ್ನು ತಿಳಿಯುವುದರಿಂದಲೇ ಇಂತಹ ಪದಗಳ[1] ಅರ್ಥವೂ ಸ್ಪಷ್ಟಪಡುವುದು. ಆದರೂ ಸಮಾನಾರ್ಥಕವಾದ ಪದಗಳನ್ನಾಗಲಿ ಪದಗಳಲ್ಲಿರುವ ಅನೇಕಾರ್ಥಗಳನ್ನಾಗಲಿ, ವಿಶೇಷಾರ್ಥವನ್ನಾಗಲಿ ಒಂದೆಡೆಯಲ್ಲಿ ಒಂದೇ ತಡವೆ ತಿಳಿದುಕೊಳ್ಳಲು ನಿಘಂಟುವಿನಿಂದಲ್ಲದೆ ವ್ಯಾಕರಣದಿಂದ ಶಕ್ಯವಿಲ್ಲ. ಆದುದರಿಂದ ಭಾಷಾಜ್ಞಾನಕ್ಕೆ ನಿಘಂಟುವೂ ಒಂದು ಮುಖ್ಯ ಸಾಧನವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ನಿಘಂಟುವಿನ ಪ್ರಯೋಜನವನ್ನು ವಾಮನನು ತನ್ನ ಕಾವ್ಯಾಲಂಕಾರ ಸೂತ್ರದಲ್ಲಿ ಹೀಗೆ ಹೇಳಿರುವನು- ಕವಿಯು ಕಾವ್ಯರಚನೆಯಲ್ಲಿ ಕಾವ್ಯರಚನಾಪ್ರವೇಶಕ್ಕೆ ಯೋಗ್ಯವಾದ ಪದವನ್ನು ಭಾವಿಸಬೇಕು; ಅದನ್ನು ಸಂದಿಗ್ಧಾರ್ಥವುಳ್ಳದನ್ನಾಗಿ ಗ್ರಹಿಸಕೂಡದು; ಸಂಧಿಗ್ಧಾರ್ಥವುಳ್ಳದೆಂದು ಬಿಡಲೂಕೂಡದು; ಇದರಿಂದ ಕಾವ್ಯಬಂಧಕ್ಕೆ ವಿಘ್ನವೊದಗುವುದು. ಆದುದರಿಂದ ಈ ಬಗೆಯಲ್ಲಿ ಕಾವ್ಯಬಂಧಕ್ಕೆ ಅತ್ಯಾವಶ್ಯಕವಾದ ಪದಾರ್ಥನಿಶ್ಚಯವು ಅಭಿಧಾನ ಕೋಶದಿಂದಲೇ ದೊರಕತಕ್ಕದು. ಅಪೂರ್ವವಾದ ಶಬ್ದಾರ್ಥಜ್ಞಾನವನ್ನುಂಟುಮಾಡುವುದೇ ಕೋಶದ ಉಪಯೋಗವೆಂದು ಕೆಲವರು ಹೇಳುವುದು ಯುಕ್ತವಾಗಿಲ್ಲ. ಏಕೆಂದರೆ ಅಪ್ರಯುಕ್ತವಾದ (ಅಪೂರ್ವಗಳಾದ) ಪದಗಳನ್ನು ಪ್ರಯೋಗಿಸುವುದೊಂದು ಕಾವ್ಯದೋಷವು. ಪ್ರಯುಕ್ತವಾದುದನ್ನೇ ಪ್ರಯೋಗಿಸುವುದಾದರೆ ಸಂದೇಹವೆಲ್ಲಿಂದ ಬರುವುದು? ಈ ಕಾರಣದಿಂದಲೂ ಕೋಶದ ಉಪಯೋಗವು ಆವಶ್ಯಕವಿಲ್ಲ ಎಂದು ವಾದಿಸುವುದೂ ಉಚಿತವಲ್ಲ. ಪ್ರಯುಕ್ತಪದಗಳ ಅರ್ಥವು ಪ್ರಯೋಗದಲ್ಲಿ ಸಾಮಾನ್ಯವಾಗಿ ತಿಳಿದುಬರುವುದು; ಹೇಗೆಂದರೆ ನೀವೀಶಬ್ದಕ್ಕೆ ಜಘನವಸ್ತ್ರಗ್ರಂಥಿಯೆಂಬ ಸಾಮಾನ್ಯಾರ್ಥವು ತಿಳಿದರೂ ಸ್ತ್ರೀಯರ ವಸ್ತ್ರಗ್ರಂಥಿಯೇ? ಪುರುಷರ ವಸ್ತ್ರಗ್ರಂಥಿಯೇ? ಎಂದು ಸಂದೇಹವು ಬರುವುದು. ಆಗ ಕೋಶವು ಈ ಸಂದೇಹವನ್ನು ನಿರ್ಣಯಿಸುವುದು. "ನೀವಿರಾಗ್ರಂಥನಂ ನಾರ್ಯಾ ಜಘನಸ್ಥಸ್ಯ ವಾಸಸಃ" ಎಂದು ನಾಮಮಾಲೆಯಲ್ಲಿ ಹೇಳಿದೆ. ಈ ವಾಮನನ ನಿರೂಪಣೆಯಿಂದ ಕಾವ್ಯಕರ್ತೃಗಳಿಗೂ, ಅಭ್ಯಾಸಿಗಳಿಗೂ ನಿಘಂಟುವು ಅತ್ಯಾವಶ್ಯಕವೆಂದು ಹೇಳಿದಂತಾಯಿತು.

ಕನ್ನಡಭಾಷೆಯಲ್ಲಿ ಗ್ರಾಂಥಿಕಭಾಷೆಯು ಸಂಪೂರ್ಣವಾಗಿ ಸಂಸ್ಕೃತಭಾಷೆಯ ಬೆಂಬಲದಿಂದಲೇ ಬಳೆದು ಬಂದಿರುವುದರಿಂದ[2] ಸಂಸ್ಕೃತಪದಗಳೇ ಪ್ರಾಚೀನಕನ್ನಡಕಾವ್ಯಗಳಲ್ಲಿ ಪರಿಮಿತಿಯಿಲ್ಲದೆ ತುಂಬಿರುವುವು. ಇದರ ಸಾಧುತ್ವವನ್ನು ಅಂದರೆ ಅನ್ಯಭಾಷಾ

(1) ಪಿತೃ—(ತಂದೆ) ಎಂಬ ಶಬ್ದವು ರಕ್ಷಣಾರ್ಥಕವಾದ ಪಾ (ರಕ್ಷಣೇ) ಎಂಬ ಧಾತುವಿನಿಂದ ಕರ್ತ್ರರ್ಥದಲ್ಲಿ ತೃ(ಋ) ಎಂಬ ಪ್ರತ್ಯಯವು ಸೇರಿ ಅಕಾರವು ಇಕಾರವಾಗಿ ಪರಿಣಮಿಸಿ 'ಪಿತೃ' ಎಂಬ ಶಬ್ದವು ಉತ್ಪನ್ನವಾಯಿತು ಎಂದು ಸಂಸ್ಕೃತವ್ಯಾಕರಣಜ್ಞರು ನಿರೂಪಿಸಿರುವರು. ಈ ಬಗೆಯ ಶಬ್ದನಿಷ್ಪತ್ತಿಗೆ ಉಣಾದಿಸೂತ್ರಗಳೆಂಬ ಪ್ರತ್ಯೇಕ ಸೂತ್ರಗಳೇ ಸಂಸ್ಕೃತ ವ್ಯಾಕರಣಗಳಲ್ಲಿವೆ.

(2) ವಿದಿತಮೆನಿಪ್ಪ ವ್ಯಯಮುಂ ತ್ಯದಾದಿಯುಂ... ಸಂಸ್ಕೃತದೊಳ್॥
ಪದವಿಧಿಯಂ... ಕನ್ನಡಕ್ಕೆ ಲಿಂಗಮಾಗವು ನಿಜದಿಂ ॥ ೬೩ ॥ ಎಂದು ಈ ಸೂತ್ರದಲ್ಲಿ ಹೇಳಿರುವುದರಿಂದ ಮೇಲಿನ ಸೂತ್ರದಲ್ಲಿ ನಿಘಂಟುವಿನ ನಾಮಪದಗಳು (ಸಂಸ್ಕೃತ ಪದಗಳು) ಎಂದು ಹೇಳಿರುವ ನಾಮಪದಗಳು ಸಂಸ್ಕೃತಭಾಷೆಗೆ ಸೇರಿದುವೆಂದು ಸ್ಪಷ್ಟವಾಗಿರುವುದು.

GOVERNMENT ORIENTAL MSS LIBRARY
20 OCT 1943

ಪದಗಳನ್ನು ಸ್ವಭಾಷೆಗೆ ಸೇರಿಸುವುದರ ಸಮರ್ಥನೆಮಾಡುವುದಕ್ಕಾಗಿಯೇ ಹದಿಮೂರನೆಯ ಶತಮಾನದಲ್ಲಿ "ಶಬ್ದಮಣಿದರ್ಪಣ"ವೆಂಬ ಕರ್ಣಾಟಕ ವ್ಯಾಕರಣವನ್ನು ಬರೆದ ಕೇಶಿರಾಜನು [1]ಸಂಸ್ಕೃತ ನಿಘಂಟುವಿನಲ್ಲಿ ಹೇಳಿರುವ ಸಂಖ್ಯಾವ್ಯಯತ್ಯದಾದಿ ಶತ್ರಂತರಹಿತಗಳಾದ ನಾಮಪದಗಳನ್ನೂ, ಮತ್ತೊಂದು ಪದಡೊಡನೆ ಸೇರಿ ಸಮಾಸವನ್ನು ಪಡೆದಿರುವ ಸಂಖ್ಯಾವ್ಯಯಾದಿ ಪ್ರಾದಿಪದಿಕಗಳನ್ನೂ ಕನ್ನಡಭಾಷೆಯ[2] ಪ್ರಾದಿಪದಿಕಗಳೆಂದು ಸ್ವೀಕರಿಸಿ ಕನ್ನಡ ನಾಮವಿಭಕ್ತಿ ಪ್ರತ್ಯಯವನ್ನು ಹತ್ತಿಸಿ ಕನ್ನಡ ಶಬ್ದಗಳನ್ನಾಗಿ ಸ್ವೀಕರಿಸಬಹುದೆಂದು ನಾಮಪ್ರಕರಣದ ೮೭–೮೩ನೆಯ ಸೂತ್ರಗಳಲ್ಲಿ ಹೇಳಿರುವನು. ಅಲ್ಲದೆ ಸಂಸ್ಕೃತ ಕೃದಂತಗಳೆನ್ನೆಲ್ಲಾ ಇಸುಪ್ರತ್ಯಯವನ್ನು ಸೇರಿಸಿ ಕನ್ನಡ ಧಾತುವನ್ನಾಗಿ ಸ್ವೀಕರಿಸಬಹುದೆಂದೂ ಹೇಳಿರುವನು. ಈಕಾರಣದಿಂದ ಸಂಸ್ಕೃತ ನಿಘಂಟುವಿನ ಅರ್ಥವನ್ನು ತಿಳಿದುಕೊಳ್ಳುವುದು ಕನ್ನಡ ಭಾಷಾಭಿಜ್ಞರಿಗೂ, ಕರ್ಣಾಟಕ ಕವಿಪುಂಗವರಿಗೂ ಅತ್ಯಾವಶ್ಯಕವೆಂದು ಮತ್ತೆ ಹೇಳಬೇಕಾಗಿಲ್ಲ. ಇದರಿಂದಲೇ ಪ್ರಾಚೀನರಾದ ಕನ್ನಡ ಪಂಡಿತರೂ, ಕವಿಗಳೂ ಸಂಸ್ಕೃತ ನಿಘಂಟುಗಳನ್ನು ಹಲವು ಬಗೆಯಲ್ಲಿ ಕನ್ನಡಿಗರ ಉಪಯೋಗಕ್ಕೆ ಬರುವಂತೆ ಮಾಡಿರುವರು; ಸಂಸ್ಕೃತ ನಿಘಂಟುವಿನಲ್ಲಿರುವ ಸಮಸಂಸ್ಕೃತ ಶಬ್ದಗಳಿಗೆ ಕನ್ನಡ ವಿಭಕ್ತಿಪ್ರತ್ಯಯವನ್ನು ಹತ್ತಿಸಿ ಕನ್ನಡ ಭಾಷೆಯಲ್ಲಿಯೇ ನಿಘಂಟುವನ್ನು ರಚಿಸಿರುವರು. ಅಭಿಧಾನ[3]ವಸ್ತುಕೋಶವೆಂಬ ಈ ಬಗೆಯ ಕರ್ಣಾಟಕ ಕೋಶವು ಈ ವಿಶ್ವವಿದ್ಯಾಲಯದ ಇದೇ ಕನ್ನಡ ಶಾಖೆಯಿಂದ ಪ್ರಕಟವಾಗಿರುವ ಕರ್ಣಾಟಕ ಗ್ರಂಥಮಾಲೆಯಲ್ಲಿ ನಾಲ್ಕನೆಯ ಗ್ರಂಥವಾಗಿ ಮುದ್ರಿತವಾಗಿರುವುದು. ಹದಿನಾಲ್ಕನೆಯ ಶತಮಾನದಲ್ಲಿ ಮಂಗರಸನೆಂಬವನು ಈ ಬಗೆಯ ನಿಘಂಟುವೊಂದನ್ನು ಬರೆದಿರುವನು[4]. ಸಂಸ್ಕೃತ ಭಾಷೆಯಲ್ಲಿ ಸಾರ್ವಜನೀ[5]ನವಾಗಿ ವಿಶೇಷವಾಗಿ ಸರ್ವತ್ರ ವ್ಯವಹಾರದಲ್ಲಿರುವ ಅಮರಕೋಶ, ಅಥವಾ ನಾಮಲಿಂಗಾನುಶಾಸನವೆಂಬ ನಿಘಂಟುವಿಗೂ ಕನ್ನಡದಲ್ಲಿ ನಾಚಿರಾಜೀಯವೆಂಬ ವ್ಯಾಖ್ಯೆಯು ಇರುವುದು. ಅಲ್ಲದೆ ಹಲವರು ಕನ್ನಡದಲ್ಲಿ ಈ ಅಮರಕೋಶಕ್ಕೆ ಟೀಕೆ[6]ಯನ್ನು

(1) ವೈದಿಕಮತಾನುಯಾಯಿಗಳಾದ ವೈಯಾಕರಣರು ನಾಮಪದಗಳ ಪ್ರಕೃತಿರೂಪವನ್ನು 'ಪ್ರಾದಿಪದಿಕ' ಎಂಪೂ ಜೈನಮತೀಯರಾದ ವೈಯಾಕರಣರು 'ಲಿಂಗ' ಎಂದೂ ಸಂಕೇತಮಾಡಿಕೊಂಡಿರುವರು.

(2) ಆಂಡಯ್ಯನೆಂಬ ಕನ್ನಡಕಬ್ಬಿಗನೊಬ್ಬನು ತಾನು ಬರೆದಿರುವ 'ಕಬ್ಬಿಗರಕಾವ' ಎಂಬ ಕಾವ್ಯದಲ್ಲಿ ಸಮಸಂಸ್ಕೃತ ಶಬ್ದವೊಂದನ್ನೂ ಪ್ರಯೋಗಿಸಿಲ್ಲವಾದರೂ ತದ್ಭವ ಶಬ್ದಗಳನ್ನು ಮಾತ್ರ ಬಿಟ್ಟು ಬಿಡಲು ಸಮರ್ಥನಾಗಲಿಲ್ಲ. ಈ ತದ್ಭವಗಳ ಮೂಲರೂಪಗಳು ಸಮಸಂಸ್ಕೃತಗಳೇ ಆಗಿರುವುದರಿಂದ ಪರ್ಯಾಯವಾಗಿ ಸಮಸಂಸ್ಕೃತಶಬ್ದಗಳನ್ನೂ ಉಪಯೋಗಿಸಿದಂತಾಯಿತಲ್ಲದೆ ಸಂಪೂರ್ಣವಾಗಿ ದೂರೀಕರಿಸಿ ಕನ್ನಡ ಭಾಷೆಯಲ್ಲಿ ದೇಶ್ಯಶಬ್ದವೊಂದರಿಂದಲೇ ಕಾವ್ಯವನ್ನು ನಿರ್ವಾಹಮಾಡಿದಂತಾಗಲಿಲ್ಲ.

(3) ಈ ಬಗೆಯ ಕೋಶಕ್ಕೂ ಮತ್ತೆ ಕನ್ನಡದಲ್ಲಿ ರಚಿಸಿರುವ ಟೀಕೆಗಳೂ ಉಂಟು. ನಮಗೆ ದೊರಕಿರುವ ಅಭಿಧಾನವಸ್ತುಕೋಶದ ಟೀಕೆಯನ್ನೂ ಆ ಗ್ರಂಥದ ಪರಿಶಿಷ್ಟವಾಗಿ ಮುದ್ರಿಸಬೇಕೆಂಬ ಉದ್ದೇಶವಿರುವುದು.

(4) ಇದು ಷಟ್ಪದೀ ರೂಪದಲ್ಲಿರುವುದು.

(5) ಇದರ ಕಾಂಡ ಮತ್ತು ವರ್ಗವಿಭಾಗ ಕ್ರಮವು ಸುಕರವಾಗಿರುವುದು. ಇದರಲ್ಲಿ ನಾಮಗಳ ಮತ್ತು ಲಿಂಗಗಳ ವಿಷಯಗಳೆರಡೂ ಹೇಳಲ್ಪಟ್ಟಿರುವುದರಿಂದ ಕೋಶಲಕ್ಷಣವು ಸಂಪೂರ್ಣವಾಗಿರುವುದು. ವಿವರಣವು ಸುಗಮವಾಗಿರುವುದು. ಮಂಗಳಪದ್ಯವೂ ಸರ್ವಸಮತೀಯರಿಗೂ ಸಂಬಂಧಪಟ್ಟಂತೆ ಸಾಮಾನ್ಯ ಶಬ್ದದಿಂದ ಗ್ರಥಿತವಾಗಿರುವುದು. ಮತಕ್ಕೆ ಸಂಬಂಧಪಟ್ಟ ದೇವತಾವಿಶೇಷವೊಂದನ್ನೂ ಹೇಳಿಲ್ಲ. ಆದುದರಿಂದಲೇ ಇದಕ್ಕೆ ವೈದಿಕಮತದ ಕ್ಷೀರಸ್ವಾಮಿ ಮೊದಲಾದವರೂ, ಜೈನಮತದ ನಾಚಿರಾಜ ಮೊದಲಾದವರೂ, ಬೌದ್ಧಮತದ ಸುಭೂತಿಚಂದ್ರ ಮೊದಲಾದವರೂ ವ್ಯಾಖ್ಯಾನಗಳನ್ನು ಬರೆದಿರುವರು. ಇದು ಟಿಬೆಟಿಯನ್ ಭಾಷೆಗೂ ಪರಿವರ್ತಿತವಾಗಿದೆ.

(6) ಲಿಂಗಾಭಟ್ಟೀಯ ಅಥವಾ ಗುರುಭಾವಪ್ರಬೋಧಿಕೆಯೆಂಬ ಟೀಕೆಯು ದ್ರಾವಿಡಭಾಷೆಗಳಲ್ಲೆಲ್ಲಾ ಬರೆಯಲ್ಪಟ್ಟಿದೆ. ಟೀಕಮುರವೆಂಬ ಕನ್ನಡದ ಮತ್ತೊಂದು ಟೀಕೆಯೂ ಉಂಟು.

ರಚಿಸಿರುವರು. ಕನ್ನಡಭಾಷೆಯಲ್ಲಿ ಗ್ರಂಥಗಳನ್ನು ಮೊತ್ತಮೊದಲು ಬರೆಯಲಾರಂಭಿಸಿದ ಜೈನರೇ ಸಂಸ್ಕೃತ ನಿಘಂಟುಗಳನ್ನು ಕನ್ನಡಕ್ಕೆ ಪರಿವರ್ತಿಸುವುದಕ್ಕೂ, ಟೀಕೆಗಳನ್ನು ಬರೆಯುವುದಕ್ಕೂ ಮೊದಲುಮಾಡಿದವರೆಂದು ಹೇಳಲು ಯಾವ ಸಂದೇಹವೂ ಇಲ್ಲ. 1145ರಲ್ಲಿದ್ದ ಎರಡನೆಯ ನಾಗವರ್ಮನೇ ಈ ಹಲಾಯುಧ ನಿಘಂಟು, ಅಮರಕೋಶ, ಹೇಮಚಂದ್ರನ ಅಭಿಧಾನಚಿಂತಾಮಣಿ ಈ ಮೂರನ್ನೂ ಸಂಗ್ರಹಿಸಿ ಸ್ವೋಪಜ್ಞವಾದ ಕಾಂಡವರ್ಗವಿಭಾಗಗಳುಳ್ಳ ಅಭಿಧಾನವಸ್ತುಕೋಶವೆಂಬ ಕೋಶಗ್ರಂಥವನ್ನು ಬರೆದುದಲ್ಲದೆ, ಹಲಾಯುಧನ ಅಭಿಧಾನರತ್ನಮಾಲಾ ಕೋಶಕ್ಕೂ ಕನ್ನಡ ಟೀಕೆಯನ್ನು ಬರೆದು ಇತರರಿಗೆ ಮಾರ್ಗದರ್ಶಿಯಾಗಿರುವನು. ಈ ಹಲಾಯುಧ ಟೀಕೆಯನ್ನೂ ಮ. ರಾ. ಕಿಟ್ಟಲ್ ಸಾಹೇಬರು ತಮ್ಮಲ್ಲಿದ್ದ ಹಸ್ತಲಿಖಿತ ಪ್ರತಿಯ ಆಧಾರದಿಂದ ತಾವು ರಚಿಸಿದ ನವೀನವಾದ ಕನ್ನಡ ಇಂಗ್ಲಿಷ್ ಡಿಕ್ಷನರಿಯಲ್ಲಿ ಹಲವೆಡೆಗಳಲ್ಲಿ ಪ್ರಮಾಣವಾಗಿ ಉದಾಹರಿಸಿರುವರು. ಇದೊಂದು ಪ್ರಾಚೀನ ಟೀಕೆಯೆಂದು ತಮ್ಮ ಮುನ್ನುಡಿಯಲ್ಲಿಯೂ ಹೇಳಿರುವರು.

ಅಭಿಧಾನರತ್ನಮಾಲಾ ಟೀಕೆ ಮತ್ತು ನಾಗವರ್ಮ II

ಹಸ್ತಲಿಖಿತ ಪ್ರತಿಯಲ್ಲಿ ಈ ಟೀಕಾಕಾರನೆಂಬುದನ್ನು ಎಲ್ಲಿಯೂ ಹೇಳಿಲ್ಲ. ಕವಿಯ ವಿಷಯವನ್ನು ತಿಳಿಸತಕ್ಕ ಪ್ರಕರಣಾಂತ್ಯ ಗದ್ಯಭಾಗವೂ ಇಲ್ಲ. ಈ ಟೀಕೆಯನ್ನು ತಮ್ಮ ಡಿಕ್ಷನರಿಯಲ್ಲಿ ಹಲವೆಡೆಗಳಲ್ಲಿ ಉದಾಹರಿಸಿರುವ ಕಿಟ್ಟಲ್ ಸಾಹೇಬರು ಕೂಡ ಈ ಹಲಾಯುಧ ವ್ಯಾಖ್ಯೆಯು [1]ಒಂದು ಪ್ರಾಚೀನವಾದ ವ್ಯಾಖ್ಯೆಯೆಂದು ಮಾತ್ರ ಹೇಳಿರುವರಲ್ಲದೆ ಗ್ರಂಥಕರ್ತೃವಾರೆಂದು ಹೇಳಿಲ್ಲ; ಕರ್ಣಾಟಕ ಕವಿ ಚರಿತ್ರೆಯನ್ನು ವಿಪುಲವಾಗಿ ಮೂರು ಸಂಪುಟಗಳಲ್ಲಿ ಬರೆದಿರುವ ಶ್ರೀಮಾನ್ ಆರ್. ನರಸಿಂಹಾಚಾರ್ಯರೂ ಕೂಡ ಸಂಸ್ಕೃತ ನಿಘಂಟುಗಳಿಗೆ ಕನಡದಲ್ಲಿ ಪ್ರಾಚೀನ ಟೀಕೆಗಳು ದೊರಕುತ್ತವೆ ಎಂದಿಷ್ಟು ಮಾತ್ರ ಹೇಳಿರುವರು. ಎರಡನೆಯ ನಾಗವರ್ಮನು (ಸು. 1145) "ಅಭಿಧಾನ ವಸ್ತುಕೋಶ" ವೆಂಬ ಪದ್ಯರೂಪದಲ್ಲಿರುವ ಸಮಸಂಸ್ಕೃತ ಪದಗಳ ನಿಘಂಟನ್ನು ಬರೆದವನೆಂದು ಕರ್ಣಾಟಕ ಕವಿಚರಿತ್ರಕಾರರು ತಮ್ಮ ಕವಿಚರಿತ್ರೆಯ ಒಂದನೆಯ ಭಾಗದಲ್ಲಿ ಸಿದ್ಧಾಂತಮಾಡಿರುವರು. ಮದ್ರಾಸ್ ಯೂನಿವರ್ಸಿಟಿಯಲ್ಲಿ ಮುದ್ರಿತವಾಗಿರುವ ಅಭಿಧಾನ ವಸ್ತುಕೋಶದ ಮುನ್ನುಡಿಯಲ್ಲಿಯೂ ಈ ವಿಷಯವು ಸ್ಥಿರೀಕೃತವಾಗಿರುವುದು. ಈ ಅಭಿಧಾನ ವಸ್ತುಕೋಶವು ವಿಶೇಷವಾಗಿ ಈ ಅಭಿಧಾನರತ್ನಮಾಲೆಯ ಆಧಾರದಿಂದಲೇ ಬರೆಯಲ್ಪಟ್ಟಿರುವುದು. ಅಲ್ಲದೆ ಅಭಿಧಾನವೆಂಬ ನಾಮೈಕದೇಶಸಾಮ್ಯವೂ ಈ ಎರಡರಲ್ಲಿಯೂ ಕಂಡುಬರುವುದು. ಅಭಿಧಾನರತ್ನಮಾಲೆಯ ಟೀಕೆಯಲ್ಲಿ ದೊರಕುವ ಹಲವು ದೇಶ್ಯಶಬ್ದಗಳು ಅಭಿಧಾನವಸ್ತು ಕೋಶದಲ್ಲಿ ದೊರಕುವುವು. ಅಭಿಧಾನವಸ್ತುಕೋಶವೂ, ಈ ಹಲಾಯುಧ ಟೀಕೆಯೂ ಆರಾ ಲೈಬ್ರೆರಿಯಲ್ಲಿರುವ ಒಂದೇ ಓಲೆಯ ಪ್ರತಿಯಲ್ಲಿ ಬರೆಯಲ್ಪಟ್ಟಿರುವುವು. ಈ ಕಾರಣಗಳಿಂದ ಈ ಎರಡನೆಯ ನಾಗವರ್ಮನೇ (ಅಭಿಧಾನವಸ್ತುಕೋಶದ ಕರ್ತೃವೇ) ಈ ಅಭಿಧಾನರತ್ನಮಾಲೆಯ ಟೀಕೆಯನ್ನೂ ಬರೆದಿರುವನೆಂದು ಊಹಿಸಲು ಅವಕಾಶವುಂಟು. ಈ ಟೀಕೆಯು ತುಂಬಾ ಪ್ರಾಚೀನವಾದು

(1) ಕಿಟ್ಟಲ್ ಡಿಕ್ಷನರಿಯ ಮುನ್ನುಡಿ.

ದೆಂದು ಹೇಳಿರುವ ಕಿಟ್ಟಲ್ ಸಾಹೇಬರ ಮಾತೂ ಈ ವಿಷಯಕ್ಕೆ ಒತ್ತಾಸೆಯಾಗಿರುವುದು. ಈ ಟೀಕೆಯಲ್ಲಿ ದೇಶ್ಯಪದಗಳು ವಿಶೇಷವಾಗಿದ್ದರೂ ಹೆಚ್ಚಾಗಿ ಸಮಸಂಸ್ಕೃತ ಪದಗಳೂ ಸೇರಿವೆ.

ಈ ಗ್ರಂಥಕರ್ತೃವೆಂದು ಊಹಿಸಲ್ಪಟ್ಟಿರುವ ಎರಡನೆಯ ನಾಗವರ್ಮನ ವಿಚಾರವು ಈ ಯೂನಿವರ್ಸಿಟಿಯಲ್ಲಿ ಈ ಶಾಖೆಯಿಂದಲೇ ಮುದ್ರಿತವಾಗಿರುವ ಅಭಿಧಾನವಸ್ತುಕೋಶದ ಮುನ್ನುಡಿಯಲ್ಲಿ ವಿಸ್ತರವಾಗಿ ಪ್ರತಿಪಾದಿಸಲ್ಪಟ್ಟಿರುವುದರಿಂದ ಮತ್ತೆ ಅದನ್ನೇ ಇಲ್ಲಿಯೂ ವಿಮರ್ಶಿಸುವುದು ಚರ್ವಿತಚರ್ವಣವಾಗಿ ಅಧ್ಯೇತೃಗಳಿಗೆ ಬೇಸರವಾಗುವುದೆಂದು ಇಲ್ಲಿ ಹೇಳದೆ ಬಿಟ್ಟಿದೆ. ಆ ಮುನ್ನುಡಿಯಿಂದ ಈ ಕವಿಯ ವಿಷಯವನ್ನು ಪರ್ಯಾಪ್ತವಾಗಿ ತಿಳಿದುಕೊಳ್ಳಲು ಅವಕಾಶವುಂಟು.

ಕಿಟ್ಟಲ್ ಸಾಹೇಬರು ಉದಾಹರಿಸಿರುವ ಕೆಲವು ಶಬ್ದಗಳನ್ನು ಮಾದರಿಗಾಗಿ ಇಲ್ಲಿ ಬರೆದು ಈ ಮುನ್ನುಡಿಯನ್ನು ಉಪಸಂಹಾರಮಾಡಿದೆ.

ಕಿಟ್ಟೆಲ್ ಡಿಕ್ಷನರಿ ಪುಟಸಂಖ್ಯೆ	ಶಬ್ದಗಳು	ಹಲಾಯುಧ ಟೀಕೆ (ಹಸ್ತಲಿಖಿತ ಪ್ರತಿಯಾದುದರಿಂದ ಪುಟಸಂಖ್ಯೆ ಕೊಟ್ಟಿಲ್ಲವೆಂದು ತೋರುವುದು)
10	ಅಗರ್ತೆ (ಅಗತೆ) Hla S.	ಅಗರ್ತೆ
10	ಅಗಲಿತ್ತು	ವಿಶಂಕಟ, ವಿಶಾಲ Hla
12	ಅಗಟಿದುದು	ಅಖಾತ, ದೇವಖಾತ Hla
12	ಅಗಟು	(ಖೇಯ, ಪರಿಖೆ) ಖಾತೆ Hla
18	ಅಂಕುಶಚಾರಣ	ಯಾತ (Hla)
23	ಅಚ್ಚು	ದುರೋದರ (Hla) ಇತ್ಯಾದಿ.

3--3--1940
O. R. Institute,

H. Sesha Iyengar.
Junior Lecturer in Kannada,
University of Madras.

ತಿದ್ದುಪಡಿ

ಪುಟ	ಶ್ಲೋಕ	ಪಂಕ್ತಿ	ಅಶುದ್ಧ	ಶುದ್ಧ
6	–	4(ಟೀ)	ದಕಿಮೆಂಬು	ದಕಿಯೆಂಬು
9	–	9	ಉಶನಾ	ಉಶನಾಃ,
11	–	11	ದಿಷ್ಣ್ಯಃ	ಧಿಷ್ಣ್ಯಃ
11	–	17	ಉಚ್ಚೈಃಶ್ಯವಾಃ	ಉಚ್ಚೈಃಶ್ರವಾಃ
14	–	15	ಸೇವಧಿಃ	ಶೇವಧಿಃ
16	92	6	ಭೀಭತ್ಸಾ	ಬೀಭತ್ಸಾ
,,	96	13	ಘೋವತೀ	ಘೋಷವತೀ
,,	–	5	ಭೀಭತ್ಸಃ	ಬೀಭತ್ಸಃ
20	–	15	ಪೆಸರ್–	ಪೆಸರ್.
21	–	14	ಉಪಸನಾ	ಉಪಾಸನಾ
23	–	12	ಆಶ್ಲೀಲ	ಅಶ್ಲೀಲ
35	–	15	ಊರಿಂಗೆದೂರ	ಊರಿಂಗನತಿದೂರ?
37	–	12	ಮೆಂಬುದ	ಮೆಂಬುದು
38	–	6	ಹಸ್ತೀನೀ	ಹಸ್ತಿನೀ
39	–	11	ಕೋಟ್ಮೃಗ	ಕೋಟ್ಮೃಗ
41	–	7	ಕುಜ್	ಕುಜ಼್
42	–	11	ವರಾಳಾ	ವರಲಾ
43	–	5	ಮುಕ್ಷಿಕಾ	ಮಕ್ಷಿಕಾ
46	–	8	ಅರಿಷ್ಟಂ	ತಕ್ರಂ, ಅರಿಷ್ಟಂ
47	–	13	ನಿವೃತ್	ನೀವೃತ್
49	–	6	ಚುತು	ಚತು
59	206	–	ಕ್ಷೀಚ್ಛಾಚಿಘತ್ಸಾ	ಕ್ಷಾಪ್ಸಾಜಿಘತ್ಸಾ
63	–	6	ಈಬಾ	ಈ೨.ಬಾ
67	–	5	ಅದೇಶೀ	ಆದೇಶೀ
67	–	16	ಬ್ರಾಹ್ಮಣೇ	ಬ್ರಹ್ಮಣೇ
68	–	16	ಕ್ರತುಃ	ಕ್ರತುಃ
69	–	8	ಅವಭೃತ	ಅವಭೃಥ
69	–	14	ಯಾಸುತೀಳಃ	ಯಾಸುತೀವಳಃ
73	–	6	ಚೂರ್ನಂ	ಚೂರ್ಣಂ
74	–	6	॥ ೨೯೫ ॥	॥ ೨೯೪, ೨೯೫ ॥
74	–	12	ಶಿವಕಃ	ಧ್ರುವಕಃ ಶಿವಕಃ

ಪುಟ	ಶ್ಲೋಕ	ಪಂಕ್ತಿ	ಅಶುದ್ಧ	ಶುದ್ಧ
75	–	3	ಅಯೋಧ	ಆಯೋಧನಃ, ಆಹವಃ
81	–	4	ವಬ್ತಿ	ವಕ್ತಿ
87	392	–	ಕುವಕ್ಶೋ	ಕುಚವಕ್ಶೋ
89	385	–	ವೇಪಃ	ವೇಷಃ
92	407	–	ಪಾಕದ	ಪಾದಕ
95	–	5	ಸ್ತಂಭ	ಸ್ತಂಬ
98	445	5	ನಿಷ್ಟೂಃ	ನಿಷ್ಠೂಃ
99	452	5	ರ್ಶಸಂಯೋ	ರ್ಶಸಾಯೋ
101	466	5	ಸ್ನಾಸ್ಯತ	ಸ್ನಾಸ್ಯತ್
104	–	17	ಯಕೃತ್	ಕಾಲಖಂಡ, ಯಕೃತ್
105	–	13	ದೃಕ್ಸ್ನತ್ರಿಃ	ದೃಕ್ಸ್ಪ್ರತಿಃ
106	–	9	ಉರ್ಚದ	ಉರ್ಚಿದ
114	–	11	ವರಂ	ಪರಂ
115	–	13	ಸಂಚ	ಚಂಚ
118	–	6	ಷ್ಟಿತಂ	ಷ್ಟಿತಂ, ಮುಕ್ತ
122	–	56	ಕುಸು	ಕುಸೃ
123	–	13	ಪ್ರಸ್ತಾ	ಉಕ್ತಿಪ್ರಸ್ತಾ
125	–	10	ಮೋಪಂ	ಮೋಘಂ
136	–	33	ಪಿಪರ್ಜ	ಪ್ರಪರ್ಜ

॥ ಶ್ರೀ ॥

ಭಟ್ಟಹಲಾಯುಧವಿರಚಿತಾ

ಅಭಿಧಾನ ರತ್ನಮಾಲಾ

(ಮಂಗಲಂ)

೧—ಶಬ್ದಬ್ರಹ್ಮ ಯದೇಕಂ ಯಚ್ಚೈತನ್ಯಂ ಚ ಸರ್ವಭೂತಾನಾಮ್ ॥
ಯತ್ಪರಿಣಾಮಸ್ತ್ರಿಭುವನಮಖಿಲಮಿದಂ ಜಯತಿ ಸಾ ವಾಣೀ ॥ ೧ ॥

ನಾಗವರ್ಮ ವಿರಚಿತಮಪ್ಪ ಟೀಕು.

ಟೀಕು ॥ ಶಬ್ದಬ್ರಹ್ಮ-ಶಬ್ದವೆಂಬ ಬ್ರಹ್ಮವು, ಯತ್—ಆವುದಾನುಂ, ಏಕಂ-ಒಂದೇ, ಯತ್—ಆವುದೊಂದು, ಸರ್ವಭೂತಾನಾಂ—ಎಲ್ಲಾ ಪ್ರಾಣಿಗಳ್ಗಂ, ಚೈತನ್ಯಂ—ಚೈತನ್ಯಮಾಯ್ತು, ತ್ರಿಭುವನಂ—ಮೂಱುಲೋಕಮುಂ, ಅಖಿಲಂ ಇದಂ—ಇದೆಲ್ಲಂ, ಯತ್ಪರಿಣಾಮಃ—ಆವುದೊಂದಱ ಬೆಳಸು, ಸಾ ವಾಣೀ—ಆ ಸರಸ್ವತಿ, ಜಯತಿ—ಒಪ್ಪುತಿರ್ದುದು ॥ ೧ ॥

(ಪೀಠಿಕೆ)

೨—ಇಯಮಮರದತ್ತವರರುಚಿ ಭಾಗುರಿ(1) ಗೋಪಾಲಿತಾದಿಶಾಸ್ತ್ರೇಭ್ಯಃ ॥
ಅಭಿಧಾನರತ್ನಮಾಲಾ ಕವಿಕಂಠವಿಭೂಷಣಾರ್ಥಮುದ್ಧ್ರಿಯತೇ ॥ ೨ ॥

ಟೀಕು ॥ ಇಯಂ—ಇದು, ಅಮರದತ್ತ—ಅಮರದತ್ತನುಂ, ವರರುಚಿ-ವರರುಚಿಯುಂ, ಭಾಗುರಿ-ಭಾಗುರಿಯುಂ (ವಾಗುರಿಯುಂ), ಗೋಪಾಲಿತಾದಿ—ಗೋಪಾಲಿತನುಂ ಮೊದಲಾದವರ, ಶಾಸ್ತ್ರೇಭ್ಯಃ-ಶಾಸ್ತ್ರಂಗಳತ್ತಣಿಂದಂ, ಅಭಿಧಾನ ರತ್ನಮಾಲಾ—ಶಬ್ದಂಗಳೆಂಬ ರತ್ನಂಗಳ ಮಾಲೆ, ಕವಿಕಂಠ ವಿಭೂಷಣಾರ್ಥಂ—ಕವಿಗಳ ಕೊರಲಿಂಗಲಂಕಾರಮಾಗೆ, ಉದ್ಧ್ರಿಯತೇ—ಕೋಯಲ್ಪಟ್ಟಿಹುದು ॥ ೨ ॥

---

(1) ವೋಪಾಲಿತ

೧. ಸ್ವರ್ಗಕಾಂಡಂ

೩—ಸ್ವಃ ಸ್ವರ್ಗಃ ಸುರಸದ್ಮ ತ್ರಿದಶಾವಾಸ ಸ್ತ್ರಿವಿಷ್ಟಪಂ ತ್ರಿದಿವಂ ॥
ದ್ಯೌರ್ಗೌರಮರ್ತ್ಯಭುವನಂ ನಾಕಸ್ಸ್ಯಾದೂರ್ಧ್ವಲೋಕಶ್ಚ ॥ ೩ ॥

೪—ಆದಿತ್ಯಾಸ್ತ್ರಿದಶಾಸ್ಸುರಾಸ್ಸುಮನಸಸ್ಸ್ವರ್ಗೌಕಸೋ ದೇವತಾ ।
ಗೀರ್ವಾಣಾ ಋಭವೋಽಮರಾಶ್ಚ ಮರುತೋ ವೃಂದಾರಕಾ ನಿರ್ಜರಾಃ ॥
ಅಸ್ವಪ್ನಾ ವಿಬುಧಾಸ್ತ್ರಿವಿಷ್ಟಪಸದೋ ಲೇಖಾಸ್ಸುಪರ್ವಾಣ ಇ ।
ತ್ಯಾಖ್ಯಾತಾ ಅಮೃತಾಶನಾ ಅನಿಮಿಷಾ ದೇವಾಸ್ತಥಾ ದೈವತಮ್ ॥ ೪ ॥

೫—ಅಸುರಾ ದಾನವಾ ದೈತ್ಯಾ ದೈತೇಯಾಸ್ಸುರಶತ್ರವಃ ॥
ಪೂರ್ವದೇವಾಶ್ಶುಕ್ರಶಿಷ್ಯಾಃ ಪಾತಾಳನಿಲಯಾಸ್ಸ್ಮೃತಾಃ ॥ ೫ ॥

೬—ಬ್ರಹ್ಮಾ ಸ್ರಷ್ಟಾ ಧಾತಾ ಪರಮೇಷ್ಠೀ ಪದ್ಮಭೂಸ್ಸುರಜ್ಯೇಷ್ಠಃ ॥
ವೇಧಾ ವಿಧಿರ್ವಿರಿಂಚೋ ಹಿರಣ್ಯಗರ್ಭಶ್ಶತಾನಂದಃ ॥ ೬ ॥

೭—ಶಂಭು ಸ್ಸ್ವಯಂಭೂರ್ದ್ರುಹಿಣಶ್ಚತುರ್ವಕ್ತ್ರಃ ಪ್ರಜಾಪತಿಃ ॥
ಪಿತಾಮಹೋ ಜಗತ್ಕರ್ತಾ(1) ವಿಶ್ವಾತ್ಮಾ ಕಮಲಾಸನಃ ॥ ೭ ॥

ಸ್ವರ್ಗಕಾಂಡಂ

ಟೀ ॥ ಸ್ವರ್, ಸ್ವರ್ಗಃ, ಸುರಸದ್ಮ, ತ್ರಿದಶಾವಾಸಃ, ತ್ರಿವಿಷ್ಟಪಂ, ತ್ರಿದಿವಂ, ದ್ಯೌಃ, ಗೌಃ, ಅಮರ್ತ್ಯಭುವನಂ, ನಾಕಃ(ಸ್ಯಾತ್) ಊರ್ಧ್ವಲೋಕಃ(ಚ) ಈ ೧೧ **ದೇವಲೋಕದ** ಪೆಸರ್ ॥೩॥

ಟೀ ॥ ಆದಿತ್ಯಃ, ತ್ರಿದಶಃ, ಸುರಃ, ಸುಮ(ನಾಃ)ನಸ್, ಸ್ವರ್ಗೌ(ಕಾಃ)ಕಸ್, ದೇವತಾ, ಗೀರ್ವಾಣಃ, ಋಭುಃ, ಅಮರಃ (ಚ), ಮರುತ್, ವೃಂದಾರಕಃ, ನಿರ್ಜರಃ, ಅಸ್ವಪ್ನಃ, ವಿಬುಧಃ, ತ್ರಿವಿಷ್ಟಪಸದ್, ಲೇಖಃ, ಸುಪರ್ವಾ (ಇತ್ಯಾಖ್ಯಾತಾ), ಅಮೃತಾಶನಃ, ಅನಿಮಿಷಃ, ದೇವಃ(ತಥಾ) ದೈವತಮ್ ಈ ೨೧ **ದೇವರ್ಕಳ** ಪೆಸರ್ ॥ ೪ ॥

ಟೀ ॥ ಅಸುರಃ, ದಾನವಃ, ದೈತ್ಯಃ, ದೈತೇಯಃ, ಸುರಶತ್ರುಃ, ಪೂರ್ವದೇವಃ, ಶುಕ್ರಶಿಷ್ಯಃ, ಪಾತಾಲನಿಲಯಃ (ಸ್ಮೃತಾಃ) ಈ ೮ **ಅಸುರರ** ಪೆಸರ್ ॥ ೫ ॥

ಟೀ ॥ ಬ್ರಹ್ಮಾ, ಸ್ರಷ್ಟಾ, ಧಾತಾ, ಪರಮೇಷ್ಠೀ, ಪದ್ಮಭೂಃ, ಸುರಜ್ಯೇಷ್ಠಃ, ವೇಧಾಃ, ವಿಧಿಃ, ವಿರಿಂಚಃ, ಹಿರಣ್ಯಗರ್ಭಃ, ಶತಾನಂದಃ, ಶಂಭುಃ, ಸ್ವಯಂಭೂಃ, ದ್ರುಹಿಣಃ, ಚತುರ್ವಕ್ತ್ರಃ, ಪ್ರಜಾಪತಿಃ, ಪಿತಾಮಹಃ, ಜಗತ್ಕರ್ತಾ, ವಿಶ್ವಾತ್ಮಾ, ಕಮಲಾಸನಃ. ಈ ೨೦ **ಬ್ರಹ್ಮನ** ಪೆಸರ್—॥ ೬-೭ ॥

---

(1) ವಿರಂಚಿಃ

೮—ವಾಗ್ವಾಣೀ ಭಾರತೀ ಭಾಷಾ ಗೌರ್ಗೀರ್ಬ್ರಾಹ್ಮೀ ಸರಸ್ವತೀ ॥
ಓಂಕಾರಃ ಪ್ರಣವಃ ಪ್ರೋಕ್ತಸ್ತ್ರಯೋ ವೇದಾಸ್ತ್ರಯಿೀ ಸ್ಮೃತಾ ॥ ೮ ॥

೯—ವೇದ ಶ್ಶ್ರುತಿಸ್ತಥಾಮ್ನಾಯಃ ಸ್ವಾಧ್ಯಾಯಶ್ಛಂದ ಆಗಮಃ ॥
(1)ವೇದಾಂತಂ ಚ ರಹಸ್ಯಂ ಚ ಬುಧೈರುಪನಿಷನ್ಮತಾ ॥ ೯ ॥

೧೦—ಊಹಸ್ತರ್ಕೋಽನುಮಾನೋಕ್ತಿ ರ್ಮೀಮಾಂಸಾ ಸ್ಯಾದ್ವಿಚಾರಣಾ ॥
ಸ್ಮೃತಾಃ ಕೃತಾಂತ ರಾದ್ಧಾಂತ ಸಿದ್ಧಾಂತ ಸಮಯಾಸ್ಸಮಾಃ ॥ ೧೦ ॥

೧೧—ಈಶಾನಶ್ಶಶಿಶೇಖರಃ ಪಶುಪತಿಃ ಶೂಲೀ ಶಿವಶ್ಶಂಕರಃ ।
ಶರ್ವಶ್ಶಂಭು ರುಮಾಪತಿಶ್ಚ ಗಿರಿಶಃ ಶ್ರೀಕಂಠ ಉಗ್ರೋ ಹರಃ ॥
ಸರ್ವಜ್ಞ ಸ್ತ್ರಿಪುರಾಂತಕ ಸ್ತ್ರಿಣಯನೋ ರುದ್ರಃ ಕಪರ್ದೀ ಭವೋ ।
ಭೂತೇಶಃ ಪರಮೇಶ್ವರೋಽಂಧಕರಿಪುರ್ದಕ್ಷಾಧ್ವರಧ್ವಂಸಕಃ (ಕೃತ್) [॥ ೧೧ ॥

೧೨—ಸ್ಥಾಣುಸ್ಸ್ರಷ್ಟಾ ಧೂರ್ಜಟಿರ್ವಾಮದೇವಃ ।
ಕಾಮಧ್ವಂಸೀ ವ್ಯೋಮಕೇಶಃ ಕಪಾಲೀ ॥ K.392
ನೀಲಗ್ರೀವೋ ವಹ್ನಿರೇತಾಃ ಪಿನಾಕೀ ।
ಭೀಮೋ ಭರ್ಗಃ ಕೃತ್ತಿವಾಸಾ ವೃಷಾಂಕಃ ॥ ೧೨ ॥

ಟೀ ॥ ವಾಕ್ (ಗ್), ವಾಣೀ, ಭಾರತೀ, ಭಾಷಾ, ಗೌಃ, ಗೀಃ, ಬ್ರಾಹ್ಮೀ, ಸರಸ್ವತೀ ಈ ೮ **ಸರಸ್ವತಿಯ** ಪೆಸರ್.

ಓಂಕಾರಃ, ಪ್ರಣವಃ (ಪ್ರೋಕ್ತಃ) ಈ ೨ **ಓಂಕಾರಕ್ಕೆ** ಪೆಸರ್.

(ತ್ರಯೋವೇದಾಃ) **ಮೂಱು ವೇದಂಗಳುಮಂ** ತ್ರಯಿೀ ಯೆಂಬುದು ॥ ೮ ॥

ಟೀ ॥ ವೇದಃ, ಶ್ರುತಿಃ, (ತಥಾ) ಆಮ್ನಾಯಃ, ಸ್ವಾಧ್ಯಾಯಃ, ಛಂದಃ, ಆಗಮಃ ಈ ೬ **ವೇದದ** ಪೆಸರ್.

ವೇದಾಂತಂ, ರಹಸ್ಯಂ, ಉಪನಿಷತ್(ದ್) ಈ ೩ **ವೇದಾಂತ**ಮೆಂಬ ಶಾಸ್ತ್ರದ ಪೆಸರ್ ॥ ೯॥

ಟೀ ॥ ಊಹಃ, ತರ್ಕಃ, ಅನುಮಾನೋಕ್ತಿಃ ಈ ೩ **ತರ್ಕದ** ಪೆಸರ್.

(ವಿಚಾರಣಾಸ್ಯಾತ್) ಮೀಮಾಂಸಮೆಂದು **ವಿಚಾರದ** ಪೆಸರ್.

ಕೃತಾಂತಃ, ರಾದ್ಧಾಂತಃ, ಸಿದ್ಧಾಂತಃ, ಸಮಯಃ (ಸಮಾಸ್ಸ್ಮೃತಾಃ) ಈ ೪ **ಸಿದ್ಧಾಂತದ** ಪೆಸರ್ ॥ ೧೦ ॥

ಟೀ ॥ ಈಶಾನಃ, ಶಶಿಶೇಖರಃ, ಪಶುಪತಿಃ, ಶೂಲೀ, ಶಿವಃ, ಶಂಕರಃ, ಶರ್ವಃ, ಶಂಭುಃ, ಉಮಾಪತಿಃ, (ಚ) ಗಿರಿಶಃ, ಶ್ರೀಕಂಠಃ, ಉಗ್ರಃ, ಹರಃ, ಸರ್ವಜ್ಞಃ, ತ್ರಿಪುರಾಂತಕಃ, ತ್ರಿಣಯನಃ, ರುದ್ರಃ. ಕಪರ್ದೀ, ಭವಃ, ಭೂತೇಶಃ, ಪರಮೇಶ್ವರಃ, ಅಂಧಕರಿಪುಃ, ದಕ್ಷಾಧ್ವರಧ್ವಂಸಕಃ(ಕೃತ್), ಸ್ಥಾಣುಃ, ಸ್ರಷ್ಟಾ, ಧೂರ್ಜಟಿಃ, ವಾಮದೇವಃ, ಕಾಮಧ್ವಂಸೀ, ವ್ಯೋಮಕೇಶಃ, ಕಪಾಲೀ, ನೀಲಗ್ರೀವಃ, ವಹ್ನಿರೇತಾಃ, ಪಿನಾಕೀ, ಭೀಮಃ, ಭರ್ಗಃ, ಕೃತ್ತಿವಾಸಾಃ, ವೃಷಾಂಕಃ—॥ ೧೧—೧೨ ॥

---

(1) ವೇದಾಂತಶ

೧೩—ಅಹಿರ್ಬುಧ್ನ್ಯೋ ವಿರೂಪಾಕ್ಷ್ಶಿಪಿವಿಷ್ಟೋ ಗಣಾಧಿಪಃ ॥
ಗಂಗಾಧರೋ ಮಹಾದೇವೋ ಮೃಡಸ್ಸ್ಯಾನ್ನೀಲಲೋಹಿತಃ ॥ ೧೩ ॥

೧೪—ಪಿನಾಕಂ ಸ್ಯಾದಜಗವಂ ಪ್ರಮಥಾಸ್ತು ಗಣಾಸ್ಸ್ಮೃತಾಃ ॥
ಕಪರ್ದೋಽಸ್ಯ ಜಟಾಬಂಧಸ್ತಂಡುಸ್ಸ್ಯಾನ್ನಂದಿಕೇಶ್ವರಃ ॥ ೧೪ ॥

೧೫—ರುದ್ರಾಣೀ ಶರ್ವಾಣೀ ಕಾಳೀ ಕಾತ್ಯಾಯಿನೀ ಭವಾನೀ ಚ ॥
ಆರ್ಯಾಂಬಿಕಾ ಮೃಡಾನೀ ಹೈಮವತೀ ಪಾರ್ವತೀ ಗೌರೀ ॥ ೧೫ ॥

೧೬—ಉಮಾ ಭಗವತೀ ದುರ್ಗಾ ಚಂಡೀ ದಾಕ್ಷಾಯಣೀ ಶಿವಾ ॥
ಅಪರ್ಣಾ ಸ್ಯಾನ್ಮಹಾದೇವೀ ಗಿರಿಜಾ ಮೇನಕಾತ್ಮಜಾ ॥ ೧೬ ॥

೧೭—(1) ಬ್ರಹ್ಮಾಣ್ಯಾದ್ಯಾಸ್ಸ್ಮೃತಾಃ ಸಪ್ತ ದೇವತಾ ಮಾತರೋ ಬುಧೈಃ ॥
ಬ್ರಾಹ್ಮೀ ಮಾಹೇಶ್ವರೀ ಚೈವ ಕೌಮಾರೀ ವೈಷ್ಣವೀ ತಥಾ ॥ ೧೭ ॥

೧೮—ವಾರಾಹೀ ಚೈವ (2) ಮಾಹೇಂದ್ರೀ ಚಾಮುಂಡಾಸ್ಸಪ್ತ ಮಾತರಃ ॥
ಚಾಮುಂಡಾ ಕರ್ಣಮೋಟೀ ಚ ಚರ್ಚಾ ಸ್ಯಾದ್ಭೈರವೀ ತಥಾ ॥ ೧೮ ॥

೧೯—ಹೇರಂಬೋ ಲಂಬೋದರ ಆಖುರಥೋ ಗಣಪತಿಶ್ಚ ಗಜವದನಃ ॥
ಪರಶುಧರ ಏಕದಂತೋ ವಿನಾಯಕೋ ವಿಘ್ನರಾಜಶ್ಚ ॥ ೧೯ ॥

ಟೀ ॥ ಅಹಿರ್ಬುಧ್ನ್ಯಃ, ವಿರೂಪಾಕ್ಷಃ, ಶಿಪಿವಿಷ್ಟಃ, ಗಣಾಧಿಪಃ, ಗಂಗಾಧರಃ, ಮಹಾದೇವಃ, ಮೃಡಃ, (ಸ್ಯಾತ್) ನೀಲಲೋಹಿತಃ,— ಈ ೪೫ **ಮಹಾದೇವರ** ಪೆಸರ್ ॥ ೧೩ ॥

ಟೀ ॥ ಪಿನಾಕಂ, ಅಜಗವಂ (ಸ್ಯಾತ್) ಈ ೨ **ಮಹಾದೇವರ ಬಿಲ್** (ಲ್ಲು)

(ತುಗಣಾಃಸ್ಮೃತಾಃ) ಆತನ **ಗಣಂಗಳಂ** ಪ್ರಮಥರೆಂಬುದು, (ಅಸ್ಯ ಜಟಾಬಂಧಃ) ಆತನ **ಜಡೆಯ ಕಟ್ಟು** ಕಪರ್ದವೆಂಬುದು, ತಂಡುವೆಂಬುದು (ಸ್ಯಾತ್) **ನಂದಿಕೇಶ್ವರನ** ಪೆಸರ್ ॥ ೧೪ ॥

ಟೀ ॥ ರುದ್ರಾಣೀ, ಶರ್ವಾಣೀ, ಕಾಳೀ, ಕಾತ್ಯಾಯಿನೀ, ಭವಾನೀ, (ಚ) ಆರ್ಯಾ, ಅಂಬಿಕಾ, ಮೃಡಾನೀ, ಹೈಮವತೀ, ಪಾರ್ವತೀ, ಗೌರೀ, ಉಮಾ, ಭಗವತೀ, ದುರ್ಗಾ, ಚಂಡೀ, ದಾಕ್ಷಾಯಣೀ, ಶಿವಾ, ಅಪರ್ಣಾ (ಸ್ಯಾತ್) ಮಹಾದೇವೀ, ಗಿರಿಜಾ, ಮೇನಕಾತ್ಮಜಾ— ಈ ೨೧ **ಗೌರೀದೇವಿಯ** ಪೆಸರ್ ॥ ೧೫-೧೬ ॥

ಟೀ ॥ ಬ್ರಾಹ್ಮೀ, ಮಾಹೇಶ್ವರೀ, ಕೌಮಾರೀ, ವೈಷ್ಣವೀ, ವಾರಾಹೀ, ಮಾಹೇಂದ್ರೀ, ಚಾಮುಂಡಾ ಈ ೭ ಸಪ್ತ **ಮಾತೃಕೆಯರ** ಪೆಸರ್—(ಸಪ್ತ ಮಾತರಃ)

ಚಾಮುಂಡಾ, ಕರ್ಣಮೋಟೀ, ಚರ್ಚಾ, ಭೈರವೀ, ಈ ೪ **ಚಾಮುಂಡಿಯ** ಪೆಸರ್ ॥ ೧೭-೧೮ ॥

ಟೀ ॥ ಹೇರಂಬಃ, ಲಂಬೋದರಃ, ಆಖುರಥಃ, ಗಣಪತಿಃ, (ಚ) ಗಜವದನಃ, ಪರಶುಧರಃ, ಏಕದಂತಃ, ವಿನಾಯಕಃ, ವಿಘ್ನರಾಜಃ— ಈ ೯ **ಬೆನಕನ** ಪೆಸರ್ ॥ ೧೯ ॥

---

(1) ಈ ಶಬ್ದಕ್ಕೆ ಅರ್ಥವನ್ನು ಬೇರೆ ಬರೆದಿಲ್ಲ. ಬ್ರಾಹ್ಮೀತ್ಯಾದ್ಯಾಃ-(ಅಮರ) (2) ಚೇಂದ್ರಾಣೀ (ಅಮ)

೨೦—ಗೌರೀಪುತ್ರ ಷ್ಷಣ್ಮುಖಃ ಶಕ್ತಿಪಾಣಿಃ ।
ಕ್ರೌಂಚಾರಾತಿಃ ಕಾರ್ತಿಕೇಯೋ ವಿಶಾಖಃ ॥
ಸ್ಕಂದಃ ಸ್ವಾಮೀ ತಾರಕಾರಿಃ ಕುಮಾರಃ ।
ಸೇನಾನೀಸ್ಸ್ಯಾದಗ್ನಿಭೂರ್ಬಾಹುಲೇಯಃ ॥ ೨೦ ॥

೨೧—ಗಾಂಗೇಯೋ ಬ್ರಹ್ಮಚಾರೀ ಚ ಗುಹೋ ಬರ್ಹಿಣವಾಹನಃ ।
ಮಹಾಸೇನೋ ಮಹಾತೇಜಾಃ ಶರಜನ್ಮಾ ಚ ಕಥ್ಯತೇ ॥ ೨೧ ॥

೨೨—ವಿಷ್ಣುಃ ಕೃಷ್ಣಃ ಕೇಶವೋ ಮುಂಜಿಕೇ(ಶೀ)ಶ ।
ಶ್ರೀವತ್ಸಾಂಕಃ ಶ್ರೀಪತಿಃ ಪೀತವಾಸಾಃ ॥
ವಿಷ್ವಕ್ಸೇನೋ ವಿಶ್ವರೂಪೋ ಮುರಾರಿಃ ।
ಶೌರಿಶ್ಶಾರ್ಙ್ಗೀ ಪದ್ಮನಾಭೋ ಮುಕುಂದಃ ॥ ೨೨ ॥

೨೩—ಗೋವಿಂದೋ ಧರಣೀಧರಃ ಸುಪರ್ಣಕೇತುಃ ।
ವೈಕುಂಠೋ ಜಲಶಯನಶ್ಚತುರ್ಭುಜಶ್ಚ ॥
ದೈತ್ಯಾರಿರ್ಮಧುಮಥನೋ ರಥಾಂಗಪಾಣಿ ।
ರ್ದಾಶಾರ್ಹಃ ಕ್ರತುಪುರುಷೋ ವೃಷಾಕಪಿಃ ಸ್ಯಾತ್ ॥ ೨೩ ॥

೨೪—ಜನಾರ್ದನಾಧೋಕ್ಷಜವಾಸುದೇವಂ ।
ದಾಮೋದರಂ ಶ್ರೀಧರಮಚ್ಯುತಂ ಚ ॥
ಉಪೇಂದ್ರಮಿಂದ್ರಾವರಜಂ ಚ ಬಭ್ರುಂ ।
ಹರಿಂ ಹೃಷೀಕೇಶ ಮುದಾಹರಂತಿ ॥ ೨೪ ॥

೨೫—ಆತ್ಮಭೂಃ ಪುಂಡರೀಕಾಕ್ಷಃ ಶ್ರೀವತ್ಸೋ ವಿಷ್ಟರಶ್ರವಾಃ ॥
ನಾರಾಯಣೋ ಜಗನ್ನಾಥೋ ವನಮಾಲೀ ಗದಾಧರಃ ॥ ೨೫ ॥

ಟೀ ॥ ಗೌರೀಪುತ್ರಃ, ಷಣ್ಮುಖಃ, ಶಕ್ತಿಪಾಣಿಃ, ಕ್ರೌಂಚಾರಾತಿಃ, ಕಾರ್ತಿಕೇಯಃ, ವಿಶಾಖಃ, ಸ್ಕಂದಃ, ಸ್ವಾಮೀ, ತಾರಕಾರಿಃ, ಕುಮಾರಃ, ಸೇನಾನೀಃ (ಸ್ಯಾತ್) ಅಗ್ನಿಭೂಃ, ಬಾಹುಲೇಯಃ, ಗಾಂಗೇಯಃ, ಬ್ರಹ್ಮಚಾರೀ, (ಚ) ಗುಹಃ, ಬರ್ಹಿಣವಾಹನಃ, ಮಹಾಸೇನಃ, ಮಹಾತೇಜಾಃ, ಶರಜನ್ಮಾ (ಚ ಕಥ್ಯತೇ)— ಈ ೨೦ **ಕಾರ್ತಿಕೇಯನ** ಪೆಸರ್ ॥ ೨೦-೨೧ ॥

ಟೀ ॥ ವಿಷ್ಣುಃ, ಕೃಷ್ಣಃ, ಕೇಶವಃ, ಮುಂಜಿಕೇಶಃ, ಶ್ರೀವತ್ಸಾಂಕಃ, ಶ್ರೀಪತಿಃ, ಪೀತವಾಸಾಃ, ವಿಷ್ವಕ್ಸೇನಃ, ವಿಶ್ವರೂಪಃ, ಮುರಾರಿಃ, ಶೌರಿಃ, ಶಾರ್ಙ್ಗೀ, ಪದ್ಮನಾಭಃ, ಮುಕುಂದಃ, ಗೋವಿಂದಃ, ಧರಣೀಧರಃ, ಸುಪರ್ಣಕೇತುಃ, ವೈಕುಂಠಃ, ಜಲಶಯನಃ, ಚತುರ್ಭುಜಃ (ಚ) ದೈತ್ಯಾರಿಃ, ಮಧುಮಥನಃ, ರಥಾಂಗಪಾಣಿಃ, ದಾಶಾರ್ಹಃ, ಕ್ರತುಪುರುಷಃ, ವೃಷಾಕಪಿಃ (ಸ್ಯಾತ್) ಜನಾರ್ದನಃ, ಅಧೋಕ್ಷಜಃ, ವಾಸುದೇವಃ, ದಾಮೋದರಃ, ಶ್ರೀಧರಃ, ಅಚ್ಯುತಃ, ಉಪೇಂದ್ರಃ, ಇಂದ್ರಾವರಜಃ, ಬಭ್ರುಃ, ಹರಿಃ, ಹೃಷೀಕೇಶಃ (ಉದಾಹರಂತಿ-ಹೇಳುವರು) ಆತ್ಮಭೂಃ, ಪುಂಡರೀಕಾಕ್ಷಃ, ಶ್ರೀವತ್ಸಃ, ವಿಷ್ಟರಶ್ರವಾಃ, ನಾರಾಯಣಃ, ಜಗನ್ನಾಥಃ, ವನಮಾಲೀ, ಗದಾಧರಃ— ಈ ೪೫ **ನಾರಾಯಣನ** ಪೆಸರ್—೨೨—೨೩—೨೪—೨೫.

(೨೬—(1)ಸನಾತನೋಽಜಿತ(ನ)ಶ್ಶಂ ಭುರ್ವಿಧಿರ್ವೇಧಾ ಗದಾಗ್ರಜಃ ॥
ಕೈಟಭಾರಿರಜೋ(2) ವಿಷ್ಣುಃ ಕಂಸಜಿತ್ಪುರುಷೋತ್ತಮಃ ॥ ೨೬ ॥)
೨೭—ಚಕ್ರಂ ಸುದರ್ಶನಂ ಚಾಪಃ ಶಾರ್ಙ್ಗಂ ಕೌಮೋದಕೀ ಗದಾ ॥
(3) ಖಡ್ಗೋಽಸ್ಯ ನಂದಕಃ ಶಂಖಃ ಪಾಂಚಜನ್ಯಃ ಪ್ರಕೀರ್ತಿತಃ ॥ ೨೭ ॥
೨೮—ಕೌಸ್ತುಭೋ ವಕ್ಷಸಿ ಮಣಿಃ ಶ್ರೀವತ್ಸೋಽಸ್ಯ ಚ ಲಾಂಛನಮ್ ॥
ವಸುದೇವಸ್ತು ಕಥಿತೋ ಬುಧೈರಾನಕದುಂದುಭಿಃ ॥ ೨೮ ॥
೨೯—ಬಲದೇವೋ ಬಲಭದ್ರೋ ಮುಸಲೀ ನೀಲಾಂಬರಃ ಪ್ರಲಂಬಘ್ನಃ ॥
ಸೀರೀ ಚ ಸಾತ್ವತಸ್ಸ್ಯಾತ್ ತಾಲಧ್ವಜ ಏಕಕುಂಡಲೋಽನಂತಃ ॥ ೨೯ ॥
೩೦—ಸಂಕರ್ಷಣೋ ರೌಹಿಣೇಯಃ ಕಾಳಿಂದೀಕರ್ಷಣೋ ಬಲಃ ॥
ರೇವತೀರಮಣೋ ರಾಮಃ ಕಾಮಪಾಲೋ ಹಲಾಯುಧಃ ॥ ೩೦ ॥
೩೧—ವಿಹಂಗರಾಜೋ ಗರುಡೋ ಗುರುತ್ಮಾನ್ ।
ತಾರ್ಕ್ಷ್ಯಸ್ಸುಪರ್ಣೀ ತನಯಸ್ಸುಪರ್ಣಃ ॥
ಸ್ಯಾದ್ವೈನತೇಯಃ ಪವನಾಶನಾಶಃ ।
ಸುರೇಂದ್ರಜಿತ್ಕಶ್ಯಪ ನಂದನಶ್ಚ ॥ ೩೧ ॥
೩೨—ಲಕ್ಷ್ಮೀಃ ಶ್ರೀಃ ಕಮಲಾ ಪದ್ಮಾ ಪದ್ಮವಾಸಾ ಹರಿಪ್ರಿಯಾ।
ಕ್ಷೀರೋದತನಯಾ ಮಾ ಚ ಶಬ್ದಜ್ಞೈರಿಂದಿರಾ ಸ್ಮೃತಾ ॥ ॥ ೩೨ ॥

ಟೀ ॥ ಸನಾತನಃ, ಅಜಿತಃ, (ಜಿನಃ) ಶಂಭುಃ, ವಿಧಿಃ, ವೇಧಾಃ, ಗದಾಗ್ರಜಃ, ಕೈಟಭಾರಿಃ, ಅಜಃ, ವಿಷ್ಣುಃ, ಕಂಸಜಿತ್, ಪುರುಷೋತ್ತಮಃ—ಈ ೧೧ **ನಾರಾಯಣನ** ಪೆಸರ್ ॥ ೨೬ ॥

ಟೀ ॥ ನಾರಾಯಣನ **ಚಕ್ರಮಂ** ಸುದರ್ಶನಮೆಂಬುದು, ಆತನ **ಬಿಲ್ಲಂ** ಶಾರ್ಙ್ಗ ಮೆಂಬುದು, ಆತನ **ಗದೆಯಂ** ಕೌಮೋದಕಿಯೆಂಬುದು, ಆತನ **ಅಡ್ಡಾಯುಧಮಂ** ನಂದಕ ಮೆಂಬುದು,ಆತನ **ಶಂಖಮಂ** ಪಾಂಚಜನ್ಯಮೆಂಬುದು, ಆತನವಕ್ಷಸ್ಸ್ಥಳದೊಳಿರ್ಪ **ಮಣಿಯಂ** ಕೌಸ್ತುಭಮೆಂಬುದು, ಆತನ **ಕುಱುಪು** ಶ್ರೀವತ್ಸಮೆಂಬುದು, ಆತನ **ತಂದೆಯಂ** ವಸುದೇವ ನೆಂಬುದು, ಆ **ವಸುದೇವನೇ** ಆನಕದುಂದುಭಿಯೆನಿಸಿಕೊಂಬನು. ॥ ೨೭—೨೮ ॥

ಟೀ ॥ ಬಲದೇವಃ, ಬಲಭದ್ರಃ, ಮುಸಲೀ, ನೀಲಾಂಬರಃ, ಪ್ರಲಂಬಘ್ನಃ, ಸೀರೀ(ಚ) ಸಾತ್ವತಃ, (ಸ್ಯಾತ್) ತಾಲಧ್ವಜಃ, ಏಕಕುಂಡಲಃ, ಅನಂತಃ, ಸಂಕರ್ಷಣಃ, ರೌಹಿಣೇಯಃ, ಕಾಳಿಂದೀಕರ್ಷಣಃ, ಬಲಃ, ರೇವತೀರಮಣಃ, ರಾಮಃ, ಕಾಮಪಾಲಃ, ಹಲಾಯುಧಃ—ಈ ೧೮ **ಬಲದೇವನ** ಪೆಸರ್ ॥ ೨೯-೩೦ ॥

ಟೀ ॥ ವಿಹಂಗರಾಜಃ, ಗರುಡಃ, ಗರುತ್ಮಾನ್, ತಾರ್ಕ್ಷ್ಯಃ, ಸುಪರ್ಣೀತನಯಃ, ಸುಪರ್ಣಃ, ವೈನತೇಯಃ, ಪವನಾಶನಾಶಃ, ಸುರೇಂದ್ರಜಿತ್, ಕಶ್ಯಪನಂದನಃ (ಚ)—ಈ ೧೦ **ಗರುಡನ** ಪೆಸರ್ ॥ ೩೧ ॥

ಟೀ ॥ ಲಕ್ಷ್ಮೀಃ, ಶ್ರೀಃ, ಕಮಲಾ, ಪದ್ಮಾ, ಪದ್ಮವಾಸಾಃ, ಹರಿಪ್ರಿಯಾ, ಕ್ಷೀರೋದ ತನಯಾ, ಮಾ, ಇಂದಿರಾ (ಶಬ್ದಜ್ಞೈಃ ಸ್ಮೃತಾ)-ಈ ೯ **ಲಕ್ಷ್ಮಿಯ** ಪೆಸರು ॥ ೩೨ ॥

---

(1) ಒಂದು ಮೂಲಪ್ರತಿಯಲ್ಲಿ ಈ ಪದ್ಯ ಹೆಚ್ಚಿದೆ. (2) ಜಿಷ್ಣುಃ (3) ಖಡ್ಗಃ ಸುನಂದಕಃ. (ಪಾಠಾಂ)

೩೩—ಪ್ರದ್ಯುಮ್ನೋ ಮಕರಧ್ವಜೋ ಮನಸಿಜಃ ಸಂಕಲ್ಪಜನ್ಮಾಂಗಜಃ ।
ಪಂಚೇಷುಃ ಕುಸುಮಾಯುಧಶ್ಚ ಮದನೋ ಮಾರಃ ಸ್ಮರೋ ಮನ್ಮಥಃ ॥
ಕಂದರ್ಪೋ ಝಷಕೇತನೋ ರತಿಪತಿ ಶ್ಶ್ರೀನಂದನೋ ಹೃಚ್ಛಯಃ ।
ಕಾಮಃ ಶಂಬರಸೂದನೋ ಮಧುಸಖಃ ಶೃಂಗಾರಯೋನಿಸ್ಸ್ಮೃತಃ ॥ ೩೩ ॥
೩೪—ದರ್ಪಕಃ ಶೂರ್ಪಕಾರಾತಿರನಂಗೋ ವಿಷಮಾಯುಧಃ ।
ಆತ್ಮಭೂರ್ಮನಸಿಶಯಃ ಪುಷ್ಪಧನ್ವಾ ಮನೋಭವಃ ॥ ೩೪ ॥(1)
೩೫—ಆದಿತ್ಯಃ ಸವಿತಾ ಸಹಸ್ರಕಿರಣಃ ಪ್ರದ್ಯೋತನೋ ಭಾಸ್ಕರ ।
ಸ್ತಿಗ್ಮಾಂಶುಸ್ತರಣಿಸ್ತಥಾ ದಿನಮಣಿ ರ್ಭಾಸ್ವಾನ್ವಿವಸ್ವಾನ್ ಹರಿಃ ।
ಮಾರ್ತಂಡಸ್ತಪನೋ ವಿಕರ್ತನ ಇ(2)ನಃ ಪೂಷಾ ಪತಂಗೋ ಭಗಃ ।
ಸೂರ್ಯೋ ಗೋಪತಿರರ್ಯಮಾ ದಿನಕರಃ ಸೂರೋಽಂಶುಮಾಲೀ ರವಿಃ ॥ ೩೫ ॥
೩೬—ಮಿಹಿರೋ ವಿರೋಚನೋಽರ್ಕಸ್ತಿಮಿರರಿಪುರ್ದ್ಯುಮಣಿರಂಶುಮಾನಂಶುಃ ॥
ಹರಿದಶ್ವಃ ಸಪ್ತಾಶ್ವಃ ಪ್ರಭಾಕರೋ ಭಾನುಮಾನ್ಭಾನುಃ ॥ ೩೬ ॥
೩೭—ಬ್ರಧ್ನೋ ಹಂಸಃ ಖಗೋ ಮಿತ್ರಃ ಚಿತ್ರಭಾನುರಹಸ್ಪತಿಃ ।
ಕರ್ಮಸಾಕ್ಷೀ ಜಗಚ್ಚಕ್ಷು ರ್ದ್ವಾದಶಾತ್ಮಾ ತ್ರಯೀತನುಃ ॥ ೩೭ ॥
೩೮—ರೋಚಿಃ ಶೋಚಿರಭೀಷುಃ ಪ್ರದ್ಯೋತಗಭಸ್ತಿರಶ್ಮಿಘೃಣಿ ಕಿರಣಾಃ ।
ರುಚಿರುಗ್ದೀಧಿತಿದೀಪ್ತಿದ್ಯುತಿ ಪ್ರಭಾ ಭಾ ವಿಭಾ ಭಾಸಃ ॥ ೩೮ ॥

ಟೀ ॥ ಪ್ರದ್ಯುಮ್ನಃ, ಮಕರಧ್ವಜಃ, ಮನಸಿಜಃ, ಸಂಕಲ್ಪಜನ್ಮಾ, ಅಂಗಜಃ, ಪಂಚೇಷುಃ, ಕುಸುಮಾಯುಧಃ, ಮದನಃ, ಮಾರಃ, ಸ್ಮರಃ, ಮನ್ಮಥಃ, ಕಂದರ್ಪಃ, ಝಷಕೇತನಃ, ರತಿಪತಿಃ, ಶ್ರೀನಂದನಃ, ಹೃಚ್ಛಯಃ, ಕಾಮಃ, ಶಂಬರಸೂದನಃ, ಮಧುಸಖಃ, ಶೃಂಗಾರಯೋನಿಃ,(ಸ್ಮೃತಃ) ದರ್ಪಕಃ, ಶೂರ್ಪಕಾರಾತಿಃ, ಅನಂಗಃ, ವಿಷಮಾಯುಧಃ, ಆತ್ಮಭೂಃ, ಮನಸಿಶಯಃ, ಪುಷ್ಪ ಧನ್ವಾ, ಮನೋಭವಃ-ಈ ೨೮ **ಕಾಮ**(ದೇವ)ನ ಪೆಸರ್ ॥ ೩೩-೩೪ ॥

ಟೀ ॥ ಆದಿತ್ಯಃ, ಸವಿತಾ, ಸಹಸ್ರಕಿರಣಃ, ಪ್ರದ್ಯೋತನಃ, ಭಾಸ್ಕರಃ, ತಿಗ್ಮಾಂಶುಃ, ತರಣಿಃ, (ತಥಾ) ದಿನಮಣಿಃ, ಭಾಸ್ವಾನ್, ವಿವಸ್ವಾನ್, ಹರಿಃ, ಮಾರ್ತಂಡಃ, ತಪನಃ, ವಿಕರ್ತನಃ, ಇನಃ, ಪೂಷಾ, ಪತಂಗಃ, ಭಗಃ, ಸೂರ್ಯಃ, ಗೋಪತಿಃ, ಅರ್ಯಮಾ, ದಿನಕರಃ, ಸೂರಃ, ಅಂಶುಮಾಲೀ, ರವಿಃ, ಮಿಹಿರಃ, ವಿರೋಚನಃ, ಅರ್ಕಃ, ತಿಮಿರರಿಪುಃ, ದ್ಯುಮಣಿಃ, ಅಂಶುಮಾನ್, ಅಂಶುಃ, ಹರಿದಶ್ವಃ, ಸಪ್ತಾಶ್ವಃ, ಪ್ರಭಾಕರಃ, ಭಾನುಮಾನ್, ಭಾನುಃ, ಬ್ರಧ್ನಃ, ಹಂಸಃ, ಖಗಃ, ಮಿತ್ರಃ, ಚಿತ್ರಭಾನುಃ, ಅಹಸ್ಪತಿಃ, ಕರ್ಮಸಾಕ್ಷೀ, ಜಗಚ್ಚಕ್ಷುಃ, ದ್ವಾದಶಾತ್ಮಾ, ತ್ರಯೀತನುಃ,-ಈ ೪೭ **ಆದಿತ್ಯನ** ಪೆಸರ್ ॥ ೩೫-೩೬-೩೭ ॥

ಟೀ ॥ ರೋಚಿಃ, ಶೋಚಿಃ, ಅಭೀಷುಃ, ಪ್ರದ್ಯೋತಃ, ಗಭಸ್ತಿಃ, ರಶ್ಮಿಃ, ಘೃಣಿಃ, ಕಿರಣಃ, ರುಚಿಃ, ರುಕ್, ದೀಧಿತಿಃ, ದೀಪ್ತಿಃ, ದ್ಯುತಿಃ, ಪ್ರಭಾ, ಭಾ, ವಿಭಾ, ಭಾಃ,—॥ ೩೮ ॥

---

(1) ಮಾಪತ್ಯಮಿರಜಶ್ಚೈವ ಕಾಮಪತ್ನೀ ರತಿಃ ಸ್ಮೃತಾ ॥ ಅನಿರುದ್ಧಶ್ಚ ತತ್ಪೂನುರುಷಾರಮಣ ಇಷ್ಯತೇ ॥ (ಈ ಪದ್ಯವು ಒಂದು ಪ್ರತಿಯಲ್ಲಿ ಹೆಚ್ಚಿದೆ). (2) ವಿಕರ್ತನಯಿನಃ.

GOVERNMENT ORIENTAL MSS LIBRARY
20 OCT 1943

೩೯—ಉಸ್ರ(1) ಧಾಮ ವಸುಕೇತುಮರೀಚಿಃ ।
ಪ್ರಗ್ರಹೋಪ(2) ಧೃತಿಘೃಷ್ಟಿಮಯೂಖಾಃ ॥
ಅಂಶುಭಾನುಕರಪಾದ ವಿರೋಕಾ
ಗಾವ ಇತ್ಯಭಿಹಿತಾಸ್ತು ಸಮಾನಾಃ ॥ ೩೯ ॥

೪೦—(3) ತೀವ್ರಂ ತಿಗ್ಮಂ ಖರಂ ತೀಕ್ಷ್ಣಂ ಚಂಡಮುಷ್ಣಂ ಪಟು(4 ಸ್ಮೃತಂ ।
ಆತಪಃ ಕಥ್ಯತೇ ರೌದ್ರೋ ನಿದಾಘೋ ಘರ್ಮ ಉಚ್ಯತೇ ॥ ೪೦ ॥

೪೧—ಪರಿಧಿಃ ಪರಿವೇಷಸ್ಸ್ಯಾನ್ಮಂಡಲಂ ಚೋಪಸೂರ್ಯಕಂ ।
ಉಚ್ಯತೇ ರಾಹುಸಂಸ್ಪರ್ಶ ಉಪರಾಗ ಉಪಪ್ಲವಃ ॥ ೪೧ ॥

೪೨—ಇಂದುಶ್ಚಂದ್ರಶ್ಚಂದ್ರಮಾ ಓಷಧೀಶಃ ।
ಸೋಮೋ ರಾಜಾ ರೋಹಿಣೀವಲ್ಲಭೋಽಬ್ಜಃ ।
ಋಕ್ಷೇಶಸ್ಸ್ಯಾದತ್ರಿನೇತ್ರ ಪ್ರಸೂ(ತ)ತಿಃ ।
ಪ್ರಾಲೇಯಾಂಶು ಶ್ಶ್ವೇತರೋಚಿಃ ಶ್ಶಶಾಂಕಃ ॥ ೪೨ ॥

೪೩—ದ್ವಿಜರಾಜೋ ರಜನಿಕರಃ ಪೀಯೂಷರುಚಿರ್ನಿಶೀಥಿನೀನಾಥಃ ।
ಜೈ(5) ವಾತೃಕೋ ಮೃಗಾಂಕೋವಿಧುಶ್ಚ ದಾಕ್ಷಾಯಣೀರಮಣಃ ॥ ೪೩ ॥

೪೪—ಚಂದ್ರಿಕಾ ಕೌಮುದೀ ಜ್ಯೋತ್ಸ್ನಾ ತಥಾ ಚಂದ್ರಾತಪಸ್ಸ್ಮೃತಃ ।
ಮಂಡಲಂ ಬಿಂಬ ಮಾಖ್ಯಾತಂ ಹೃದಯೇ ಲಾಂಛನಂ ಮೃಗಃ ॥ ೪೪ ॥

ಟೀ ॥ ಉಸ್ರಃ, ಧಾಮ, ವಸುಃ, ಕೇತುಃ, ಮರೀಚಿಃ, ಪ್ರಗ್ರಹಃ, ಉಪಧೃತಿಃ, ಘೃಷ್ಟಿಃ, ಮಯೂಖಃ, ಅಂಶುಃ, ಭಾನುಃ, ಕರಃ, ಪಾದಃ, ವಿರೋಕಃ, ಗೌಃ—ಈ ೩೨ **ರಶ್ಮಿಗಳ** ಪೆಸರ್ ॥ ೩೯ ॥

ಟೀ ॥ ತೀವ್ರಂ, ತಿಗ್ಮಂ, ಖರಂ, ತೀಕ್ಷ್ಣಂ, ಚಂಡಂ, ಉಷ್ಣಂ, ಪಟು—ಈ ೭ **ಉಷ್ಣರಶ್ಮಿ.** ಆತಪಃ, ರೌದ್ರಃ, (ಕಥ್ಯತೇ)—ಈ ೨ **ಬಿಸಿಲ್.**

ನಿದಾಘಃ, ಘರ್ಮಃ, (ಉಚ್ಯತೇ)—ಈ ೨ **ಬೆಂಕೆಯ** ಪೆಸರ್ ॥ ೪೦ ॥

ಟೀ ॥ ಪರಿಧಿಃ, ಪರಿವೇಷಃ (ಸ್ಯಾತ್), ಮಂಡಲಂ, ಉಪಸೂರ್ಯಕಂ—ಈ ೪ **ಪರಿವೇಷದ** ಪೆಸರ್.

ಉಪರಾಗಃ, ಉಪಪ್ಲವಃ (ರಾಹು ಸಂಸ್ಪರ್ಶ ಉಚ್ಯತೇ)—ಈ ೨ **ಗ್ರಹಣದ** ಪೆಸರ್ ॥ ೪೧ ॥

ಟೀ ॥ ಇಂದುಃ, ಚಂದ್ರಃ, ಚಂದ್ರಮಾಃ, ಓಷಧೀಶಃ, ಸೋಮಃ, ರಾಜಾ, ರೋಹಿಣೀವಲ್ಲಭಃ, ಅಬ್ಜಃ, ಋಕ್ಷೇಶಃ, ಅತ್ರಿನೇತ್ರಪ್ರಸೂತಿಃ, ಪ್ರಾಲೇಯಾಂಶುಃ, ಶ್ವೇತರೋಚಿಃ, ಶಶಾಂಕಃ, ದ್ವಿಜರಾಜಃ, ರಜನಿಕರಃ, ಪೀಯೂಷರುಚಿಃ, ನಿಶೀಥಿನೀನಾಥಃ, ಜೈವಾತೃಕಃ, ಮೃಗಾಂಕಃ, ವಿಧುಃ, ದಾಕ್ಷಾಯಣೀರಮಣಃ,—ಈ ೨೧ **ಚಂದ್ರನ** ಪೆಸರ್ ॥ ೪೨—೪೩ ॥

ಟೀ ॥ ಚಂದ್ರಿಕಾ, ಕೌಮುದೀ, ಜ್ಯೋತ್ಸ್ನಾ, ಚಂದ್ರಾತಪಃ,—ಈ ೪ **ಬೆಳ್ದಿಂಗಳ** ಪೆಸರ್.

ಮಂಡಲಂ, ಬಿಂಬಂ—ಈ ಎರಡು **ಚಂದ್ರಮಂಡಲದ** ಪೆಸರ್ ॥ ೪೪ ॥

---

(1) ಉಷ್ಣಧಾಮ, (2) ಧೃತಿವೃಷ್ಟಿ. (3) ತಿಗ್ಮಂ ತೀಕ್ಷ್ಣಂ ಖರಂ ತೀವ್ರಂ, (4) ತಪಸ್ಸ್ಮೃತಮ್. (5) ಜೀವಾ,

೪೫—ಅಂಕಃ ಚಿಹ್ನ ಮಭಿಜ್ಞಾನಂ ಲಾಂಛನಂ ಲಕ್ಷ್ಮ ಲಕ್ಷಣಂ ।
ಕಳಂಕಶ್ಚೇತಿ ವಿಜ್ಞೇಯಾ ನಾತಿನಾನಾರ್ಥವಾಚಕಾಃ ॥ ೪೫ ॥

೪೬—ವಕ್ರಮಂಗಾರಕಂ ಭೌಮಂ ಲೋಹಿತಾಂಗಂ ಧರಾತ್ಮಜಂ ।
ರೌಹಿಣೇಯಂ ಬುಧಂ ಸೌಮ್ಯ ಮಾಹುಶ್ಚಾಂದ್ರ ಮಸಾಯನಂ(1) ॥ ೪೬ ॥

೪೭—ವಾಚಸ್ಪತಿರಾಂಗಿರಸೋ ಬೃಹಸ್ಪತಿಃ ಕಥ್ಯತೇ ಗುರುರ್ಜೀವಃ ।
ಧಿಷಣಸ್ತ್ರಿ ದಶಾಚಾರ್ಯಶ್ಚಿತ್ರ ಶಿಖಂಡಿ ಪ್ರಸೂ(ತ)ತಿಶ್ಚ ॥ ೪೭ ॥

೪೮—ಉಶನಾ ಶುಕ್ರಃ ಕಾವ್ಯೋ ದೈತ್ಯಗುರುರ್ಭಾರ್ಗವಃ ಕವಿರ್ಧಿಷ್ಣ್ಯಃ ।
ಅಸಿತಃ ಕ್ರೋಡಃ ಪಂಗುಶ್ಛಾಯಾತನಯಃ ಶನೈಶ್ಚರಃ ಶೌರಿಃ ॥ ೪೮ ॥

೪೯—ಸ್ವರ್ಭಾನುಃ ಸೈಂಹಿಕೇಯಶ್ಚ ತಮೋ ರಾಹುರ್ವಿಧುಂತುದಃ ।
ಕೇತವಃ ಶಿಖಿನಃ ಪ್ರೋಕ್ತಾ ಆರ್ದ್ರಾ ಲುಬ್ಧಕ ಉಚ್ಚ್ಯತೇ ॥ ೪೯ ॥

೫೦—ಸಪ್ತರ್ಷಯಸ್ತು ವಿದ್ವದ್ಭಿರ್ಮತಾಶ್ಚಿತ್ರ ಶಿಖಂಡಿನಃ ।
ಕೃತ್ತಿಕಾ ಬಹುಲಾಃ ಪ್ರೋಕ್ತಾಃ ಪಕ್ಷಸ್ತು ಬಹುಲೋಽಸಿತಃ ॥ ೫೦ ॥

ಟೀ ॥ ಮೃಗಃ, ಅಂಕಃ, ಚಿಹ್ನಂ, ಅಭಿಜ್ಞಾನಂ, ಲಾಂಛನಂ, ಲಕ್ಷ್ಮ, ಲಕ್ಷಣಂ, ಕಳಂಕಃ, (ಚೇತಿ ವಿಜ್ಞೇಯಾ ನಾತಿ ನಾನಾರ್ಥವಾಚಕಾಃ)—ಈ ೮ **ಚಂದ್ರಮಂಡಲದ ನಡುವಣ ಕಪ್ಪು** ॥ ೪೫ ॥

ಟೀ ॥ ವಕ್ರಃ, ಅಂಗಾರಕಃ, ಭೌಮಃ, ಲೋಹಿತಾಂಗಃ, ಧರಾತ್ಮಜಃ,—ಈ ೫ **ಮಂಗಳನ** ಪೆಸರ್.

ರೌಹಿಣೇಯಃ, ಬುಧಃ, ಸೌಮ್ಯಃ, ಚಾಂದ್ರಮಸಾಯನಃ—ಈ ೪ **ಬುಧನ** ಪೆಸರ್ ॥ ೪೬ ॥

ಟೀ ॥ ವಾಚಸ್ಪತಿಃ, ಆಂಗಿರಸಃ, ಬೃಹಸ್ಪತಿಃ, ಗುರುಃ, ಜೀವಃ, ಧಿಷಣಃ, ತ್ರಿದಶಾಚಾರ್ಯಃ, ಚಿತ್ರಶಿಖಂಡಿಪ್ರಸೂತಿಃ, (ಕಥ್ಯತೇ)—ಈ ೮ **ಬೃಹಸ್ಪತಿಯ** ಪೆಸರ್ ॥ ೪೭ ॥

ಟೀ ॥ ಉಶನಾ, ಶುಕ್ರಃ, ಕಾವ್ಯಃ, ದೈತ್ಯಗುರುಃ, ಭಾರ್ಗವಃ, ಕವಿಃ, ದಿಷ್ಣ್ಯಃ,—ಈ ೭ **ಶುಕ್ರನ** ಪೆಸರ್ ॥ ೪೮ ॥

ಅಸಿತಃ, ಕ್ರೋಡಃ, ಪಂಗುಃ, ಛಾಯಾತನಯಃ, ಶನೈಶ್ಚರಃ, ಶೌರಿಃ,—ಈ ೬ **ಶನಿಯ** ಪೆಸರ್.

ಟೀ ॥ ಸ್ವರ್ಭಾನುಃ, ಸೈಂಹಿಕೇಯಃ, (ಚ) ತಮಃ, ರಾಹುಃ, ವಿಧುಂತುದಃ,—ಈ ೫ **ರಾಹುವಿನ** ಪೆಸರ್.

ಕೇತುಃ, ಶಿಖೀ,—ಈ ೨ **ಕೇತುವಿನ** ಪೆಸರು.

ಆರ್ದ್ರಾ, ಲುಬ್ಧಕಃ,—ಈ ೨ **ಆದ್ರಾ** (ನಕ್ಷತ್ರದ ಪೆಸರ್) ॥ ೪೯ ॥

ಟೀ ॥ ಸಪ್ತಋಷಯಃ, ಚಿತ್ರಶಿಖಂಡಿನಃ, (ವಿದ್ವದ್ಭಿಸ್ತು ಮತಾಃ)—ಈ ೨ **ಸಪ್ತಋಷಿಯರ** ಪೆಸರ್.

ಕೃತ್ತಿಕಾಃ, ಬಹುಲಾಃ,—ಈ ೨ **ಕೃತ್ತಿಕೆ** (ಪ್ರೋಕ್ತಾಃ,)

ಬಹುಲಃ, ಅಸಿತಃ,—ಈ ೨ **ಕೃಷ್ಣಪಕ್ಷ** ॥ ೫೦ ॥

---

(1) ಚಾಂದ್ರಮಸಾಯನಿಂ

೫೧–ಭಂ ನಕ್ಷತ್ರಂ ತಾರಕಂ ತಾರಕಾ ಚ ।
ಜ್ಯೋತಿಸ್ತಾರಾ ಧಿಷ್ಣ್ಯಮೃಕ್ಷಂ(1) ತಥೋಡು ॥
ಪುಷ್ಯಸ್ತಿಷ್ಯಸ್ಸ್ಯಾದ್ಧನಿಷ್ಠಾ ಶ್ರವಿಷ್ಠಾ ।
ದಾಕ್ಷಾಯಣ್ಯಃ ಕೀರ್ತಿತಾಶ್ಚಂದ್ರದಾರಾಃ ॥ ೫೧ ॥

೫೨–ಇಂದ್ರೋದುಶ್ಚ್ಯವನೋ ಹರಿಸ್ಸುರಪತಿಃ ಸಂಕ್ರಂದನೋ ವಾಸವೋ ।
ವೃತ್ರಾರಿರ್ಬಲಸೂದನಃ ಶತಮುಖೋ ವೃದ್ಧಶ್ರವಾಃ ಕೌಶಿಕಃ ॥
ಜಿಷ್ಣುರ್ವಜ್ರಧರಃ ಸಹಸ್ರನಯನೋ ವಾಸ್ತೋಷ್ಪತಿರ್ಗೋಪತಿಃ ।
ಪರ್ಜನ್ಯೋ ಮಘವಾ ವೃಷಾ ಹರಿಹಯಃ ಪ್ರಾಚೀನಬರ್ಹಿಸ್ಸ್ಮೃತಃ॥೫೨॥

೫೩–ಪುರುಹೂತಃ ಪೃತನಾಷಾಟ್ ಪುರಂದರಃ ಪೂರ್ವದಿಕ್ಪತಿಃ ಸ್ವಾರಾಟ್ ।
ಆಖಂಡಲಸ್ತುರಾಷಾಟ್ ಸುತ್ರಾಮಾ ಗೋತ್ರಭಿ(ಭೃ)ತ್ಸುನಾಸೀರಃ ॥ ೫೩ ॥

೫೪–ಶಕ್ರಸ್ಸ್ಯಾ ದುಗ್ರಧನ್ವಾ ಚ ಹರಿವಾನ್ ಪಾಕಶಾಸನಃ ॥
ದಿವಸ್ಪತಿರ್ಬಿಡೌಜಾಶ್ಚ ಮರುತ್ವಾನ್ ಮೇಘವಾಹನಃ ॥ ೫೪ ॥

೫೫–ಇಂದ್ರಾಣೀ ಪೌಲೋಮೀ ಶಚೀ ಜಯಂತಶ್ಚ ತತ್ಸುತೋ ಜ್ಞೇಯಃ ।
ಅಮರಾವತೀ ಚ ನಗರೀ ನಂದನಮುದ್ಯಾನ ಮಿಂದ್ರಸ್ಯ ॥ ೫೫ ॥

ಟೀ ॥ ಭಂ, ನಕ್ಷತ್ರಂ, ತಾರಕಂ, ತಾರಕಾ, ಜ್ಯೋತಿಃ, ತಾರಾಃ, ಧಿಷ್ಣ್ಯಂ, ಋಕ್ಷಂ, (ತಥಾ) ಉಡು,—ಈ ೯ **ನಕ್ಷತ್ರದ** ಪೆಸರ್. ಪುಷ್ಯಃ, ತಿಷ್ಯಃ, (ಸ್ಯಾತ್)—ಈ ೨ **ಪುಷ್ಯ**ನಕ್ಷತ್ರದ ಪೆಸರ್. ಧನಿಷ್ಠಾ—ಶ್ರವಿಷ್ಠಾ—ಈ ೨ **ದನಿಷ್ಠೆ**—ಅಶ್ವಿನೀ ಮೊದಲಾದ ನಕ್ಷತ್ರಂಗಳ್ ಚಂದ್ರಮನ ಸ್ತ್ರೀಯರಂ (ಚಂದ್ರದಾರಾಃ ಕೀರ್ತಿತಾಃ) **ದಾಕ್ಷಾಯಣಿ**ಯೆಂಬುದು ॥ ೫೧ ॥

ಟೀ ॥ ಇಂದ್ರಃ, ದುಶ್ಚ್ಯವನಃ, ಹರಿಃ, ಸುರಪತಿಃ, ಸಂಕ್ರಂದನಃ, ವಾಸವಃ, ವೃತ್ರಾರಿಃ, ಬಲಸೂದನಃ, ಶತಮುಖಃ, ವೃದ್ಧಶ್ರವಾಃ, ಕೌಶಿಕಃ, ಜಿಷ್ಣುಃ, ವಜ್ರಧರಃ, ಸಹಸ್ರನಯನಃ, ವಾಸ್ತೋಷ್ಪತಿಃ, ಗೋಪತಿಃ, ಪರ್ಜನ್ಯಃ, ಮಘವಾನ್, ವೃಷಾ, ಹರಿಹಯಃ, ಪ್ರಾಚೀನಬರ್ಹಿಃ (ಸ್ಮೃತಃ) ಪುರುಹೂತಃ, ಪೃತನಾಷಾಡ್, ಪುರಂದರಃ, ಪೂರ್ವದಿಕ್ಪತಿಃ, ಸ್ವಾರಾಡ್, ಆಖಂಡಲಃ, ತುರಾಷಾಡ್, ಸುತ್ರಾಮಾ, ಗೋತ್ರಭಿತ್, ಸುನಾಸೀರಃ, ಶಕ್ರಃ, ಉಗ್ರಧನ್ವಾ, ಹರಿವಾನ್, ಪಾಕಶಾಸನಃ, ದಿವಸ್ಪತಿಃ, ಬಿಡೌಜಾಃ, ಮರುತ್ವಾನ್, ಮೇಘವಾಹನಃ—ಈ ೩೯ **ದೇವೇಂದ್ರನ** ಪೆಸರ್ ॥ ೫೨–೫೩–೫೪ ॥

ಟೀ ॥ ಇಂದ್ರಾಣೀ, ಪೌಲೋಮೀ, ಶಚೀ—ಈ ೩ **ಇಂದ್ರನ ಸ್ತ್ರೀಯ** ಪೆಸರ್. **ಇಂದ್ರನ ಮಗನಂ** (ತತ್ಸುತೋಜ್ಞೇಯಃ) ಜಯಂತನೆಂಬುದು.

ಇಂದ್ರನ ಪಟ್ಟಣಮಂ ಅಮರಾವತಿ (ನಗರೀ)ಯೆಂಬುದು.

ಆತನ **ಬನಮಂ** (ಇಂದ್ರಸ್ಯ ಉದ್ಯಾನಂ) ನಂದನಮೆಂಬುದು ॥ ೫೫ ॥

---

(1) ಮುಷ್ಯಾಂ.

೫೬–ಪವಿರಶನಿಃ ಶತಧಾರಂ ವಜ್ರಂ ಕುಳಿಶಂ ಚ ಭವತಿ ದಂಭೋಳಿಃ ।
ಗೌರ್ಭಿದುರಂ ವ್ಯಾಧಾಮ(1) ತ್ಸರುರಿಂದ್ರ ಪ್ರಹರಣಂ ತಥಾ ಶಂಬಃ ॥ ೫೬ ॥

೫೭–ಸ್ಫೂರ್ಜಥುರ್ವಜ್ರ ನಿರ್ಘೋಷೋ ವಜ್ರಜ್ವಾಲಾ ದಿಭಿ(2) ಸ್ಸ್ಮೃತಾ ।
ಋಜು ರೋಹಿತಮಿಚ್ಛಂತಿ ಬುಧಾಃ ಶಕ್ರಶರಾಸನಂ ॥ ೫೭ ॥

೫೮–ಅಭ್ರಮಬ್ದೋ ಘನೋಮೇಘಸ್ಸ್ತನಯಿತ್ನುಃ ಪಯೋಧರಃ ।
ಧಾರಾಧರೋ ಧೂಮಯೋನಿ(3) ರ್ಜೀಮೂತಶ್ಚ ಬಲಾಹಕಃ ॥ ೫೮ ॥

೫೯–ಧಾರಾ ಸಂಪಾತ ಆಸಾರೋ ವಾತಾಸ್ತಂ ವಾರಿ ಶೀಕರಃ ।
ದುರ್ದಿನಂ ಮೇಘತಿಮಿರಂ ಕರಕಸ್ಸ್ಯಾತ್ ಘನೋಪಳಃ ॥ ೫೯ ॥

೬೦–(4) ಚಲನ್ನವಾಭ್ರಮಾಲಾ ಚ ಬುಧೈಃಕಾದಂಬಿನೀ ಸ್ಮೃತಾ ।
ಶಂಪಾ ಚಪಲಾ ಕ್ಷಣಿಕಾ ಶತಹ್ರದಾ ಹ್ರಾದಿನೀ ತಟಿದ್ವಿದ್ಯುತ್ ।
ಸೌದಾಮನ್ಯಚಿರಾಂಶುಃ(5) ಕ್ಷಣರುಚಿರೈರಾವತೀಚ ವಿಜ್ಞೇಯಾ ॥ ೬೦ ॥

೬೧–ಐರಾವತೋಽಭ್ರಮಾತಂಗಃ ಸ ಚೈರಾವಣ ಉಚ್ಯತೇ ।
ಉಚ್ಚೈಶ್ರವಾಸ್ತು ದೇವಾಶ್ವೋ ಮಾತಳಿಃ ಶಕ್ರಸಾರಥಿಃ ॥ ೬೧ ॥

ಟೀ ॥ ಪವಿಃ, ಅಶನಿಃ, ಶತಧಾರಂ, ವಜ್ರಂ, ಕುಳಿಶಂ, (ಚ ಭವತಿ) ದಂಭೋಳಿಃ, ಗೌಃ, ಭಿದುರಂ, ವ್ಯಾಧಾಮನ್(ಃ) ತ್ಸರುಃ, ಇಂದ್ರಪ್ರಹರಣಂ (ತಥಾ), ಶಂಬಃ— ಈ ೧೨ ಇಂದ್ರನ **ವಜ್ರಾಯುಧದ** ಪೆಸರ್ ॥ ೫೬ ॥

ಟೀ ॥ **ಸಿಡಿಲಧ್ವನಿ** (ವಜ್ರನಿರ್ಘೋಷಃ) ಸ್ಫೂರ್ಜಥುವೆಂಬುದು—**ವಜ್ರದ ಜ್ವಾಲೆ** ದಿಭಿಯೆಂಬುದು— **ಇಂದ್ರನ ಬಿಲ್ಲು** ಋಜು(ವಾದುದು)ರೋಹಿತಮೆಂಬುದು ॥ ೫೭ ॥

ಟೀ ॥ ಅಭ್ರಂ, ಅಬ್ದಃ, ಘನಃ, ಮೇಘಃ, ಸ್ತನಯಿತ್ನುಃ, ಪಯೋಧರಃ, ಧಾರಾಧರಃ, ಧೂಮಯೋನಿಃ, ಜೀಮೂತಃ, ಬಲಾಹಕಃ— ಈ ೧೦ **ಮುಗಿಲ** ಪೆಸರ್ ॥ ೫೮ ॥

ಟೀ ॥ ಧಾರಾಸಂಪಾತಃ, ಆಸಾರಃ—ಈ ೨ **ಮುಟಿ.**

ಗಾಳಿಯಿಂ ಕೆದಱಿದ ಹನಿಯಂ (ವಾತಾಸ್ತಂ ವಾರಿ) ಶೀಕರಮೆಂಬುದು.

ಮುಟಿಗಟ್ಟಲೆಯಂ ದುರ್ದಿನಮೆಂಬುದು.

ಕರಕಃ, ಘನೋಪಳಃ—ಈ ೨ **ಆಲಿಕಲ್** ॥ ೫೯ ॥

ಟೀ ॥ **ಚಲಿಸುತ್ತಿರುವ ಪೊಸತಪ್ಪ ಮುಗಿಲಮಾಲೆಯಂ** ಕಾದಂಬನಿಯೆಂಬುದು.

ಟೀ ॥ ಶಂಪಾ, ಚಪಲಾ, ಕ್ಷಣಿಕಾ, ಶತಹ್ರದಾ, ಹ್ರಾದಿನೀ, ತಟಿತ್, ವಿದ್ಯುತ್, ಸೌದಾಮನೀ, ಅಚಿರಾಂಶುಃ, ಕ್ಷಣರುಚಿಃ, ಐರಾವತೀ(ಚವಿಜ್ಞೇಯಾ)—ಈ ೧೧ **ಮಿಂಚು** ॥೬೦॥

ಟೀ ॥ ಐರಾವತಃ, ಅಭ್ರಮಾತಂಗಃ, (ಸಚ ಉಚ್ಯತೇ) ಐರಾವಣಃ—ಈ ಮೂಱು **ಇಂದ್ರನ ಆನೆ.**

ಉಚ್ಚೈಶ್ಶ್ರವಾಃ, ದೇವಾಶ್ವಃ—ಈ ೨ **ಇಂದ್ರನ ಕುದಿರೆ.**

ಮಾತಳಿಃ, ಶಕ್ರಸಾರಥಿಃ—ಈ ೨ **ಇಂದ್ರನ ಸಾರಥಿಯ** ಪೆಸರ್ ॥ ೬೧ ॥

---

(1) ಧಾಮುಸ್ಸುರರಿಂದ್ರ? (2) ತಿಭೀಃ (3) ಧೂಮಜ್ಯೋತಿ, (4) ಈ ಅರ್ಧವು ಒಂದು ಹಸ್ತಲಿಖಿತ ಪ್ರತಿಯಲ್ಲಿ ಹೆಚ್ಚಾಗಿದೆ, (5) ಪ್ರಾಜ್ಞೈರೈರಾವತೀ.

೧೨—ಸಪ್ತಾರ್ಚಿರ್ಬಹುಲಃ ಶಿಖೀ ಹುತವಹೋ ವೈಶ್ವಾನರೋಽಗ್ನಿರ್ವಸು।
ರ್ವಹ್ನಿರ್ವಾಯುಸಖಃ ಸಿತೇತರಗತಿ ಸ್ಸ್ವಾಹಾಪ್ರಿಯಃ ಪಾವಕಃ।
ಅರ್ಚಿಷ್ಮಾನ್ ಜ್ವಲನಃ ಕೃಶಾನುರನಲೋ ಧೂಮಧ್ವಜೋ ಹವ್ಯವಾಟ್।
ಬರ್ಹಿ ರ್ಜ್ಯೋತಿರುಷರ್ಬುಧಶ್ಚ ದಹನಸ್ಸ್ಯಾಚ್ಚಿತ್ರಭಾನುಃ ಶುಚಿಃ ॥ ೧೨ ॥

೧೩—ಕೃಪೀಟಯೋನಿರ್ದಮುನಾಃ ಕೃಷ್ಣವರ್ತ್ಮಾಶುಶುಕ್ಷಣಿಃ।
ವಿಭಾವಸುರಪಾಂಪಿತ್ತಂ ಜಾತವೇದಾಸ್ತನೂನಪಾತ್ ॥ ೧೩ ॥

೧೪—ವೀತಿಹೋತ್ರೋ ಬೃಹದ್ಭಾನುರಾಶ್ರಯಾಶೋ ಧನಂಜಯಃ।
ಹಿರಣ್ಯರೇತಾಸ್ತಮೋಘ್ನೋ ಲೋಹಿತಾಶ್ವೋ ಹುತಾಶನಃ ॥ ೧೪ ॥

೧೫—ಅರ್ಚಿಃ ಕೀಲಾ ಜ್ವಾಲಾ ವರ್ಚಸ್ತೇಜಸ್ತ್ವಿಷಸ್ತಥಾ ಜ್ಯೋತಿಃ।
ಹೇತಿದ್ಯುತಿದೀಪ್ತಿರುಚಃ ಶಿಖಾಪ್ರಭಾರಶ್ಮಯಃ ಸಮಾನಾರ್ಥಾಃ ॥ ೧೫ ॥

೧೬—ಸ್ಮೃತಾಃ ಪ್ರಕಾಶ ಆಲೋಕ ಉದ್ಯೋತಶ್ಚ ಸಮಾಸ್ತ್ರಯಃ[1]।
[2]ಆಗ್ನೇಯಿೀ ಕಥ್ಯತೇ ಸ್ವಾಹಾ ಧೂಮ್ಯಾ ಸ್ಯಾದ್ಧೂಮಸಂಹತಿಃ ॥ ೧೬ ॥

೧೭—ಊಷ್ಮಾ[3] ಬಾಷ್ಪಂ ಸ್ಫುಲಿಂಗಾಶ್ಚ ಕಣಾಃ ಜಿಹ್ವಾಸ್ತಥಾರ್ಚಿಷಃ।
ಅಲಾತ ಮುಲ್ಮುಕಂ ಜ್ಞೇಯ ಮುಲ್ಕಾ ಜ್ವಾಲಾಸ್ಯ ನಿರ್ಗತಾ ॥ ೧೭ ॥

ಟೀ ॥ ಸಪ್ತಾರ್ಚಿಃ, ಬಹುಲಃ, ಶಿಖೀ, ಹುತವಹಃ, ವೈಶ್ವಾನರಃ, ಅಗ್ನಿಃ, ವಸುಃ, ವಹ್ನಿಃ, ವಾಯುಸಖಃ, ಸಿತೇತರಗತಿಃ, ಸ್ವಾಹಾಪ್ರಿಯಃ, ಪಾವಕಃ, ಅರ್ಚಿಷ್ಮಾನ್ಃ, ಜ್ವಲನಃ, ಕೃಶಾನುಃ, ಅನಲಃ, ಧೂಮಧ್ವಜಃ, ಹವ್ಯವಾಟ್, ಬರ್ಹಿಃ, ಜ್ಯೋತಿಃ, ಉಷರ್ಬುಧಃ, ದಹನಃ, (ಸ್ಯಾತ್) ಚಿತ್ರಭಾನುಃ, ಶುಚಿಃ, ಕೃಪೀಟಯೋನಿಃ, ದಮುನಾಃ, ಕೃಷ್ಣವರ್ತ್ಮಾ, ಆಶುಶುಕ್ಷಣಿಃ, (ವಿಭಾವಸುಃ) ಅಪಾಂಪಿತ್ತಂ, ಜಾತವೇದಾಃ, ತನೂನಪಾತ್, ವೀತಿಹೋತ್ರಃ, ಬೃಹದ್ಭಾನುಃ, ಆಶ್ರಯಾಶಃ, ಧನಂಜಯಃ, ಹಿರಣ್ಯರೇತಾಃ, ತಮೋಘ್ನಃ, ಲೋಹಿತಾಶ್ವಃ, ಹುತಾಶನಃ— ಈ ೪೦ **ಕಿಚ್ಚಿನ** ಪೆಸರ್. ॥ ೧೨–೧೩–೧೪ ॥

ಟೀ ॥ ಅರ್ಚಿಃ, ಕೀಲಾ, ಜ್ವಾಲಾ— ಈ ೩ **ಉರಿಯ ನಾಲಗೆ.**

ವರ್ಚಃ, ತೇಜಃ, ತ್ವಿಟ್, ಜ್ಯೋತಿಃ, ಹೇತಿಃ, ದ್ಯುತಿಃ, ದೀಪ್ತಿಃ, ರುಕ್, ಶಿಖಾ, ಪ್ರಭಾ, ರಶ್ಮಿಃ—ಈ ೧೧ **ದೀಪ್ತಿ.** ॥ ೧೫ ॥

ಟೀ ॥ ಪ್ರಕಾಶಃ, ಆಲೋಕಃ, ಉದ್ಯೋತಃ— ಈ ೩ **ಬೆಳಗು.**

ಆಗ್ನೇಯಿೀ, ಸ್ವಾಹಾ (ಕಥ್ಯತೇ)— ಈ ೨ **ಅಗ್ನಿಯ ಸ್ತ್ರೀ.**

ಧೂಮ್ಯಾ, ಧೂಮಸಂಹತಿಃ–ಈ ೨ **ಪೊಗೆ.** ॥ ೧೬ ॥

ಟೀ ॥ ಊಷ್ಮನ್, ಬಾಷ್ಪಂ— ಈ ಎರಡು **ಸೆಖೆ.**

ಸ್ಫುಲಿಂಗಃ, ಕಣಃ– ಈ ೨ **ಕಿಡಿ.**

ಜಿಹ್ವಾ, ಅರ್ಚಿಃ— ಈ ೨ (ಕಿಚ್ಚಿನ) **ನಾಲಗೆ?**

ಅಲಾತಂ, ಉಲ್ಮುಕಂ–ಈ ೨ **ಕೊಳ್ಳಿ.** ಉಲ್ಕಾ– ಈ ೧ **ಉಳ್ಕು.** (ಉಳುಕು) ॥ ೧೭ ॥

---

(1) ಸಮಾಶ್ರಯಃ (2) ಅಗ್ನಾಯಿೀ (3) ಬಾಷ್ಪಿಃ

೧೮—ಭವತಿ ಹಿರಣ್ಯಾ ಕನಕಾ ಕೃಷ್ಣಾ ರಕ್ತಾ ಚ ಸುಪ್ರಭಾ ಚಾನ್ಯಾ।
ಅತಿರಿಕ್ತಾ ಬಹುರೂಪೇತಿ ಸಪ್ತ ಸಪ್ತಾರ್ಚಿಷೋ ಜಿಹ್ವಾಃ ॥ ೧೮ ॥

೧೯—ಏಧಸ್ತರ್ಪಣ ಮಿಂಧನ ಮೇಧಸ್ಸಮಿದಿಧ್ಮ ಇತ್ಯಭಿನ್ನಾರ್ಥಾಃ।
ಭೂತಿರ್ಭಸಿತಂ ಭಸ್ಮ ಕ್ಷಾರಂ ರಕ್ಷಾ ಚ ನಿರ್ದಿಷ್ಟಾ ॥ ೧೯ ॥

೨೦—ವನವಹ್ನಿರ್ದವೋ ದಾವೋ ಮೇಘವಹ್ನಿರಿರಮ್ಮದಃ।
ಔರ್ವಸ್ಸಮುದ್ರವಹ್ನಿಸ್ಸ್ಯಾದ್ಬಾಡಬೋ ಬಡಬಾಮುಖಃ ॥ ೨೦ ॥

೨೧—ಶಮನಸ್ಸಮವರ್ತೀ ಚ ಪ್ರೇತಪತಿಃ ಪಿತೃಪತಿಶ್ಚ ಕೀನಾಶಃ।
ವೈವಸ್ವತಃ ಕೃತಾಂತಃ ಕಾಳಿಂದೀಸೋದರಃ ಕಾಲಃ ॥ ೨೧ ॥

೨೨—ಅಂತಕೋ ಧರ್ಮರಾಜಶ್ಚ ಯಮೋ ದಂಡಧರೋ ಹರಿಃ।
ದಕ್ಷಿಣಾಶಾಪತಿಸ್ಸದ್ಭಿ ಶ್ಯಾ್ರದ್ಧದೇವಶ್ಚ ಕಥ್ಯತೇ ॥ ೨೨ ॥

೨೩—ಯಾತೂನಿ ಯಾತುಧಾನಾಃ ಕ್ರವ್ಯಾದಾ ರಾಕ್ಷಸಾಶ್ಚ ರಕ್ಷಾಂಸಿ।
ನಕ್ತಂಚರ ನೈಋತ ಕೋಣಪಕಾ[1] ಸ್ತೇಚ ಕೈಕಸೇಯಾ ಸ್ಯುಃ ॥ ೨೩ ॥

೨೪—ವರುಣಂ ಯಾದಸಾಂನಾಥಂ ಪಾಶಪಾಣಿಂ ಪ್ರಚೇತಸಂ।
ಜಲಾಧಿದೈವತಂ ಪ್ರಾಹುಃ ಪ್ರತ್ಯಗಾಶಾಪತಿಂ ಬುಧಾಃ ॥ ೨೪ ॥

ಟೀ ॥ ಹಿರಣ್ಯಾ, ಕನಕಾ, ಕೃಷ್ಣಾ, ರಕ್ತಾ, ಸುಪ್ರಭಾ, ಅತಿರಕ್ತಾ, ಬಹುರೂಪಾ, ಈ ೭ (ಸಪ್ತ ಸಪ್ತಾರ್ಚಿಷೋ ಜಿಹ್ವಾಃ) **ಅಗ್ನಿಯ ನಾಲಗೆಗಳ್** ॥ ೧೮ ॥

ಟೀ ॥ ಏಧಸ್, ತರ್ಪಣಂ, ಇಂಧನಂ, ಏಧಃ, (ಅಕಾರಾಂತ ಪುಲ್ಲಿಂಗ)ಸಮಿತ್, ಇಧ್ಮ, ಈ ೬ **ಪುಳ್ಳಿ.**

ಭೂತಿಃ, ಭಸಿತಂ, ಭಸ್ಮ, ಕ್ಷಾರಂ, ರಕ್ಷಾ,—ಈ ೫ **ಬೂದಿ** ॥ ೧೯ ॥

ಟೀ ॥ ವನವಹ್ನಿಃ, ದವಃ, ದಾವಃ–ಈ ಮೂಱು **ಕಾಟ್ಕಿಚ್ಚು.**

ಮೇಘವಹ್ನಿಃ, ಇರಂಮದಃ–ಈ ೨ **ಮುಗಿಲ ಕಿಚ್ಚು.**

ಔರ್ವಃ, ಸಮುದ್ರವಹ್ನಿಃ, ಬಾಡಬಃ, ಬಡಬಾಮುಖಃ–ಈ೪ **ಸಮುದ್ರದ ಕಿಚ್ಚು.** ॥ ೨೦ ॥

ಟೀ ॥ ಶಮನಃ, ಸಮವರ್ತೀ, ಪ್ರೇತಪತಿಃ, ಪಿತೃಪತಿಃ ಕೀನಾಶಃ, ವೈವಸ್ವತಃ, ಕೃತಾಂತಃ, ಕಾಳಿಂದೀಸೋದರಃ, ಕಾಲಃ, ಅಂತಕಃ, ಧರ್ಮರಾಜಃ, ಯಮಃ, ದಂಡಧರಃ, ಹರಿಃ, ದಕ್ಷಿಣಾಶಾಪತಿಃ, ಶ್ರಾದ್ಧದೇವಃ,–(ಸದ್ಭಿಃ ಕಥ್ಯತೇ) ಈ ೧೬ **ಜವನ** ಪೆಸರ್ ॥ ೨೧–೨೨ ॥

ಟೀ ॥ ಯಾತು, ಯಾತುಧಾನಃ, ಕ್ರವ್ಯಾತ್, ರಾಕ್ಷಸಃ, ರಕ್ಷಸ್, ನಕ್ತಂಚರಃ, ನೈಋತಃ ಕೋಣಪಕಃ, ಕೈಕಸೇಯಃ,— ಈ ೯ **ನೈಋತಿಯ** ಪೆಸರ್ ॥ ೨೩ ॥

ಟೀ ॥ ವರುಣಃ, ಯಾದಸಾಂನಾಥಃ, ಪಾಶಪಾಣಿಃ, ಪ್ರಚೇತ(ರ್ಸ್)ತಾಃ, ಜಲಾಧಿದೈವತಂ, ಪ್ರತ್ಯಗಾಶಾಪತಿಃ— ಈ ೬ (ಪ್ರಾಹುರ್ಬುಧಾ) **ವರುಣನ** ಪೆಸರ್ ॥ ೨೪ ॥

---

(1) ಪಾಸ್ತಥಾ ನೈಕಷೇಯಾಸ್ಸ್ಯುಃ

೨೫—ಪವನಃ ಶ್ವಸನೋವಾಯುರ್ಮರುದನಿಲೋ ಮಾರುತೋ ಜಗತ್ಪ್ರಾಣಃ ।
ಪೃಷದಶ್ವಃ ಪವಮಾನಃ ಪ್ರಭಂಜನಃ ಸ್ಪರ್ಶನೋ ವಾತಃ ॥ ೨೫ ॥
೨೬—ನಭಸ್ವಾನ್ಮಾತರಿಶ್ವಾ ಚ ಸಮೀರಶ್ಚ ಸಮೀರಣಃ ।
ಸದಾಗತಿರ್ಗಂಧವಹೋ ಹರಿಃ ಪ್ರೋಕ್ತೋ ಮಹಾಬಲಃ ॥ ೨೬ ॥
೨೭—(1) ಝುಂಝಾವಾತಃ ಸವೃಷ್ಟಿಸ್ಯಾದ್ವಾತ್ಯಾ ವಾತಸ್ಯ ಮಂಡಲೀ ।
ಆಮೋದಸ್ಯಾತ್ಪರಿಮಳಃ ಸೌರಭ್ಯಂ ಚ ಸುಗಂಧಿತಾ ॥ ೨೭ ॥
೨೮—ಐಳಬಿಲಃ ಪೌಲಸ್ತ್ಯೋ ವೈಶ್ರವಣಃ ಕಿನ್ನರೇಶ್ವರೋ ಧನದಃ ।
ಶ್ರೀದಃ ಶ್ರೀಕಂಠಸಖೋ ಮನುಷ್ಯಧರ್ಮಾ ಧನಾಧ್ಯಕ್ಷಃ ॥ ೨೮ ॥
೨೯—ಉತ್ತರಾಶಾಪತಿರ್ಯಕ್ಷಃ ಕುಬೇರೋ ನರವಾಹನಃ ।
ಗುಹ್ಯಕೋ ರಾಜರಾಜಶ್ಚ ಧನೀ ಪುಣ್ಯಜನೇಶ್ವರಃ ॥ ೨೯ ॥
೩೦—ದ್ಯುಮ್ನಂ ದ್ರವ್ಯಂ ದ್ರವಿಣಂ ರಾಃಸ್ವರ್ಣಂ(2) ಸ್ವಾಪತೇಯಮರ್ಥಃ ಸ್ವಂ ।
ಋಕ್ಥಂ ಪೃಕ್ಥಂ ವಿತ್ತಂ ಧನಂ ಹಿರಣ್ಯಂ ಚ ವಸು ವಿಭವಃ ॥ ೩೦ ॥
೩೧ ಅಕುಪ್ಯಂ ರೂಪ್ಯಹೇಮಾಖ್ಯಂ ಕುಪ್ಯಮನ್ಯದ್ಧನಂ ಭವೇತ್ ।
ಗೋಮಹಿಷ್ಯಾದಿಕಂ ಸರ್ವಂ ಬುಧೈರ್ಜೀವಧನಂ ಸ್ಮೃತಂ ॥ ೩೧ ॥
೩೨—ನಿಕ್ಷೇಪಸ್ಸ್ಯಾ ದುಪನಿಧಿಃ ಕಥ್ಯತೇ(ಶೇ)ವಧಿರ್ನಿಧಿಃ ।
ಕಿನ್ನರಸ್ಯಾತ್ಕಿಂಪುರುಷೋ(3) ಮಯುರಶ್ವಮುಖಸ್ತಥಾ ॥ ೩೨ ॥

ಟೀ ॥ ಪವನಃ, ಶ್ವಸನಃ, ವಾಯುಃ, ಮರುತ್, ಅನಿಲಃ, ಮಾರುತಃ, ಜಗತ್ಪ್ರಾಣಃ, ಪೃಷದಶ್ವಃ, ಪವಮಾನಃ, ಪ್ರಭಂಜನಃ, ಸ್ಪರ್ಶನಃ, ವಾತಃ, ನಭಸ್ವಾನ್, ಮಾತರಿಶ್ವಾ, ಸಮೀರಃ, ಸಮೀರಣಃ, ಸದಾಗತಿಃ, ಗಂಧವಹಃ, ಹರಿಃ, ಮಹಾಬಲಃ–ಈ ೨೦ **ಗಾಳಿಯ** ಪೆಸರ್॥ ೨೫-೨೬॥

ಟೀ ॥ **ಮಟೆವೆರಸಿದ ಘಾಳಿಯುಂ** ಝುಂಝಾವಾತಮೆಂಬುದು.

ಸುಟ್ಟುರೆ ಘಾಳಿಯುಂ ವಾತ್ಯಾ ಎಂಬುದು.

ಆಮೋದಃ ಪರಿಮಳಃ ಸೌರಭ್ಯಂ, ಸುಗಂಧಿತಾ–ಈ ೪ **ಕಂಪು** ॥ ೨೭ ॥

ಟೀ ॥ ಐಳಬಿಳಃ, ಪೌಲಸ್ತ್ಯಃ, ವೈಶ್ರವಣಃ, ಕಿನ್ನರೇಶ್ವರಃ, ಧನದಃ, ಶ್ರೀದಃ, ಶ್ರೀಕಂಠ ಸಖಃ, ಮನುಷ್ಯಧರ್ಮಾ, ಧನಾಧ್ಯಕ್ಷಃ, ಉತ್ತರಾಶಾಪತಿಃ, ಯಕ್ಷಃ, ಕುಬೇರಃ, ನರವಾಹನಃ, ಗುಹ್ಯಕಃ, ರಾಜರಾಜಃ, ಧನೀ, ಪುಣ್ಯಜನೇಶ್ವರಃ—ಈ ೧೭ **ಕುಬೇರನ** ಪೆಸರ್ ॥ ೨೮—೨೯ ॥

ಟೀ ॥ ದ್ಯುಮ್ನಂ, ದ್ರವ್ಯಂ, ದ್ರವಿಣಂ, ರಾಃ, ಸ್ವರ್ಣಂ, ಸ್ವಾಪತೇಯಂ, ಅರ್ಥಃ, ಸ್ವಂ, ಋಕ್ಥಂ, ಪೃಕ್ಥಂ, ವಿತ್ತಂ, ಧನಂ, ಹಿರಣ್ಯಂ, ವಸು, ವಿಭವಃ–ಈ ೧೫ **ಒಡಮೆಯ** ಪೆಸರ್ ॥೩೦॥

ಟೀ ॥ ಅಕುಪ್ಯಮೆಂಬುದು **ಹೊನ್ನು ಬೆಳ್ಳಿಯುಂ; ಉೞಿದೊಡವೆ**–ಕುಪ್ಯಮೆಂಬುದು, **ಹಸು—ಎಮ್ಮೆ** ಮೊದಲಾದುವೆಲ್ಲಂ ಜೀವಧನ ಮೆಂಬುದು ॥ ೩೧ ॥

ಟೀ ॥ ನಿಕ್ಷೇಪಃ, ಉಪನಿಧಿಃ—ಈ ೨ **ಬಯ್ಕೆ.**

ಸೇವಧಿಃ, ನಿಧಿಃ ಈ ೨ **ನಿಧಾನಂ.**

ಕಿನ್ನರಃ, ಕಿಂಪುರುಷಃ, ಮಯುಃ, ಅಶ್ವಮುಖಃ—ಈ ೪ **ಕಿನ್ನರರ** ಪೆಸರ್ ॥ ೩೨ ॥

---

(1) ಕಂಕಾವಾತಃ……ವಾತ್ಯಾವಾತಸ್ತು ಮಂಡಲೀ, (2) ಸ್ವಾ(ಸಾ)ರಂ. (3) ಮಯೂರಶ್ಚ.

೩೩—ಉದ್ಯಾನಂ ಸ್ಯಾಚ್ಚೈತ್ರರಥಂ ವಿಮಾನಂ ಚಾಸ್ಯ ಪುಷ್ಪಕಂ ।
ಅಳಕಾ ನಗರೀ ಜ್ಞೇಯಾ ಪುತ್ರಶ್ಚ ನಳಕೂಬರಃ ॥ ೩೩ ॥
೩೪—ವಿಶ್ವಕೃದ್ವಿಶ್ವ ಕರ್ಮಾ ಚ ತ್ವಷ್ಟಾ ಸ್ಯಾದ್ದೇವವರ್ಧಕಿಃ ।
ನಾಸತ್ಯಾ ವಶ್ವಿನೌ ದಸ್ರೌ ಪ್ರೋಕ್ತೌ ದೇವಚಿಕಿತ್ಸಕೌ ॥ ೩೪ ॥
೩೫—ಶೌದ್ಧೋದನಿರ್ದಶಬಲೋ ಬುದ್ಧಃ(1) ಶಾಕ್ಯಸ್ತಥಾಗತಃ ಸುಗತಃ ।
ಮಾರಜಿದದ್ವಯವಾದೀ ಸಮಂತ ಭದ್ರೋ ಜಿನಶ್ಚ ಸಿದ್ಧಾರ್ಥಃ ॥ ೩೫ ॥
೩೬—ಜಿನೇಂದ್ರೋ ವೀತರಾಗೋಽರ್ಹನ್ ಕೇ(2) ವಲಜ್ಞಾನಲೋಚನಃ ।
ನಿರ್ವಾಣನಾಥಸ್ಸರ್ವಜ್ಞ ಸ್ತ್ರಿಲೋಕೇಶ ಸ್ತ್ರಿಕಾಲವಿತ್ ॥ ೩೬ ॥
೩೭—ಅಲಕ್ಷ್ಮೀರ್ನಿರ್ಋತಿರ್ಜ್ಞೇಯಾ ನಿಯತಿರ್ವಿಧಿರುಚ್ಯತೇ ।
ಯಕ್ಷರಾಕ್ಷಸ ಗಂಧರ್ವ ಸಿದ್ಧಗುಹ್ಯಕ ಕಿನ್ನರಾಃ ॥
ವಿದ್ಯಾಧರಾಪ್ಸರೋ ಭೂತ ಪೈ(ಪಿ)ಶಾಚಾ ದೇವಯೋನಯಃ ॥ ೩೭ ॥
೩೮—ಘೃತಾಚೀ ಮೇನಕಾ ರಂಭಾ ಊರ್ವಶೀ ಚ ತಿಲೋತ್ತಮಾ ।
ಸುಕೇಶೀ ಮಂಜುಘೋಷಾದ್ಯಾಃ ಕಥ್ಯಂತೇಽಪ್ಸರಸೋ ಬುಧೈಃ ॥ ೩೮ ॥
೩೯—(ಹೇಳಾ) ವಿಳಾಸ ಬಿಬ್ಬೋಕ ಲೀಲಾ ಲಲಿತ ವಿಭ್ರಮಾಃ ॥
ಸ್ತ್ರೀಣಾಂ ಶೃಂಗಾರಚೇಷ್ಟಾಸ್ಸ್ಯುಃ(3) ಭಾವಪರ್ಯಾಯ ವಾಚಕಾಃ ॥ ೩೯ ॥

ಟೀ ॥ ಚೈತ್ರ ರಥಮೆಂಬುದು **ಕುಬೇರನ ಬನಂ.** ಪುಷ್ಪಕಮೆಂಬುದಾತನ **ವಿಮಾನಂ.** ಅಳಕಾ ಎಂಬುದಾತನ **ಬೀಡು.** ನಳಕೂಬರನೆಂಬನಾತನ **ಮಗಂ** ॥ ೩೩ ॥

ಟೀ॥ ವಿಶ್ವಕೃತ್, ವಿಶ್ವಕರ್ಮಾ, ತ್ವಷ್ಟಾ, ದೇವವರ್ಧಕಿಃ,–ಈ ೪ **ದೇವರ ಬಡಗಿಯ** ಪೆಸರ್.

ನಾಸತ್ಯಾ, ಅಶ್ವಿನೌ, ದಸ್ರೌ, ದೇವಚಿಕಿತ್ಸಕೌ, – ಈ ೪ **ದೇವರ ವೈದ್ಯರ್** ॥ ೩೪ ॥

ಟೀ ॥ ಶೌದ್ಧೋದನಿಃ, ದಶಬಳಃ, ಬುದ್ಧಃ, ಶಾಕ್ಯಃ, ತಥಾಗತಃ, ಸುಗತಃ, ಮಾರಜಿತ್, ಅದ್ವಯವಾದೀ, ಸಮಂತಭದ್ರಃ, ಜಿನಃ, ಸಿದ್ಧಾರ್ಥಃ,—ಈ ೧೧ **ಬುದ್ಧನ** ಪೆಸರ್ ॥ ೩೫ ॥

ಟೀ ॥ ಜಿನೇಂದ್ರಃ, ವೀತರಾಗಃ, ಅರ್ಹನ್, ಕೇವಲಜ್ಞಾನಲೋಚನಃ, ನಿರ್ವಾಣ ನಾಥಃ, ಸರ್ವಜ್ಞಃ, ತ್ರಿಲೋಕೇಶಃ, ತ್ರಿಕಾಲವಿತ್–ಈ ೮ **ಜಿನೇಶ್ವರನ** ಪೆಸರ್ ॥ ೩೬ ॥

ಟೀ ॥ ಅಲಕ್ಷ್ಮೀಃ, ನಿರೃತಿಃ–ಈ ೨ **ಜ್ಯೇಷ್ಠೆ.**

ನಿಯತಿಃ, ವಿಧಿಃ–ಈ ೨ **ಬಿದಿ.**

ಯಕ್ಷಃ, ರಾಕ್ಷಸಃ, ಗಂಧರ್ವಃ, ಸಿದ್ಧಃ, ಗುಹ್ಯಕಃ, ಕಿನ್ನರಃ, ವಿದ್ಯಾಧರಃ, ಅಪ್ಸರಾಃ, ಭೂತಃ, ಪೈಶಾಚಃ, ದೇವಯೋನಿಃ—ಇಂತಿವೆಲ್ಲಂ **ದೇವಜಾತಿಯೆಂಬುದು** ॥ ೩೭ ॥

ಟೀ ॥ ಘೃತಾಚೀ, ಮೇನಕಾ, ರಂಭಾ, ಊರ್ವಶೀ, ತಿಲೋತ್ತಮಾ, ಸುಕೇಶೀ, ಮಂಜು ಘೋಷಾ–ಇವರು ಮೊದಲಾದವರ್ **ಅಚ್ಚರಸಿಯರ್** ॥ ೩೮ ॥

ಹೇಳಾ, ವಿಳಾಸಃ, ಬಿಬ್ಬೋಕಃ, ಲೀಲಾ, ಲಲಿತಂ, ವಿಭ್ರಮಃ– ಇವು ಮೊದಲಾದುವು ಸ್ತ್ರೀಯರ **ಭಾವಂಗಳ್** ॥ ೩೯ ॥

---

(1) ಬುಧಃ (2) ರಾಗೋಽರ್ಹನ್ ಕೇವಲೀ ಚ ತ್ರಿಕಾಲವಿತ್ (ಈ ಅರ್ಧ ಪದ್ಯ ಮಾತ್ರ ಕೆಲವು ಪ್ರತಿಗಳಲ್ಲಿವೆ) (3) ಹಾವ.

೯೦—ಬಾಹ್ಯಾರ್ಥಾಲಂಬನೋ ಯಸ್ತು ವಿಕಾರೋ ಮಾನಸೋ ಭವೇತ್ ।
ಸ ಭಾವಃ ಕಥ್ಯತೇ ಸದ್ಭಿ ಸ್ತಸ್ಯೋತ್ಕರ್ಷೋ ರಸಸ್ಸ್ಮೃತಃ ॥ ೯೦ ॥
೯೧—ರತಿರ್ಹಾಸಶ್ಚ ಶೋಕಶ್ಚ ಕ್ರೋಧೋತ್ಸಾಹೌ ಭಯಂ ತಥಾ ।
ಜುಗುಪ್ಸಾ ವಿಸ್ಮಯು(1) ಶಮಾಃ ಸ್ಥಾಯಿಾ ಭಾವಾಃ ಪ್ರಕೀರ್ತಿತಾಃ ॥ ೯೧ ॥
೯೨—ಶೃಂಗಾರಹಾಸ್ಯ ಕರುಣಾ ರೌದ್ರ ವೀರ ಭಯಾನಕಾಃ ।
ಭೀಭತ್ಸಾದ್ಭುತ ಶಾಂತಾಶ್ಚ ನವ ನಾಟ್ಯೇ ರಸಾಸ್ಸ್ಮೃತಾಃ ॥ ೯೨ ॥
೯೩—ಗೀತಂ ಗಾನಮಿತಿ ಪ್ರೋಕ್ತಂ ವಾದ್ಯ ಮಾತೋದ್ಯ ಮಿಷ್ಯತೇ ।
ನೃತ್ಯಂ ತು ತಾಂಡವಂ ಲಾಸ್ಯಂ(2) ತ್ರಿತಯಂ ನಾಟ್ಯ ಮುಚ್ಯತೇ ॥ ೯೩ ॥
೯೪—ತಾಳಃ ಕಾಲಕ್ರಿಯಾಮಾನಂ ಲಯಃ ಸಾಮ್ಯ ಮುದಾಹೃತಂ ।
ಅಂಗಹಾರೋಽಂಗವಿಕ್ಷೇಪಃ(3) ಸೂಚ್ಯಾರ್ಥೋಽಭಿನಯಃ ಸ್ಮೃತಃ ॥ ೯೪ ॥
೯೫—ಪ್ರೇಕ್ಷಾರ್ಥಂ ಗೀತವಾದ್ಯಂ ತು ಸಂಗೀತಮಭಿಧೀಯತೆ ।
ಆದಾವೇವ ತು ಯನ್ನಾಟ್ಯಂ ಪೂರ್ವರಂಗಸ್ಸ ಉಚ್ಯ್ಯತೇ ॥ ೯೫ ॥
೯೬—ಪ್ರೋಕ್ತಾ ಘೋವತೀ ವೀಣಾ ವಿಪಂಚೀ ಪರಿವಾದಿನೀ ।
ವಲ್ಲಕೀ ಚೇತಿ ತದ್ಭೇದಾಸ್ತಂತ್ರೀಭೇದಸಮುದ್ಭವಾಃ ॥ ೯೬ ॥

ಟೀ ॥ **ಬಾಹ್ಯಮಪ್ಪರ್ಥಮಂ ಆಶ್ರಯಿಸಿ ಪುಟ್ಟುವ ಮನದ ವಿಕಾರಮಂ** ಭಾವಮೆಂಬುದು, **ಆ ಭಾವದ ಉತ್ಕರ್ಷಮಂ** ರಸಮೆಂಬುದು ॥ ೯೦ ॥

ಟೀ ॥ ರತಿಃ, ಹಾಸಃ, ಶೋಕಃ, ಕ್ರೋಧಃ, ಉತ್ಸಾಹಃ, ಭಯಂ, ಜುಗುಪ್ಸಾ, ವಿಸ್ಮಯಃ, ಶಮಃ—ಈ ೯ **ಸ್ಥಾಯಿಾ ಭಾವಂಗಳ್** ॥ ೯೧ ॥

ಟೀ ॥ ಶೃಂಗಾರಃ, ಹಾಸ್ಯಃ, ಕರುಣಃ, ರೌದ್ರಃ, ವೀರಃ, ಭಯಾನಕಃ, ಭೀಭತ್ಸಃ, ಅದ್ಭುತಃ, ಶಾಂತಃ—ಈ ೯ **ರಸಂಗಳ್** ॥ ೯೨ ॥

ಟೀ ॥ ಗೀತಂ, ಗಾನಂ, (ಇತಿಪ್ರೋಕ್ತಂ)—ಈ ೨ **ಹಾಡಿನ** ಪೆಸರ್.
ವಾದ್ಯಂ, ಆತೋದ್ಯಂ—ಈ ೨ **ವಾದ್ಯಂ.**
ನೃತ್ಯಂ, ತಾಂಡವಂ, ಲಾಸ್ಯಂ—ಈ ೩ **ನಾಟ್ಯ**ಮೆಂಬುದು ॥ ೯೩ ॥

ಟೀ ॥ (ಕಾಲ) ಕ್ರಿಯಾಪ್ರಮಾಣಮಂ ತಾಳಮೆಂಬುದು. **ಸಮಾನವಾಗುವುದಂ** ಲಯಮೆಂಬುದು. **ಅಂಗವಿಕ್ಷೇಪ**ಮಂ ಅಂಗಹಾರಮೆಂಬುದು. **ಅನುಕರಿಸುವುದಂ** (ಅಭಿ)ನಯಮೆಂಬುದು ॥ ೯೪ ॥

ಟೀ ॥ ನೃತ್ಯ, ಗೀತ, ವಾದ್ಯ—ಈ ೩ **ಸಂಗೀತ**ವೆಂಬುದು.
ಮೊದಲ ನಾಟ್ಯಮಂ ಪೂರ್ವರಂಗಮೆಂಬುದು ॥ ೯೫ ॥

ಟೀ ॥ ಘೋಷವತೀ, ವೀಣಾ,—ಈ ೨ **ವೀಣೆ**—ವಿಪಂಚೀ, ಪರಿವಾದಿನೀ, ವಲ್ಲಕೀ,—ಈ ಮೂಱು **ತಂತ್ರಿಯ ಭೇದದಿಂದ ಆದ ವೀಣೆಯ ಭೇದಂಗಳ್** ॥ ೯೬ ॥

---

(1) ಸಮಃ, (2) ತೃತೀಯಾ. (3) ಸೂಚ್ಯೋಽರ್ಥೋ,

೯೭—ರಂಗಸ್ಸ್ಯಾನ್ನರ್ತನಸ್ಥಾನಂ ಮೃದಂಗೋ ಮುರಜಃ ಸ್ಮೃತಃ ।
ಆನಕಃ ಪಟಹೋ ಜ್ಞೆಯೋ ಡಿಂಡಿಮಃ ಪಣವಸ್ತಥಾ ॥ ೯೭ ॥
೯೮—ಕೋಣೋ ವಾದನದಂಡಸ್ಸ್ಯಾತ್ ಭೇರೀ ದುಂದುಭಿರಿಷ್ಯತೇ ।
ನಾಟ್ಯೇ ರಾಜ್ಞೀ ಸ್ಮೃತಾ ದೇವೀ ಕುಮಾರೋ ಭರ್ತೃದಾರಕಃ ॥ ೯೮ ॥
೯೯—ಭಾವ ಇತ್ಯುಚ್ಯತೇ ವಿದ್ವಾನ್ ಭಾವುಕೋ ಭಗಿನೀಪತಿಃ ।
ಆವುಕಸ್ತು ಪಿತಾ ಜ್ಞೇಯ ಆರ್ಯೋ ಮಾರಿಷ ಉಚ್ಯತೇ ॥ ೯೯ ॥
೧೦೦—ಆಶಾಃ ಕಕುಭಃ ಕಾಷ್ಠಾ ಹರಿತಶ್ಚ [ದಿಶಾಃ]ದಿಶಃ ಸಮಾಖ್ಯಾತಾಃ ।
ಇಂದ್ರಾನಳಯಮನೈಋತವರುಣಮರುದ್ಧನದ ರುದ್ರ ದಿಕ್ಪಾಲಾಃ ॥ ೧೦೦ ॥
೧೦೧—ಐಂದ್ರೀ ಪೂರ್ವಾ ಪ್ರಾಚೀ ಯಾಮ್ಯಾ ದಿಕ್ ದಕ್ಷಿಣಾ ತಥಾವಾಚೀ ॥
ಸ್ಯಾದ್ವಾರುಣೀ(1) ಪ್ರತೀಚೀ ಕೌಬೇರೀ ಚೋತ್ತರೋದೀಚೀ ॥ ೧೦೧ ॥
೧೦೨—(2) ಅಂತರಾಳದಿಶಶ್ಚಾನ್ಯಾ ವಿದಿಶಃ ಪ್ರದಿಶಸ್ಸ್ಮೃತಾಃ ।
(3) ಉಪರಿಷ್ಟಾದುಪರ್ಯೂರ್ಧ್ವಂ ತಥಾಧಸ್ತಾದವಾಗಧಃ ॥ ೧೦೨ ॥
೧೦೩— ಪ್ರಾಚೀನಂ ಪ್ರಾಕ್ಸ್ಮೃತಂ ಪ್ರಾಜ್ಞೈರುದಿಚೀನಮುದಕ್ತಥಾ ।
ಪ್ರತ್ಯಕ್ಚೈವ ಪ್ರತೀಚೀನಮವಾಚೀನಮವಾ(4) ಗಿತಿ ॥ ೧೦೩ ॥

ಟೀ ॥ **ಆಡುವ ಠಾವು** ರಂಗಮೆಂಬುದು ಮೃದಂಗಃ, ಮುರಜಃ—ಈ ೨ **ಮದ್ದಳೆ.** ಆನಕಃ, ಪಟಹಃ,—ಈ ೨ **ಪಡಡಕ್ಕೆ**— ಡಿಂಡಿಮಃ, ಪಣವಃ,—ಈ ೨ **ಪಳ(ಬ)ಹಂ** ॥ ೯೭ ॥

ಟೀ ॥ ಬಾಜಿಸುವ **ಕುಡುಹು** ಕೋಣವೆಂಬುದು—ಭೇರೀ, ದುಂದುಭಿಃ,—ಈ ೨ **ಭೇರಿ. ನಾಟ್ಯದಲ್ಲಿಯರಸಿಯುರಂ** ದೇವಿಯೆಂಬುದು. **ಕುಮಾರನಂ** ಭರ್ತೃದಾರಕನೆಂಬುದು ॥ ೯೮ ॥

ಟೀ ॥ **ಸೂತ್ರಧಾರನಂ** ಭಾವ ಎಂಬುದು. **ಒಡಹುಟ್ಟಿದಳ ಮದವನಂ** ಭಾವುಕನೆಂಬುದು. **ತಂದೆಯುಂ** ಆವುಕನೆಂಬುದು. **ಹಿರಿಯನಂ** ಮಾರಿಷನೆಂಬುದು ॥ ೯೯ ॥

ಟೀ ॥ ಆಶಾ, ಕಕುಪ್, ಕಾಷ್ಠಾ, ಹರಿತ್, ದಿಕ್,—ಈ ೫ **ದೆಸೆಗಳ** ಪೆಸರ್—
ಇಂದ್ರಃ, ಅನಲಃ, ಯಮಃ, ನೈಋತಃ, ವರುಣಃ, ಮರುತ್, ಧನದಃ, ರುದ್ರಃ,—ಈ ೮ **ಮೂಡಲ್** ಮೊದಲಾದೆಂಟು ದೆಸೆಗಂ **ಕ್ರಮದಿಂ ದೊಡೆಯರ್** ॥ ೧೦೦ ॥

ಟೀ ॥ ಐಂದ್ರೀ, ಪೂರ್ವಾ, ಪ್ರಾಚೀ—ಈ ೩ **ಮೂಡಣದೆಸೆ.** ಯಾಮ್ಯಾ, ದಕ್ಷಿಣಾ, ಅವಾಚೀ—ಈ ೩ **ತೆಂಕಣದೆಸೆ.** ವಾರುಣೀ, ಪ್ರತೀಚೀ, (ಪ್ರತ್ಯಕ್)—ಈ ೩ **ಪಡುವಣ ದೆಸೆ.** ಕೌಬೇರೀ, ಉತ್ತರಾ, ಉದೀಚೀ,—ಈ ೩ **ಬಡಗಣದೆಸೆ** ॥ ೧೦೧ ॥

ಟೀ ॥ ಅಂತರಾಳದಿಶಃ, ವಿದಿಶಃ, ಪ್ರದಿಶಃ—ಈ ೩ **ಗೊಂಟುಗಳ** ಪೆಸರ್.
ಉಪರಿಷ್ಟಾತ್, ಉಪರಿ, ಊರ್ಧ್ವಂ—ಈ ೩ **ಮೇಗಣ** ಪೆಸರ್.
ಅಧಸ್ತಾತ್, ಅವಾಕ್, ಅಧಃ—ಈ ೩ **ಕೆಳಗಣ** ಪೆಸರ್. ॥ ೧೦೨ ॥

ಟೀ ॥ ಪ್ರಾಚೀನಂ, ಪ್ರಾಕ್—ಈ ೨ **ಮೂಡಲಾದುದು.** ಉದೀಚೀನಂ, ಉದಕ್—ಈ ೨ **ಬಡಗಲಾದುದು.** ಪ್ರತ್ಯಕ್, ಪ್ರತೀಚೀನಂ—ಈ ೨ **ಪಡುವಲಾದುದು.** ಅವಾಚೀನಂ, ಅವಾಕ್— ಈ ೨ **ತೆಂಕಲಾದುದ**ಱ ಪೆಸರ್ ॥ ೧೦೩ ॥

---

(1) ಪ್ರತೀಚೀ ಪ್ರತ್ಯಕ್ಕೌಬೇರೀ ಚೋತ್ತ. (2) ಅಂತರಾಳಾ ದಿಶಶ್ಚಾನ್ಯಾ. (3) ಉಪರಿಷ್ಟಾದುಪ ಊರ್ಧ್ವಂ. (4) ಮಪಾಹತಿಃ(ಗ್ಗತಿಃ), ಮವಾಕ್ಚ ತತ್, ಎಂದಿರಬಹುದು.

೧೦೪—ಐರಾವತಃ ಪುಂಡರೀಕಃ ಕುಮುದಾಂಜನವಾಮನಾಃ ।
ಪುಷ್ಪದಂತಃ ಸಾರ್ವಭೌಮಃ ಸುಪ್ರತೀಕಶ್ಚ ದಿಗ್ಗಜಾಃ ॥ ೧೦೪ ॥

೧೦೫—(1) ದಿಷ್ಟಃ ಕಾಲಸ್ತಥಾನೇಹಾಸ್ತದ್ಭೇದಾಸ್ಸ್ಯುಃ ಕಳಾದಯಃ ।
ಅಹೋರಾತ್ರಂ ತು ವಿದ್ವದ್ಭಿಃ ಕಥ್ಯತೇ ಷಷ್ಟಿನಾಡಿಕಂ ॥ ೧೦೫ ॥

೧೦೬ – ದಿವಸೋ ದಿವಾ ದಿನಂ ದ್ಯುಃ ಪ್ರೋಕ್ತ ಮಹರ್ವಾಸರಸ್ತಥಾ ಘಸ್ರಃ ।
ಪ್ರಹರೋ ಯಾಮಸ್ಸಂಧ್ಯಾ ರಜನೀದಿನಯೋಃ(2) ಪ್ರವೇಶನಃ ಕಾಲಃ ॥ ೧೦೬ ॥

೧೦೭ – ತಮಿಾ ತಮಿಸ್ರಾ ಕಥಿತಾ ತಮಸ್ವಿನೀ ।
ವಿಭಾವರೀ ನಕ್ತಮುಷಾ ಚ ಶರ್ವರೀ ।
ಕ್ಷಪಾ ತ್ರಿಯಾಮಾ ಕ್ಷಣದಾ ನಿಶೀಥಿನೀ ।
ನಿಶಾ ಚ ದೋಷಾ ರಜನೀ ಚ ಯಾಮಿನೀ ॥ ೧೦೭ ॥

೧೦೮—ವಸತಿರ್ವಾಸತೇಯಿಾ ಚ ಶ್ಯಾಮಾ ರಾತ್ರಿಶ್ಚ ಕಥ್ಯತೇ ।
ಗಣರಾ(ತ್ರಂ)ತ್ರೋ ನಿಶಾ ಬಹ್ವ್ಯಶ್ಚಿರರಾತ್ರಸ್ತತಃ ಪರಮ್ ॥ ೧೦೮ ॥

೪೯೨ — ಕುಟ್ಟಿನೀ ಶಂ(ಭ)ಫಳೀ ಚುಂ(ದಿ)ಡೀ ಸೈರಂಧ್ರೀ ಗಂಧಕಾರಿಕಾ ॥
ಪೋಟಾ ಚೆ(ಪೋ)ಟಾ ತಥಾ ಚೇಟೀ ದಾಸೀ ಸ್ಯಾ(2) ತ್ಕುಟಹಾರಿಕಾ ॥ ೩೩೮ ॥
೪೯೩ — ಪಾಂಚಾಳಿಕಾ ಪುತ್ರಿಕಾ ಸ್ಯಾತ್ಕಾಷ್ಠದಂತಾದಿನಿರ್ಮಿತಾ ॥
(3) ಸ್ಮೃತಾ ಲೇಪ್ಯಮಯೀ ಸ್ತ್ರೀ ತು ಬುಧೈರಞ್ಜಲಿಕಾರಿಕಾ ॥ ೩೩೯ ॥
೪೯೪ — ದಾರಾಃ ಕ್ಷೇತ್ರಂ ಕಳತ್ರಂ ಚ ಭಾರ್ಯಾ ಸಹಚರೀ ವಧೂಃ ॥
ಸಧರ್ಮಚಾರಿಣೀ ಪತ್ನೀ ಜಾಯಾ (ಚ) ಗೃಹಿಣೀ ಗೃ(ಹಾಃ)ಹಾ ॥ ೩೪೦ ॥
೪೯೫ — ಉಪಯಾಮಃ ಪರಿಣಯನಂ ಪಾಣಿಗ್ರಹಣಂ ವಿವಾಹ ಉದ್ವಾಹಃ ॥
ಕುಲ(ಬಾ)ಪಾಲಿಕಾ ಕುಲಸ್ತ್ರೀ ಪತಿವ್ರತಾ ಸುಚರಿತಾ ಸತೀ ಸಾಧ್ವೀ ॥ ೩೪೧ ॥
೪೯೬ — ಪಾಂಸುಳಾ ಬಂಧ(ಧು)ಕೀ ಸ್ವೈರಿಣ್ಯಸತೀ ಪುಂಶ್ಚಲೀತ್ವರೀ ॥
(4) ಧರ್ಷಿಣೀ ಕುಲಟಾ ಪ್ರೋಕ್ತಾ(ತ್ವ) ಅವಿನೀತಾಭಿಸಾರಿಕಾ ॥ ೩೪೨ ॥

ಟೀ ॥ **ಸೂ(ೞೆ)ಳೆಯರ ಮೊತ್ತಮಂ** ಗಾಣಿಕ್ಯಮೆಂಬುದು.
ಅಸಿಕ್ನಿ ಎಂಬುದು **ಲೆಂಕಿತಿ.** ದೂತೀ, ಸಂಚಾರಿಕಾ— ಈ ೨ **ದೂದವಿ** ॥ ೩೩೭ ॥
ಟೀ ॥ ಕುಟ್ಟಿನೀ, ಶಂಫಳೀ, ಚುಂಡೀ-ಈ ೩ **ಕೂಂಟಣಿ.**
ಸೈರಂಧ್ರೀ, ಗಂಧಕಾರಿಕಾ—ಈ ೨ **ಘಟ್ಟಿವಳ್ತಿ.**
ಪೋಟಾ, ಚೇಟಾ, ಚೇಟೀ, ದಾಸೀ, ಕುಟಹಾರಿಕಾ— ಈ ೫ **ತೊೞ್ತು** ॥ ೩೩೮ ॥
ಟೀ ॥ ಪಾಂಚಾಲಿಕಾ, ಪುತ್ರಿಕಾ – ಈ ೨ **ಪುತ್ತೞಿಗೆ.**
ಲೆಪ್ಪದ ಚಿತ್ರದ ಸ್ತ್ರೀ ಅಂಜಲಿಕಾರಿಕಾಯೆಂಬುದು ॥ ೩೩೯ ॥
ಟೀ ॥ ದಾರಾಃ, ಕ್ಷೇತ್ರಂ, ಕಳತ್ರಂ, ಭಾರ್ಯಾ, ಸಹಚರೀ, ವಧೂಃ, ಸಧರ್ಮಚಾರಿಣೀ, ಪತ್ನೀ, ಜಾಯಾ, ಗೃಹಿಣೀ, ಗೃಹಾಃ – ಈ ೧೩ **ಹೆಂಡಿತಿ** ॥ ೩೪೦ ॥
ಟೀ ॥ ಉಪಯಾಮಃ, ಪರಿಣಯನಂ, ಪಾಣಿಗ್ರಹಣಂ, ವಿವಾಹಃ, ಉದ್ವಾಹಃ—ಈ ೫ **ಮದುವೆ.**
ಕುಲಪಾಲಿಕಾ, ಕುಲಸ್ತ್ರೀ, ಪತಿವ್ರತಾ, ಸುಚರಿತಾ, ಸತೀ, ಸಾಧ್ವೀ-ಈ ೬ **ಪತಿವ್ರತೆ** ॥ ೩೪೧ ॥
ಟೀ ॥ ಪಾಂಸುಳಾ, ಬಂಧಕೀ, ಸ್ವೈರಿಣೀ, ಅಸತೀ, ಪುಂಶ್ಚಳೀ, ಇತ್ವರೀ, ಧರ್ಷಿಣೀ, ಕುಲಟಾ, ಅವಿನೀತಾ, ಅಭಿಸಾರಿಕಾ—ಈ ೧೦ **ಹಾದರಿಗಿತ್ತಿ** ॥ ೩೪೨ ॥

---

(1) ಅವಶ್ಯಾಂತಃಪುರಃ ಪ್ರೋಕ್ತಾ, ಪುರಪ್ರೇಕ್ಷಾ (2) ತ್ಕುಟ್ಟ (3) ಸ್ಮೃತೋಲೇಪಮಯಿಾ (4) ವರ್ಷಣೀ

೪೯೭—ಕಾಂತಃಸ್ಯಾತ್ಕಮಿತಾ ಪತಿರ್ವರಯಿತಾ ಭರ್ತಾ ಚ ಭೋಕ್ತಾ ಧವೋ ।
ರುಚ್ಯಾಭೀಕ ವರಾಭಿಕಾಶ್ಚ ರಮಣಃ ಪ್ರಾಣಾಧಿನಾಥೋಽನುಕಃ(1) ॥
ಸೂನುಸ್ಸಂತತಿರಾತ್ಮಜಶ್ಚ ತನುಜಃ ಪುತ್ರಃ ಪ್ರಸೂತಿಸ್ಸುತ ।
ಸ್ತುಕ್ತೋಕಂ ತನಯ(2)ಸ್ತನಂಧಯ ಇತಿ ಪ್ರಾಜ್ಞೈರಪತ್ಯಂ
[ಸ್ಮೃತಂ ॥ ೩೪೩ ॥

೪೯೮—ಆಪನ್ನಸತ್ವಾ ಗುರ್ವೀ ಸ್ಯಾದಂತರ್ವತ್ನೀ ಚ ಗರ್ಭಿಣೀ ॥
ದೋ(3)ಹಳಂ ದೌಹೃದಂ ಶ್ರದ್ಧಾ ಲಾಲಸಾ ಚ ಸಮಾಸ್ಸ್ಮೃತಾಃ ॥ ೩೪೪ ॥

೪೯೯—ಸೂತಿಮಾಸೋ ವೈಜನನೋ ಗರ್ಭೋ ಭ್ರೂಣ ಇತಿ ಸ್ಮೃತಃ ॥
ಅರಿಷ್ಟಗೃಹಮಿಚ್ಛಂತಿ ಸೂತಿಕಾಭವನಂ ಬುಧಾಃ ॥ ೩೪೫ ॥

೫೦೦—ವಿಜಾತಾ ಚ ಪ್ರಜಾತಾ ಚ ಪ್ರಸೂತಾ ಸ್ತ್ರೀ ನಿಗದ್ಯತೇ ॥
ಗರ್ಭಾ(4)ಶಯೋ ಜರಾಯುಸ್ಸ್ಯಾ(5)ದುಲ್ವಂ ಚ ಕಲಿಲಂ ಸ್ಮೃತಂ ॥ ೩೪೬ ॥

೫೦೧—ಕನ್ಯಾಪುತ್ರಸ್ತು ಕಾನೀನೋ (6)ನಾದೇಯಸ್ಸ್ಯಾನ್ನದೀಸುತಃ ॥
ಬಂಧುಳೋ(7) ಬಂಧಕೀಪುತ್ರೋ ಗೋಪ್ಯೋ ದಾಸೀಸುತಃ ಸ್ಮೃತಃ ॥ ೩೪೭ ॥

ಟೀ ॥ ಕಾಂತಃ, ಕಮಿತಾ, ಪತಿಃ, ವರಯಿತಾ, ಭರ್ತಾ, ಭೋಕ್ತಾ, ಧವಃ, ರುಚ್ಯಃ, ಅಭೀಕಃ, ವರಃ, ಅಭಿಕಃ, ರಮಣಃ, ಪ್ರಾಣಾಧಿನಾಥಃ, ಅನುಕಃ—ಈ ೧೪ **ಗಂಡಂ.**

ಸೂನುಃ, ಸಂತತಿಃ, ಆತ್ಮಜಃ, ತನುಜಃ, ಪುತ್ರಃ, ಪ್ರಸೂತಿಃ, ಸುತಃ, ತುಕ್, ತೋಕಂ, ತನಯಃ, ಸ್ತನಂಧಯಃ, ಅಪತ್ಯಂ—ಈ ೧೨ **ಮಗವು** ॥ ೩೪೩ ॥

ಟೀ ॥ ಆಪನ್ನಸತ್ವಾ, ಗುರ್ವೀ, ಅಂತರ್ವತ್ನೀ, ಗರ್ಭಿಣೀ—ಈ ೪ **ಬಸಿಱ ಹೆಂಡಿತಿ.**
ದೋಹಳಂ, ದೌಹೃದಂ, ಶ್ರದ್ಧಾ, ಲಾಲಸಾ—ಈ ೪ **ಬಯಕೆ** ॥ ೩೪೪ ॥

ಟೀ ॥ ಸೂತಿಮಾಸಃ, ವೈಜನನಃ—ಈ ೨ **ಪೊಟ್ಟು(ಹೊತ್ತು)ತೀವುವುದು.**
ಗರ್ಭಃ, ಭ್ರೂಣಃ—ಈ ೨ **ಗರ್ಭಂ.**
ಅರಿಷ್ಟಗೃಹಂ, ಸೂತಿಕಾಭವನಂ—ಈ ೨ **ಹೆತ್ತಮನೆ** ॥ ೩೪೫ ॥

ಟೀ ॥ ಗರ್ಭಾಶಯಃ, ಜರಾಯುಃ—ಈ ೨ **ಕೂಸಿರ್ಪ ಚೀ(ಲ)ರಂ.**
ಉಲ್ವಂ, ಕಲಿಲಂ—ಈ ೨ **ಗಲ್ಲೆಗಟ್ಟಿದ ನೆತ್ತಱು** ॥ ೩೪೬ ॥

ಟೀ ॥ ಕನ್ಯಾಪುತ್ರಃ, ಕಾನೀನಃ—ಈ ೨ **ಕನ್ನೆಯ ಮಗಂ** (ಕನ್ಯಕಿಯ ಮಗಂ.)
ನಾದೇಯಃ, ನದೀಸುತಃ—ಈ ೨ **ನದಿಯ ಮಗಂ.**
ಬಂಧುಳಃ, ಬಂಧಕೀಪುತ್ರಃ—ಈ ೨ **ಕಿಡಿಕಿಯ ಮಗಂ.**
ಗೋಪ್ಯಃ, ದಾಸೀಸುತಃ—ಈ ೨ **ತೊಟ್ಟಿನ ಮಗಂ** ॥ ೩೪೭ ॥

---

(1) ನುಕಃ (2) ಸ್ತುನ(ಕ)ಂದನ ಇತಿ (3) ಹದಂ (4) ಶ್ರಯೋ (5) ತ್ಸ್ಯುಲಂ ಚ ಕಲನಂ
(6) ನ್ನಾಟೀರಸ್ಸ್ಯಾನ್ನಟೀಸುತಃ (7) ಬಂಧುಕೋ ಬಂಧುಕೀ,

*[ಅನ್ಯೃತೇ ಜಾರಜಃ ಕುಂಡೋಽನ್ಯೃತೇ ಭರ್ತರಿ ಗೋಳಕಃ]

೫೦೨—ಬಾಳಃ ಪಾಕೋಽರ್ಭಕೋ ಗರ್ಭಃ ಪೋತಶ್ಚ ಪೃಥುಕಶ್ಶಿಶುಃ ॥
ಶಾಬೋ ಡಿಂಬಶ್ಚ ವಿಜ್ಞೇಯೋ ವಟುರ್ಮಾಣವಕೋ ಮತಃ ॥ ೩೪೮ ॥

೫೦೩—ಪ್ರವಯಾಸ್ಸ್ಥವಿರೋ ವೃದ್ಧೋ ಯಾತಯಾಮಶ್ಚ ಕಥ್ಯತೇ ॥
ಜರಾ ತು(1) ವಿಸ್ರಸಾ ಪ್ರೋಕ್ತಾ ದಾರಕಸ್ತರುಣೋ ಯುವಾ ॥ ೩೪೯ ॥

೫೦೪—ಅಂಬಾ ಸವಿತ್ರೀ ಜನನೀ ಚ ಮಾತಾ ।
ವಪ್ತಾ ಚ ತಾತೋ ಜನಕಃ ಪಿತಾ ಚ ॥
ಸ್ನುಷಾ ಜನೀ ಪುತ್ರವಧೂರ್ವಧೂಸ್ಸ್ಯಾತ್ ।
ಪ್ರಜಾವತೀ ಭ್ರಾತೃವಧೂಃ ಸ್ಮೃತಾ ಚ ॥ ೩೫೦ ॥

೫೦೫—ದುಹಿತಾ ತನಯಾ ಪುತ್ರೀ ಜಾಮಾತಾ ದುಹಿತುಃ ಪತಿಃ ॥
ದೌಹಿತ್ರಸ್ತತ್ಸುತೋ ನಪ್ತಾ ಸ ಚ ಪೌತ್ರ(ಶ್ಚ)ಸ್ತು ಕಥ್ಯತೇ ॥ ೩೫೧ ॥

೫೦೬—ಅಗ್ರಜಃ ಪೂರ್ವಜೋ ಜ್ಯೇಷ್ಠಃ ಕನಿಷ್ಠೋಽವರಜೋಽನುಜಃ ॥
ಭ್ರಾತೃವ್ಯೋ ಭ್ರಾತೃಪುತ್ರಃ ಸ್ಯಾತ್ ಭ್ರಾತ್ರೀಯೋ ಭ್ರಾತೃಜಸ್ತಥಾ ॥ ೩೫೨ ॥

ಟೀ ॥ ಬಾಳಃ, ಪಾಕಃ, ಅರ್ಭಕಃ, ಗರ್ಭಃ, ಪೋತಃ, ಪೃಥುಕಃ, ಶಿಶುಃ, ಶಾಬಃ, ಡಿಂಬಃ—ಈ ೯ **ಮಗವು.**
ವಟುಃ, ಮಾಣವಕಃ—ಈ ೨ **ಮಾಣಿ** ॥ ೩೪೮ ॥

ಟೀ ॥ ಪ್ರವಯಾಃ, ಸ್ಥವಿರಃ, ವೃದ್ಧಃ, ಯಾತಯಾಮಃ—ಈ ೪ **ಹರೆಯಂಬೋದಾತಂ.**
ಜರಾ, ವಿಸ್ರಸಾ—ಈ ೨ **ಮುಪ್ಪು.**
ದಾರಕಃ, ತರುಣಃ, ಯುವಾ—ಈ ೩ **ಜವ್ವನಿಗಂ** ॥ ೩೪೯ ॥

ಟೀ ॥ ಅಂಬಾ, ಸವಿತ್ರೀ, ಜನನೀ, ಮಾತಾ—ಈ ೪ **ತಾಯ್.**
ವಪ್ತಾ, ತಾತಃ, ಜನಕಃ, ಪಿತಾ—ಈ ೪ **ತಂದೆ.**
ಸ್ನುಷಾ, ಜನೀ, ಪುತ್ರವಧೂಃ, ವಧೂಃ—ಈ ೪ **ಸೊಸೆ.**
ಪ್ರಜಾವತೀ, ಭ್ರಾತೃವಧೂಃ—ಈ ೨ **ನಾ(ದಿ)ದುನಿ** ॥ ೩೫೦ ॥

ಟೀ ॥ ದುಹಿತಾ, ತನಯಾ, ಪುತ್ರೀ—ಈ ೩ **ಮಗಳ್.**
ಮಗಳ ಮದವನಂ ಜಾಮಾ(ತಾ ಎ)ತೃವೆಂಬುದು.
ದೌಹಿತ್ರಃ, ನಪ್ತಾ—ಈ ೨ **(ಮ)ಗಳ ಮಗಂ; ಪೌತ್ರನುಂ ಅಹಂ** ॥ ೩೫೧ ॥

ಟೀ ॥ ಅಗ್ರಜಃ, ಪೂರ್ವಜಃ, ಜ್ಯೇಷ್ಠಃ—ಈ ೩ **ಅಂಣಂ.**
ಕನಿಷ್ಠಃ, ಅವರಜಃ, ಅನುಜಃ—ಈ ೩ **ತಂಮಂ.**
ಭ್ರಾತೃವ್ಯಃ, ಭಾತೃಪುತ್ರಃ, ಭ್ರಾತ್ರೀಯಃ, ಭ್ರಾತೃಜಃ—ಈ ೪ **ಒಡಹುಟ್ಟಿದನ ಮಗಂ** ॥ ೩೫೨ ॥

---

*ಈ ಅರ್ಧ ಪದ್ಯವು ಒಂದು ಪ್ರತಿಯಲ್ಲಿದೆ. (1) ವಿಶ್ವಸಾ

೫೦೭—ಧಾತ್ರೀ ಸ್ಯಾದುಪಮಾತಾ ಭಗಿನೀ ಜಾಮಿಃ ಸ್ವಸಾ ಚ ವಿಜ್ಞೇಯಾ ॥
ತತ್ಪುತ್ರಸ್ಸ್ವಸ್ರೀಯೋ ಜಾಮೇಯೋ ಭಾಗಿನೇಯ(ಶ್ಚ) ಸ್ಸ್ಯಾತ್ ॥ ೩೫೩ ॥

೫೦೮—ಸಮಾನೋದರ್ಯ ಸೋದರ್ಯ ಸಗರ್ಭಾಃ ಸೋದರಾಃ ಸಮಾಃ ॥
ಭಾತೃವರ್ಗಸ್ಯ ಯಾ ಜಾಯಾ ಯಾತರಸ್ಸ್ಯುಃ ಪರಸ್ಪರಂ ॥ ೩೫೪ ॥

೫೦೯—ಆತ್ಮೀಯಃ ಸ್ವಜನೋ ಬಂಧುಃ ಆಪ್ತೋ ಜ್ಞಾತಿಶ್ಚ ಬಾಂಧವಃ ॥
ಸನಾಭಯಃ ಸಪಿಂಡಾಶ್ಚ ಸಗೋತ್ರಾಶ್ಚ ಸಮಾಸ್ಸ್ಮೃತಾಃ ॥ ೩೫೫ ॥

೫೧೦—ತನುಸ್ತನೂಸ್ಸಂಹನನಂ ಶರೀರಂ ।
ಕಳೇವರಂ ವಿಗ್ರಹದೇಹಕಾಯಾಃ ॥
ಅಂಗಂ ವಪುರ್ವರ್ಷ್ಮ ಪುರಂ ಚ ಪಿಂಡಂ ।
ಕ್ಷೇತ್ರಂ ಚ (1) ಗಾತ್ರಾಪಘನೌ ಚ ಮೂರ್ತಿಃ ॥ ೩೫೬ ॥

೫೧೧—ಅಂಘ್ರಿಃ ಪಾದ ಶ್ಚರಣಃ ಪಾಣಿಃ ಶಯ ಪಂಚಶಾಖ ಕರಹಸ್ತಾಃ ॥
ಕಾಮಾಂಕುಶಾಃ ಕರರುಹಾಃ (2) ಪುನರ್ನವಾಃ ಪಾಣಿಜಾ ನಖಾ
[ನಖರಾಃ ॥ ೩೫೭ ॥

೫೧೨—ಕಾಂಚೀಪದಂ ಕಳತ್ರಂ ಜಘನಂ ಶ್ರೋಣೀ ಕಕುದ್ಮತೀ ಜ್ಞೇಯಾ ॥
ಆರೋಹಶ್ಚ ನಿತಂಬಃ ಕಟೀ (4) ಕಟೀರಂ ತ್ರಿಕಸ್ಥಾನಂ ॥ ೩೫೮ ॥

ಟೀ ॥ ಧಾತ್ರೀ, ಉಪಮಾತಾ—ಈ ೨ **ದಾದಿ.**

ಭಗಿನೀ, ಜಾಮಿಃ, ಸ್ವಸಾ—ಈ ೩ **ಒಡಹುಟ್ಟಿದವಳ್.**

ಸ್ವಸ್ರೀಯಃ, ಜಾಮೇಯಃ, ಭಾಗಿನೇಯಃ—ಈ ೩ **ಒಡಹುಟ್ಟಿದಳ ಮಗಂ** ॥ ೩೫೩ ॥

ಟೀ ॥ ಸಮಾನೋದರ್ಯಃ, ಸೋದರ್ಯಃ, ಸಗರ್ಭಃ, ಸೋದರಃ—ಈ ೪ **ಒಡಹುಟ್ಟಿದಂ.** ಯಾ(ತಾ)ತೃವೆಂಬುದು **ನಗೆವೆಣ್ಣು** (ನೆಗಣ್ಣೆ ಎಂದಿರಬಹುದು) ॥ ೩೫೪ ॥

ಟೀ ॥ ಆತ್ಮೀಯಃ, ಸ್ವಜನಃ, ಬಂಧುಃ, ಆಪ್ತಃ, ಜ್ಞಾತಿಃ, ಬಾಂಧವಃ—ಈ ೬ **ನಂಟರ್.**

ಸನಾಭಿಃ, ಸಗೋತ್ರಃ, ಸಪಿಂಡಃ—ಈ ೩ **ಗೋತ್ರಜರ್** ॥ ೩೫೫ ॥

ಟೀ ॥ ತನುಃ, ತನೂಃ, ಸಂಹನನಂ, ಶರೀರಂ, ಕಳೇವರಂ, ವಿಗ್ರಹಃ, ದೇಹಃ, ಕಾಯಃ, ಅಂಗಂ, ವಪುಃ, ವರ್ಷ್ಮ, ಪುರಂ, ಪಿಂಡಂ, ಕ್ಷೇತ್ರಂ, ಗಾತ್ರಃ, ಅಪಘನಃ, ಮೂರ್ತಿಃ—ಈ ೧೭ **ಶರೀರಂ** ॥ ೩೫೬ ॥

ಟೀ ॥ ಅಂಘ್ರಿಃ, ಚರಣಃ, ಪಾದಃ—ಈ ೩ **ಕಾಲ್.**

(3) ಪಾಣಿಶಯಃ, ಪಂಚಶಾಖಃ, ಕರಃ, ಹಸ್ತಃ—ಈ ೪ **ಕೆಯ್.**

ಕಾಮಾಂಕುಶಾಃ, ಕರರುಹಾಃ, (ಪುನರ್ನವಾಃ) ಪಾಣಿಜಾಃ, ನಖಾಃ, ನಖರಾಃ ಈ ೫ (೬?) **ಉಗುರ್** ॥ ೩೫೭ ॥

ಟೀ ॥ ಕಾಂಚೀಪದಂ, ಕಳತ್ರಂ, ಜಘನಂ, ಶ್ರೋಣೀ, ಕಕುದ್ಮತೀ—ಈ ೫ **ಜಘನಂ.** ಆರೋಹಃ, ನಿತಂಬಃ, ಕಟೀ—ಈ ೩ **ಕಟಿ.** ಕಟೀರಂ, ತ್ರಿಕಸ್ಥಾನಂ—ಈ ೨ **ತಿಗಂ** ॥ ೩೫೮ ॥

---

(1) ಗಾತ್ರಂ ಚ ಘನಶ್ಚ (2) ಪುನಸ್ತಥಾ (3) ಪಾಣಿಃ, ಶಯಃ (ಎಂದು ವ್ಯಸ್ತವಾಗಿರಬಹುದು) (4) ಕುಟೀರಂ ತ್ರಿಷು ಸ್ಥಾನಂ

೫೧೩—ಗುದಃ ಪಾಯುರಪಾನಂ ಸ್ಯಾತ್ ಕಟಿಪ್ರೋಥೌ ಸ್ಫಿಜೌ (1) ಯುಜೌ ॥
ಕ(ಕು)ಕುಂದರೌ ಸಮಾಚಷ್ಟೇ ಜನೋ ಜಘನಕೂಪಕೌ ॥ ೩೫೯ ॥

೫೧೪—ಭಗೋ ಯೋನಿರುಪಸ್ಥಶ್ಚ ವರಾಂಗಂ ಸ್ಮರಮಂದಿರಂ ॥
ಶಿಶ್ನಃ (2) ಶೇಫೋಽಥ ಮೇಢ್ರಶ್ಚ ಲಿಂಗಂ ಮೇಹನಶೇಫಸೀ ॥ ೩೬೦ ॥

೫೧೫—ಜಾನುಃಸ್ಯಾದಷ್ಠೀವಾನ್ ಪ್ರಸೃತಾ ಜಂಘಾ ಚ (3) ಘುಂಟಿಕಾ ಗುಲ್ಫಃ ॥
ಊರುಃ ಸಕ್ಥಿ ಪಿಚಂಡಂ ಜಠರೋದರತುಂ(ದ)ಡ ಕುಕ್ಷಿಗರ್ಭಾಃ ಸ್ಯುಃ ॥ ೩೬೧ ॥

೫೧೬—ಅಂಗುಲ್ಯಃ ಕರಶಾಖಾಃ ಕರ್ಣಃ ಶ್ರೋತ್ರಂ ಶ್ರುತಿಃ (ಶ್ರವಃ) ಶ್ರವಣಂ ॥
ಗ್ರೀವಾ (4) ಧಮನೀಮ(ರ್)ನ್ಯಾ ಶಿರೋಧರಾ ಕಂಧರಾ ಗಳಃ ಕಂಠಃ ॥ ೩೬೨ ॥

೫೧೭—ರೇಖಾತ್ರಯಾಂಕಿತ ಗ್ರೀವಾ ಕಂಬುಗ್ರೀವೇತಿ ಕಥ್ಯತೇ ॥
ಅವಲಗ್ನಂ ವಿಲಗ್ನಂ ಚ ಮಧ್ಯಂ ಮಧ್ಯಮ ಮುಚ್ಯತೇ ॥ ೩೬೩ ॥

೫೧೮—ಮುಂಡೋತ್ತಮಾಂಗ ಮಸ್ತಕ ಮೌಳಿಶಿರಃ ಶೀರ್ಷ ಮೂರ್ಧಕಾನಿ ಸ್ಯುಃ ॥
ತುಂಡಂ ವದನಂ ವಕ್ತ್ರಂ ಲಪನಂ ಮುಖಮಾಸ್ಯಮಾನನಂ ಚ
[ಸಮಂ ॥ ೩೬೪ ॥

ಟೀ ॥ ಗುದಃ, ಪಾಯುಃ, ಅಪಾನಂ— ಈ ೩ **ಗುದಂ.**

ಕಟಿಪ್ರೋ(ಥ)ತಂ, ಸ್ಫಿಕ್, ಯು(ಕ್)ಗಃ— ಈ ೩ **ಕುಂಡಿ.**

ಕುಕುಂದರಃ, ಜಘನಕೂಪಃ—ಈ ೨ **ಕುಂಡೆಯ ಕುೞಿ** ॥ ೩೫೯ ॥

ಟೀ ॥ ಭಗಃ, ಯೋನಿಃ, ಉಪಸ್ಥಃ, ವರಾಂಗಂ, ಸ್ಮರಮಂದಿರಂ—ಈ ೫ **ಉಪಸ್ಥಂ**

ಶಿಶ್ನಃ, ಶೇಫಃ, ಮೇಢ್ರಃ, ಲಿಂಗಂ, ಮೇಹನಂ, ಶೇಫಸ್—ಈ ೬ **ಶೇಫಂ** ॥ ೩೬೦ ॥

ಟೀ ॥ ಜಾನುಃ, ಅಷ್ಠೀವಾನ್ – ಈ ೨ **ಮೊಣಕಾಲ್.**

ಪ್ರಸೃತಾ, ಜಂಘಾ—ಈ ೨ **ಕಿಱುದೊಡೆ.** ಘುಟಿಕಾ, ಗುಲ್ಫಃ—ಈ ೨ **ಹರಡು.**

ಊರುಃ, (5) ಸಕ್ಥಿ, ಪಿಚಂಡಂ?—ಈ ೩ **ಹೆದ್ದೊಡೆ.**

ಜಠರಃ, ಉದರಃ, ತುಂ(ದ)ಡಃ, ಕುಕ್ಷಿಃ, ಗರ್ಭಃ--ಈ ೫ **ಹೊಟ್ಟೆ** ॥ ೩೬೧ ॥

ಟೀ ॥ ಅಂಗುಲೀ, ಕರಶಾಖಾ—ಈ ೨ **ಬೆರಲ್.**

ಕರ್ಣಃ, ಶ್ರೋತ್ರಂ, ಶ್ರುತಿಃ, ಶ್ರವಃ, ಶ್ರವಣಂ—ಈ ೫ **ಕಿವಿ.**

(6) ಗ್ರೀವಾ, ಧಮನೀಃ, ಮನ್ಯಾ, ಶಿರೋಧರಾ, ಕಂಧರಃ, ಗಳಃ, ಕಂಠಃ—ಈ ೭ **ಕೊರಲ್** ॥ ೩೬೨ ॥

ಟೀ ॥ **ಮೂಱುರೇಖೆಯನುಳ್ಳ ಕೊರಲ್** ಕಂಬುಗ್ರೀವಾ ಎಂಬುದು.

ಅವಲಗ್ನಂ, (ವಿ)ಲಗ್ನಂ ಮಧ್ಯಂ, ಮಧ್ಯಮಂ—ಈ ೪ **ನಡು** ॥ ೩೬೩ ॥

ಟೀ ॥ ಮುಂಡಃ, ಉತ್ತಮಾಂಗಃ, ಮಸ್ತಕಃ, ಮೌಳಿಃ, ಶಿರಃ, ಶೀರ್ಷಃ, ಮೂರ್ಧಾ, ಕಂ—ಈ ೮ **ಮಂಡೆ.**

ತುಂಡಂ, ವದನಂ, ವಕ್ತ್ರಂ, ಲಪನಂ, ಮುಖಂ, ಆಸ್ಯಂ, ಆನನಂ—ಈ ೭ **ಮೊಗಂ** ॥ ೩೬೪ ॥

---

(1) ಪುತೌ (2) ಶಿಸ್ನಃಶೋಫೋಽಥ-- ತುಲ್ಯೇಮೇಹನಶೇಫಸೀ (3) ಘುಂಟಕೋ (4) ಧರ್ಮನೀರ್ಮನ್ಯಾ (5) ಈ ೨ ಹೆದ್ದೊಡೆ, ಪಿಚಂಡಂ, ಜಠರಃ, (ಎಂದಿರಬೇಕು). (6) ಗ್ರೀವಾ, ಧಮನೀಮನ್ಯಾಃ, ಎಂದಿರಬಹುದು.

೫೧೯ – ದೃಗ್ದೃಷ್ಟಿನೇತ್ರ ಲೋಚನ ಚಕ್ಷುರ್ನಯನಾಂಬಕೇಕ್ಷಣಾಕ್ಷೀಣಿ ॥
ಅಶ್ರೂಣಿ ಬಾಷ್ಪರೋದನ ನಯನಜಲಾಶ್ರಾ(1)ಸ್ರ ನಾಮಾನಿ ॥ ೩೬೫ ॥

೫೨೦ – ನಯನೋಪಾಂತಮಪಾಂಗಃ(2) ಕನೀನಿಕಾ ನಯನಮಧ್ಯ ತಾರಾಚ ॥
ಕೂ(ರ್ಚ)ರ್ಪಂ ಭ್ರುವೋಶ್ಚ ಮಧ್ಯಂ ಸೃಕ್ವ ಸ್ಯಾದೋಷ್ಠ ಪರ್ಯಂತಃ ॥ ೩೬೬ ॥

೫೨೧ – ಸಿ(ಸ)ಂಘಿನೀ ನಾಸಿಕಾ ನಾಸಾ ಘ್ರಾಣಾ ಘೋಣಾ ಚ ಕಥ್ಯತೇ ॥
ರಸಜ್ಞಾ ರಸನಾ ಜಿಹ್ವಾ ತಾಳು ಕಾಕುದ ಮುಚ್ಯತೇ ॥ ೩೬೭ ॥

೫೨೨ – ದೋಷ್ಪ್ರವೇಷ್ಟೋ ಭುಜೋ ಬಾಹುರ್ಭುಜಾ ಚ ಸ್ಮರ್ಯತೇ ಬುಧೈಃ ॥
ಗಂಡೋ ಗಲ್ಲಃ ಕಪಾಳಶ್ಚ ಹನುಸ್ತುಲ್ಯಾರ್ಥವಾಚಕಾಃ ॥ ೩೬೮ ॥

೫೨೩ – ಮುಷ್ಕೋಽಂಡಂ ವೃಷಣಃ ಕೋಶಸ್ಸಂಗ್ರಾಹೋ ಮುಷ್ಕಿರಿಷ್ಯತೇ ॥
(3) ಜತ್ರು ವಕ್ಷೋಽಂಸಯೋಸ್ಸಂಧಿರೂರು ಸಂಧಿಶ್ಚ(4) ವಂಕ್ಷಣಃ ॥ ೩೬೯ ॥

೫೨೪–ರೋಮ ತನೂರುಹಮುಕ್ತಂ ನಯನಗತಂ ಪಕ್ಷ್ಮಮು(ಖ)ಗತಂ ಶ್ಮಶ್ರು ॥
ಅಧರೋ ದಂತಚ್ಛದ ಓಷ್ಠ ಉಚ್ಯತೇ ದಂತವಾ(ಸಾ)ಸಶ್ಚ ॥ ೩೭೦ ॥

ಟೀ ॥ ದೃಕ್, ದೃಷ್ಟಿಃ, ನೇತ್ರಂ, ಲೋಚನಂ, ಚಕ್ಷುಃ, ನಯನಂ, ಅಂಬಕಂ, ಈಕ್ಷಣಂ, ಅಕ್ಷಿ— ಈ ೯ **ಕಣ್.**
ಅಶ್ರು, ಬಾ(ಷ್ಪಂ)ಪ್ಪಂ, ರೋದನಂ, ನಯನಜಳಂ, ಅಸ್ರಂ:–ಈ ೫ **ಕಣ್ಣನೀರ್** ॥ ೩೬೫ ॥

ಟೀ ॥ ನಯನೋಪಾಂತಂ, ಅಪಾಂಗಃ– ಈ ೨ **ಕಡೆಗಣ್.**
ಕನೀನಿಕಾ, ನಯನಮಧ್ಯಂ, ತಾರಾ— ಈ ೩ **ಕರಿಯಾಲಿ.**
ಕೂ(ರ್ಪ)ರ್ಚವೆಂಬುದು **ಎರಡು ಪು(ಹು)ಬ್ಬಿನ ನಡು.**
ಸೃಕ್ವವೆಂಬುದು **ಕಡೆವಾಯ್** ॥ ೩೬೬ ॥

ಟೀ ॥ ಸಿಂಘಿನೀ, ನಾಸಿಕಾ, ನಾಸಾ, ಘ್ರಾಣಾ, ಘೋಣಾ— ಈ ೫ **ಮೂಗು.**
ರಸಜ್ಞಾ, ರಸನಾ, ಜಿಹ್ವಾ–ಈ ೩ **ನಾಲಗೆ.** ತಾಲು, ಕಾಕುದಂ– ಈ ೨ **ತಾಳುಗೆ** ॥೩೬೭॥

ಟೀ ॥ ದೋಃ, ಪ್ರವೇಷ್ಟಃ, ಭುಜಃ, ಬಾಹುಃ, ಭುಜಾ— ಈ ೫ **ತೋಳ್.**
ಗಂಡಃ, ಗಲ್ಲಃ, ಕಪೋಳಃ, ಹನುಃ— ಈ ೪ **ಗಲ್ಲಂ** ॥ ೩೬೮ ॥

ಟೀ ॥ ಮುಷ್ಕಂ, ಅಂಡಃ, ವೃಷಣಃ, ಕೋಶಃ, ಸಂಗ್ರಾಹಃ, ಮುಷ್ಕಿಃ–ಈ ೬ **ಅಂಡಂ.**
ಉರದ ತೋಳಸಂಧಿ ಜತ್ರುವೆಂಬುದು. **ತೊಡೆಯ ಸಂಧಿ** ವಂಕ್ಷಣವೆಂಬುದು ॥ ೩೬೯ ॥

ಟೀ ॥ ರೋಮಃ, ತನೂರುಹಂ— ಈ ೨ **ಮೆಯ್ಯ ಕೂದಲ್.**
ಪಕ್ಷ್ಮ ಎಂಬುದು ಎ(ವೆ)ಮೆ. **ಶ್ಮಶ್ರು**ವೆಂಬುದು ಮೀಸೆ.
ಅಧರಃ, ದಂತಚ್ಛದಃ, ಓಷ್ಠಃ, ದಂತವಾಸಃ— ಈ ೪ **ತುಟಿ** ॥ ೩೭೦ ॥

---

(1) ಜಲಾಶ್ರಾಸ್ರು (2) ಸ್ಯಾತ್ಕನೀನಿಕಾ (3) ಜತ್ರುಃ (4) ವಕ್ಷಣಃ

೫೨೫ – ಓಷ್ಠಸ್ಯಾಧಶ್ಚಿಬುಕಂ ಲಲಾಟಮಳಿಕಂ ಭುಜಾಗ್ರ(ಅ)ಮಂಸಂ ಚ ॥
ಕಕ್ಷಂ(1) ಚ ಬಾಹುಮೂಲಂ ಘಾಟಾ(2) ಮವಟುಂ ಕೃಕಾಟಿಕಾ
ಮಾಹುಃ ॥ ೩೭೧ ॥

೫೨೬–ಉರಸಿಜ ಕುವಕ್ಷೋರುಹ ಪಯೋಧ(ರಾಃ)ರಸ್ತನ ಸಮಾನನಾಮಾನಿ ॥
ಉಕ್ತಾ(ಃ) ಕುಚಮುಖ ಚೂಚಕ(3)ವೃಂತಾನಿ ಶಿಖಾ ಚ ತುಲ್ಯಾನಿ ॥ ೩೭೨ ॥

೫೨೭ – ಭುಜಮಧ್ಯ ಮುರೋ ವಕ್ಷೋ ಹೃದಯಸ್ಥಾನಂ ಚ ವತ್ಸಮಿಚ್ಛಂತಿ ॥
ಏಕಾರ್ಥಾಃ ಕಥ್ಯಂತೇ ದಶನದ್ವಿಜದಂತ ರದರದನಾಃ ॥ ೩೭೩ ॥

೫೨೮ — ಕ್ರೋಡಮಂಕಸ್ತಥೋತ್ಸಂಗಃ ಪ್ರಾಗ್ಭಾಗೋ ವಪುಷಃ ಸ್ಮೃತಃ ॥
ಪೃಷ್ಠಂ ಸ್ಯಾತ್ಪಶ್ಚಿಮೋ ಭಾಗಃ ಕಟೌ ಚ ಕಟಿ ಶೀರ್ಷಕೌ ॥ ೩೭೪ ॥

೫೨೯ — ಜೀವಸ್ಥಾನಂ ಭವೇನ್ಮರ್ಮ ಪಾದಾಗ್ರಂ ಪ್ರಪದಂ ಮತಂ ॥
ಸೀಮಂತಃ ಕಥ್ಯತೇ ಸ್ತ್ರೀಣಾಂ ಕೇಶಮಧ್ಯೇ ತು ಪದ್ಧತಿಃ ॥ ೩೭೫ ॥

೫೩೦— ಕೇಶಾಶ್ಶಿರಸಿಜ ಮೂರ್ಧ್ವಜ ಕಚ ಚಿಕುರ ಶಿರೋರುಹಾಸ್ಸ್ಮೃತಾ ವಾಲಾಃ ॥
ತದ್ಬಂಧವಿಶೇಷಾಃ ಸ್ಯುರ್ವೇಣೀ ಧಮ್ಮಿಲ್ಲ ಕುಂತಳಕಬರ್ಯಃ ॥ ೩೭೬ ॥

೫೩೧ — ಹಸ್ತಃ ಪಕ್ಷಃ ಪಾಶಃ ಕೇಶೇಷು ಬಹುತ್ವವಾಚಕಾಶ್ಯಬ್ದಾಃ ॥
(4)ಅಳಕಾಃ ಕುಟಿಳಾಃ ಕೇಶಾ ಭ್ರಮರಕಮುಕ್ತಂ(5)ಲಲಾಟಸ್ಥಂ ॥ ೩೭೭ ॥

ಟೀ ॥ **ತುಟಿಯ ಕೆಳಗು** ಚಿಬುಕಮೆಂಬುದು. ಲಲಾಟಂ, ಅಳಿಕಂ–ಈ ೨ **ನೊಸಲ್.**
ಭುಜಾಗ್ರಃ, ಅಂಸಂ–ಈ ೨ **ಮುಯ್ಪು.** ಕಕ್ಷಂ, ಬಾಹುಮೂಲಂ–ಈ ೨ **ಕಂಕುಳ್.**
ಘಾಟಾ, ಅವಟುಃ, ಕೃಕಾಟಿಕಾ – ಈ ೩ **ಹೆಡಕು** ॥ ೩೭೧ ॥
ಟೀ ॥ ಉರಸಿಜಃ, ಕುಚಃ, ವಕ್ಷೋರುಹಃ, ಪಯೋಧರಃ, ಸ್ತನಃ – ಈ ೫ **ಮೊಲೆ.**
ಕುಚಮುಖಂ, ಚೂಚಕಂ, ವೃಂತಂ, ಶಿಖಾ–ಈ ೪ **ಮೊಲೆಯ ಕೊ(ತೊ)ಟ್ಟು** ॥ ೩೭೨ ॥
ಟೀ ॥ ಭುಜಮಧ್ಯಂ, ಉರಃ, ವಕ್ಷಃ, ಹೃದಯಂ, ವತ್ಸಃ— ಈ ೫ **ಉರಂ.**
ದಶನಃ, ದ್ವಿಜಃ, ದಂತಃ, ರದಃ, ರದನಃ— ಈ ೫ **ಪಲ್ (ಹಲ್ಲು)** ॥ ೩೭೩ ॥
ಟೀ ॥ ಕ್ರೋಡಂ, ಅಂಕಃ, ಉತ್ಸಂಗಃ— ಈ ೩ **ಮುಂದಣಮೆಯ್.**
ಪೃಷ್ಠಂ, ಪಶ್ಚಿಮಭಾಗಃ–ಈ ೨ **ಬೆನ್.** ಕಟಿಃ, ಕಟಿಶೀರ್ಷಕಃ–ಈ ೨ **ತುದಿಕುಂಡೆ** ॥ ೩೭೪ ॥
ಟೀ ॥ ಜೀವಸ್ಥಾನಂ, ಮರ್ಮ–ಈ ೨ **ನೆಱಂ.** ಪಾದಾಗ್ರಂ, ಪ್ರಪದಂ–ಈ ೨ **ತುದಿಕಾಲ್.**
ಸೀಮಂತಮೆಂಬುದು **ಬಯ್ತಲೆ** ॥ ೩೭೫ ॥
ಟೀ ॥ ಕೇಶಃ, ಶಿರಸಿಜಃ, ಮೂರ್ಧಜಃ, ಕಚಃ, ಚಿಕುರಃ, ಶಿರೋರುಹಃ, ವಾಳಃ— ಈ ೭ **ತಲೆಯ ನವಿರ್.** ವೇಣೀ, ಧಮ್ಮಿಲ್ಲಃ, ಕುಂತಳಃ, ಕಬರೀ–ಈ ೪ **ಮುಡಿ** ॥ ೩೭೬ ॥
ಟೀ ॥ ಹಸ್ತಃ, ಪಕ್ಷಃ, ಪಾಶಃ – ಈ ೩ **ಹಿಂಮುಡಿ.**
ಕೊಂಕಿದ ತಲೆನವಿರ್ ಅಳಕವೆಂಬುದು.
ನೊಸಲನಲೆವ ಕುರುಳ್ ಭ್ರಮರಕವೆಂಬುದು ॥ ೩೭೭ ॥

---

(1) ಕಕ್ಷಾಂ (2) ಘಟಮದುಕ ವಾಟಿಕಾಮಾಹುಃ (3) ವೃತ್ತಾನಿ (4) ಅಲಕಂ (5) ತಲ್ಲಲಾಟಸ್ಥಂ

೫೩೨ — ಬಾಳಾನಾಂ ತು ಶಿಖಾ ಪ್ರೋಕ್ತಾ ಕಾಕಪಕ್ಷ(1) ಶ್ಶಿಖಂಡಿಕಾ ॥
ಪಳಿತಂ ಪಾಂಡುರಾಃ ಕೇಶಾಃ ವ್ರತಿನಾಂ ತು ಜಟಾ ಸಟಾ ॥ ೩೭೮ ॥

೫೩೩ — ಮಣಿಬಂಧಃ ಪಾಣಿಮೂಲಂ ಕ(ಪೋ)ಫಣಿಃ ಕೂರ್ಪರಃ ಸ್ಮೃತಃ ॥
ತಯೋರ್ಮಧ್ಯಂ ಪ್ರಕೋಷ್ಠಂ ಸ್ಯಾತ್ ಪ್ರಕಾಂಡಃ ಕೂರ್ಪರಾಂ
[ಸಯೋಃ ॥ ೩೭೯ ॥

೫೩೪ — ಚೇತಶ್ಚಿತ್ತಂ ಮನಸ್ಸ್ವಾಂತಂ ಹೃದಯಂ ಮಾನಸಂ ಸಮಂ ॥
ಏಕಾಯನಂ ತಥೈಕಾಗ್ರ ಮೇಕತಾನಂ ಚ ತದ್ಗತಂ ॥ ೩೮೦ ॥

೫೩೫ — ಆಧಿಸ್ತು ಮಾನಸೀ ಪಿಡಾ (2)ವಾಂಛಿತಾರ್ಥೋ ಮನೋರಥಃ ॥
ಖಮಕ್ಷಮಿಂದ್ರಿಯಂ (3)ಸ್ರೋತೋ ಹೃಷೀಕಂ ಕರಣಂ ಸ್ಮೃತಂ ॥ ೩೮೧ ॥

೫೩೬ — ಮಧ್ಯಾಂಗುಳೀ ಕೂರ್ಪರಯೋರ್ಮಧ್ಯಃ (4)ಪ್ರಾಮಾಣಿಕಸ್ತಥಾ ॥
ಬದ್ಧಮುಷ್ಟಿ(ಃ) ಕರೋ ರತ್ನಿರರತ್ನಿಃ ಸಕನಿಷ್ಠಿಕಃ ॥ ೩೮೨ ॥

೫೩೭ — ಸಂಪಿಂಡಿತಾಂಗುಳಿರ್ಮುಷ್ಟಿಃ ಪ್ರಸೃತಿಃ ಕುಂಚಿತಾಂಗುಲಿಃ ॥
ಪ್ರಸಾರಿತಾಂಗುಳಿಃ ಪಾಣಿಃ ಕಥ್ಯತೇ ಪ್ರತಳಸ್ತಳಃ ॥ ೩೮೩ ॥

ಟೀ ॥ ಶಿಖಾ, ಕಾಕಪಕ್ಷಃ, ಶಿಖಂಡಿಕಾ — ಈ ೩ **ಚೆಂಡಿಕೆ.**
ಪಳಿತಮೆಂಬುದು **ನರೆ.** ಜಟಾ, ಸಟಾ — ಈ ೨ **ಜಡೆ** ॥ ೩೭೮ ॥

ಟೀ ॥ ಮಣಿಬಂಧ ಎಂಬುದು **ಮಣಿಕಟ್ಟು.**
ಕಪೋಣಿಃ, ಕೂರ್ಪರಃ — ಈ ೨ **ಮೊ(ಟ)ಣಕೆಯ್.** ಪ್ರಕೋಷ್ಠಮೆಂಬುದು **ಮುಂಗೆಯ್.**
ಪ್ರಕಾಂಡಮೆಂಬುದು **ಮೊ(ಟ)ಣಕೆಯ್ಯಿಂದ ಮೇಗಣ ಭಾಗೆ** ॥ ೩೭೯ ॥

ಟೀ ॥ ಚೇತಃ, ಚಿತ್ತಂ, ಮನಃ, ಸ್ವಾಂತಂ, ಹೃದಯಂ, ಮಾನಸಂ — ಈ ೬ **ಮನಂ.**
ಏಕಾಯನಂ, ಏಕಾಗ್ರಂ, ಏಕತಾನಂ, ತದ್ಗತಂ — ಈ ೪ **ಒಂದೆ ಮನಂ** ॥ ೩೮೦ ॥

ಟೀ ॥ ಆಧಿಯೆಂಬುದು **ಮನೋದುಃಖಂ.** ಮನೋರಥಮೆಂಬುದು **ಬಯಕೆ.**
ಖಂ, ಅಕ್ಷಂ, ಇಂದ್ರಿಯಂ, ಸ್ರೋತಃ, ಹೃಷೀಕಂ, ಕರಣಂ — ಈ ೬ **ಇಂದ್ರಿಯಂಗಳ್** ॥ ೩೮೧ ॥

ಟೀ ॥ **ಮೊಟ(ನಂ)** ಪ್ರಮಾಣಿಕಮೆಂಬುದು.
ಹಿಡಿಕೆಯ್ಸಿದ ಮೊಟನಂ ರತ್ನಿಯೆಂಬುದು.
ಕಿಱುಕುಣಿಕೆಯಿಂದಳೆದ ಮೊಟನಂ ಅರತ್ನಿಯೆಂಬುದು ॥ ೩೮೨ ॥

ಟೀ ॥ **ಪಿ(ಹಿ)ಡಿಕೆಯ್ಸಿದ ಕೆಯ್ಯಕುಡಿತೆಯಂ** ಮುಷ್ಟಿಯೆಂಬುದು.
ಅಂಗುಳಿಮಡಿದ ಕುಡಿತೆಯಂ ಪ್ರಸೃತಿಯೆಂಬುದು.
ನೀಡಿದ ಬೆರಳತಳಂ ಪಾಣಿಯೆಂಬುದು.
ಬೆರಲುಂ ತಳಮುಂ ಬೆರಸಿದೊಡೆ ಪ್ರತಳಮೆಂಬುದು. ಅದನೆ **ತಳಮುಮೆಂಬುದು** ॥ ೩೮೩ ॥

---

(1) ಶಿಖಂಡಕಃ (2) ವಾಂಛಿತೋಽರ್ಥೋ (3) ಶ್ರೋತ್ರಃ (4) ಪ್ರಾಮಣಿಕಃ ಕರಃ, ಪ್ರಮಾಣಿಕಃ

೫೩೮ — ಪ್ರಾದೇ(1)ಶಸ್ತೂತ್ತ್ರದೇಶಿನ್ಯಾ ತಾಲೋ ಮಧ್ಯಮಯಾ ಭವೇತ್ ॥
ಗೋಕರ್ಣೋಽನಾಮಯಾ ಪ್ರೋಕ್ತಃವಿತಸ್ತಿಃ ಸ್ಯಾತ್ಕನಿಷ್ಠಯಾ ॥ ೩೮೪ ॥

೫೩೯ — ಆಕಲ್ಪೋ ಮಂಡನಂ ವೇಷಃ ಪ್ರತಿಕರ್ಮ ಪ್ರಸಾಧನಂ ॥
ಭೂಷಣಂ ಸ್ಯಾದಳಂಕಾರೋ ನೇಪಥ್ಯಾಭರಣೇ ತಥಾ ॥ ೩೮೫ ॥

೫೪೦ — ಸಮಾಲ[ಂ]ಭನಮಿಚ್ಛಂತಿ ಚರ್ಚಾಂ (2)ಮಾರ್ಷ್ಟಿಂ ಚ ಸೂರಯಃ ॥
ಸ್ಥಾಸಕಂ ಹಸ್ತಬಿಂಬಂ ಸ್ಯಾತ್ಪರಿಷ್ಕಾರಶ್ಚ ಭೂಷಣಂ ॥ ೩೮೬ ॥

೫೪೧ — ತಿಳಕಂ ತಮಾಳಪತ್ರಂ ಚಿತ್ರಕಮುಕ್ತಂ ವಿಶೇಷಕ(ಃ)ಂ ಪುಂಡ್ರಂ ॥
ರಚಿತಾ ಲಲಾಟಪಟ್ಟೇ ಲಲಾಟಿಕಾ ಕಥ್ಯತೇ ಲೇ(ರೇ)ಖಾ ॥ ೩೮೭ ॥

೫೪೨ — ಭುಜ ಶಿಖರಸ್ತನಮಂಡಳ ಕಪೋಳ ಕಂಠೇಷು ವಿರಚಿತಾ ಕುಶಲೈಃ ॥
ಅನುಲೇಪನೇನ ಲೇಖಾ ನಿಗದ್ಯತೇ ಪತ್ರವಲ್ಲೀತಿ ॥ ॥ ೩೮೮ ॥

೫೪೩ — ಕುಂಕುಮಂ ಘುಸೃಣಂ ವರ್ಣಂ ಪ್ರೋಕ್ತಂ ಲೋಹಿತಚಂದನಂ ॥
ಕಾಶ್ಮೀರಜಂ ಚ ವಿದ್ವದ್ಭಿಃ ಕಾಲೇಯಂ (3)ಜಾಪಕಂ ಸ್ಮೃತಂ ॥ ೩೮೯ ॥

೫೪೪ — ಚಂದನಂ ಸ್ಯಾನ್ಮಳಯಜಂ ಶ್ರೀಖಂ(4) ಡೋ(ಡಂ)ರೋಹಿಣೀದ್ರುಮಃ ॥
ಮೃಗನಾಭಿರ್ಮೃಗಮದಃ ಪ್ರೋಕ್ತಾ ಕಸ್ತೂರಿಕಾ ಬುಧೈಃ ॥ ೩೯೦ ॥

ಟೀ ॥ ಪ್ರಾದೇಶಮೆಂಬುದು (5)**ಒಚ್ಚುಟು.** ತಾಳಮೆಂಬುದು **ಗೇಣ್.**
ದರ್ಭೆಯ ಬೆರಲಗೇಣ್ ಗೋಕರ್ಣಮೆಂಬುದು.
ಕಿಱುಕುಣಿಕೆಯ ಗೇಣ್ ವಿತಸ್ತಿಯೆಂಬುದು ॥ ೩೮೪ ॥

ಟೀ ॥ ಆಕಲ್ಪಃ, ಮಂಡನಂ, ವೇಷಃ, ಪ್ರತಿಕರ್ಮ, ಪ್ರಸಾಧನಂ — ಈ ೫ **ಶೃಂಗಾರಂ ಗೆಯ್ವುದು.** ಭೂಷಣಃ, ಅಳಂಕಾರಃ, ನೇಪಥ್ಯಂ, ಆಭರಣಂ — ಈ ೪ **ತುಡುಗೆ** ॥ ೩೮೫ ॥

ಟೀ ॥ ಸಮಾಲಂಭನಂ, ಚರ್ಚಾ, ಮಾರ್ಷ್ಟಿಃ — ಈ ೩ **ಚರ್ಚೆ.**
ಸ್ಥಾಸಕಂ, ಹಸ್ತಬಿಂಬಂ — ಈ ೨ **ಚಟ್ಟಿಱಿವುದು.**
ಪರಿಷ್ಕಾರಃ, ಭೂಷಣಂ — ಈ ೨ **ಅಲಂಕಾರಂ** ॥ ೩೮೬ ॥

ಟೀ ॥ ತಿಳಕಂ, ತಮಾಳಪತ್ರಂ, ಚಿತ್ರಕಂ, ವಿಶೇಷಕಂ, ಪುಂಡ್ರಂ, ಲಾಲಾಟಿಕಾ — ಈ ೬ **ಬೊಟ್ಟು** ॥ ೩೮೭ ॥

ಟೀ ॥ **ತೋಳ್ ಮೊಲೆ(ಕೆನ್ನೆ) ಕೊರಳ್ಗಳಲ್ಲಿ ಅನುಲೇಪನದಿಂದಂ ಬರೆದ ರೇಖೆ** ಪತ್ರವಲ್ಲೀ ಎಂಬುದು ॥ ೩೮೮ ॥

ಟೀ ॥ ಕುಂಕುಮಂ, ಘುಸೃಣಂ, ವರ್ಣಂ, ಲೋಹಿತಚಂದನಂ, ಕಾಶ್ಮೀರಜಂ, ಕಾಳೇಯಂ, ಜಾಪಕಂ — ಈ ೭ **ಕುಂಕುಮಂ** ॥ ೩೮೯ ॥

ಟೀ ॥ ಚಂದನಂ, ಮಳಯಜಂ, ಶ್ರೀಖಂಡ(ಃ)ಂ, ರೋಹಿಣೀದ್ರುಮಃ — ಈ ೪ **ಸಿರಿಗಂಧಂ.**
ಮೃಗನಾಭಿಃ, ಮೃಗಮದಃ, ಕಸ್ತೂರಿಕಾ — ಈ ೩ **ಕಸ್ತೂರಿ** ॥ ೩೯೦ ॥

---

(1) ಶಸ್ಸ್ಯಾತ್ (2) ಮಾರ್ಷ್ಟೀ (3) ಜಾಗುಡಂ (4) ಡಂ ರೋಹಣ ದ್ರುಮಃ (5) ಒಚ್ಪೋಟು (ಎಂದಿರಬಹುದು.)

೫೪೫— ಕರ್ಪೂರೋ ಘನಸಾರಸ್ಸ್ಯಾತ್ ಕಾಕತುಂಡೋಽಗುರುಃ ಸ್ಮೃತಃ ॥
ತಾಂಬೂಲಂ ಕ್ರಮುಕಂ ಪ್ರೋಕ್ತಮಂಗರಾಗೋ ವಿಲೇಪನಂ ॥ ೩೯೧ ॥
೫೪೬— ಉಪಸಂವ್ಯಾನಂ ಪರಿಧಾನಮಂತರೀಯಂ ಚ ನಿವಸನಂ ತುಲ್ಯಂ ॥
ಪ್ರಾವರಣಂ ಸಂವ್ಯಾನಂ ಪ್ರಚ್ಛಾದನ ಮುತ್ತರೀಯಂ ಚ ॥ ೩೯೨ ॥
೫೪೭— ಅರ್ಧೋ(1)ರುಕಂ ವರಸ್ತ್ರೀಣಾಂ ವಾಸಶ್ಚಾಂ(2)ಡಾತಕಂ ಸ್ಮೃತಂ ॥
ಪರಿಧಾನಾಂಶುಕಗ್ರಂಥಿಃ ಪ್ರೋಕ್ತಾ ನೀವೀ ತಥೋಚ್ಚ್ರಯಃ ॥ ೩೯೩ ॥
೫೪೮— ಚೇಲಂ ಚೀರಂ ವಾಸಃ ಕರ್ಪಟಮಾಚ್ಛಾದನಂ(3) ಚ ತುಲ್ಯಾರ್ಥಾಃ ॥
ಅಂಬರಮಂಶುಕಮುಕ್ತಂ ವಸ್ತ್ರಂ ಸಿಚಯಃ ಪಟಃ ಪ್ರೋಕ್ತಃ(4) ॥ ೩೯೪ ॥
೫೪೯— ಚತುರ್ವಿಧಂ ತು ವಿಜ್ಞೇಯಂ ತ್ವಕ್ಸೂತ್ರ ಕ್ರಿಮಿರೋಮಜಂ ॥
(5) ಪತ್ರೌರ್ಣಂ ಧೌತಕೌಶೇಯಂ ದುಕೂಲಂ ಕ್ಷೌಮ(6)ಮಿಷ್ಯತೇ ॥ ೩೯೫ ॥
೫೫೦— ಕಾರ್ಪಾಸಂ ಬಾದರಂ ಪ್ರೋಕ್ತಂ ವಸ್ತ್ರಸ್ಯಾಂತೋ ಮತೋಽಂಚಳಃ ॥
ಅಹತಂ ಸ್ಯಾನ್ನವಂ ವಾಸೋ ಜೀರ್ಣ(7) ವಾಸಃ ಪಟಚ್ಚರಃ ॥ ೩೯೬ ॥
೫೫೧ — ಧೌತಮುದ್ಗಮನೀಯಂ ಚ ವಸ್ತಿರ್ವರ್ತಿರ್ದಶಾಸ್ಸಿ(8) ಚಃ ॥
ಏಕಾರ್ಥಾ ಆವಿಕೌರಭ್ರ ರಲ್ಲ(9) ಕೌರ್ಣಾಯು ಕಂಬಳಾಃ ॥ ೩೯೭ ॥

ಟೀ ॥ ಕರ್ಪೂರಃ, ಘನಸಾರಃ— ಈ ೨ **ಕರ್ಪೂರಂ.**
ಕಾಕತುಂಡಃ, ಅಗುರುಃ— ಈ ೨ **ಅಗುರು.** ತಾಂಬೂಲಂ, ಕ್ರಮುಕಂ— ಈ ೨ **ತಂಬುಲಂ.**
ಅಂಗರಾಗಃ, ಅನುಲೇಪನಂ— ಈ ೨ **ಅನುಲೇಪನಂ** ॥ ೩೯೧ ॥

ಟೀ ॥ ಉಪಸಂವ್ಯಾನಂ, ಪರಿಧಾನಂ, ಅಂತರೀಯಂ, ನಿವಸನಂ— ಈ ೪ **ಉಟ್ಟುದು.**
ಪ್ರಾವರಣಂ, ಸಂವ್ಯಾನಂ, ಪ್ರಚ್ಛಾದನಂ, ಉತ್ತರೀಯಂ— ಈ ೪ **ಮೇಲುದು** ॥ ೩೯೨ ॥

ಟೀ ॥ ಚಂಡಾತಕಮೆಂಬುದು **ಚಲ್ಲಣಂ.** ನೀವೀ, ಉಚ್ಚ್ರಯಃ— ಈ ೨ **ಕಣಯಂ** ॥ ೩೯೩ ॥

ಟೀ ॥ ಚೇಲಂ, ಚೀರಂ, ವಾಸಃ, ಕರ್ಪಟಂ, ಆಚ್ಛಾದನಂ, ಅಂಬರಂ, ಅಂಶುಕಂ, ವಸ್ತ್ರಂ, ಸಿಚಯಃ, ಪಟಃ— ಈ ೧೦ **ಸೀರೆ** ॥ ೩೯೪ ॥

ಟೀ ॥ **ನಾರು, ನೂಲು, ಕ್ರಿಮಿಜ ರೋಮ(ಜಂ)**ಗಳೆಂಬ **ಪುಟ್ಟುವುವು ನಾಲ್ಕು ತೆಱನಕ್ಕುಂ.** ಪತ್ರಂ, ಔರ್ಣಂ, (ಧೌತ) ಕೌಶೇಯಂ— ಈ ೩ **ಪೊತ್ತಿಯಂ.**
ದುಕೂಲಂ, ಕ್ಷೌಮಂ— ಈ ೨ **ದು(ಗು)ಕೂಲಂ** ॥ ೩೯೫ ॥

ಟೀ ॥ ಕಾರ್ಪಾಸಂ, ಬಾದರಂ— ಈ ೨ **ಹತ್ತಿಯಿಂದಾದ ಸೀರೆ.**
ಅಂಚಳಮೆಂಬುದು **ಸೀರೆಯ ಸೆಱಗು.** ಅಹತಮೆಂಬುದು **ಹೊಸ ಸೀರೆ.**
ಪಟಚ್ಚರಮೆಂಬುದು **ಹಳೆಯ ಸೀರೆ** ॥ ೩೯೬ ॥

ಟೀ ॥ ಧೌತಂ, ಉದ್ಗಮನೀಯಂ— ಈ ೨ **ಧೌತಿ.**
ವರ್ತಿಃ, ವಸ್ತಿಃ, ದಶಾ, ಸಿಚಃ— ಈ ೪ **ಸೀರೆಯ ಕರಿ.**
ಆವಿಕಃ, ಔರಭ್ರಃ, ರಲ್ಲಕಃ, ಊರ್ಣಾಯುಃ, ಕಂಬಳಃ— ಈ ೫ **ಕಂಬಳಿ** ॥ ೩೯೭ ॥

---

(1) ಅದ್ಧೋದಕಂ (2) ಶ್ಚಂಡಾತಕಂ (3) ನಿವಸನಂಚ (4) ಪ್ರೋತಃ ಪೋಟಃ (5) ಪತ್ರೋರ್ಣ (6) ಮುಚ್ಯತೇ (7) ರ್ಣಮು(ಕ್ತಂ)ಕ್ತಃ (8) ಶಾಸ್ಸಿವಃ (9) ಕೋರ್ಣಾಯು

೫೫೨— ಕಂಚುಕೋ ವಾರವಾಣಸ್ಸ್ಯಾತ್ ಕೂರ್ಪಾಸಶ್ಚ ನಿಚೋಳಕಃ ॥
(1) ಸ್ರಜ್ಮಾಲಾ ಮಾಲ್ಯಮಾಖ್ಯಾತಂ ಕೇಶಮಧ್ಯೇ ತು ಗರ್ಭಕಃ ॥ ೩೯೮ ॥
೫೫೩— ಪ್ರಭ್ರಷ್ಟಕಂ ಶಿಖಾಳಂಬಿ ಪುರೋನ್ಯಸ್ತಂ ಲಲಾಮಕಂ ॥
ತಿರ್ಯಗ್ವಕ್ಷಸಿ ನಿ(ವಿ)ಕ್ಷಿಪ್ತಂ ವೈಕಕ್ಷಕಮುದಾಹೃತಂ ॥ ೩೯೯ ॥
೫೫೪— ಗ್ರೀವಾಯಾಂ ಲಂಬಿತಂ ಪ್ರಾಜ್ಞೈಃ ಪ್ರಾಲಂಬಕಮಿತಿ ಸ್ಮೃತಂ ।
ಆಪೀಡಃ ಶೇಖರೋತ್ತಂಸಾ ವತಂಸಾಃ ಶಿರಸಿ ಸ್ರಜಃ ॥
(ಕರ್ಣಪೂರೇಽಪಿ ದೃಶ್ಯೇತೇ ತಥೋತ್ತಂಸಾವತಂಸಕೌ) ॥ ೪೦೦ ॥
೫೫೫— ಜತು ಯಾವಕಲಾಕ್ಷಾ(2) ಸ್ತಜ್ಜಮಲಕ್ತಂ ಸಿಕ್ಥಕಂ ಮಧೂಚ್ಛಿಷ್ಟಂ ॥
ಕಜ್ಜಳಮಂಜನಮಭಿಹಿತ ಮಾದರ್ಶೋ ದರ್ಪ(ಣೋ)ಣಂ ಮುಕುರಃ ॥ ೪೦೧ ॥
೫೫೬— (3) ತಾಳಕಸ್ತಾಳ ಪತ್ರಂ(ಚ)ಸ್ಯಾತ್ ಕುಂಡಳಂ ಕರ್ಣವೇಷ್ಟನಂ ॥
ಕರ್ಣಾಲಂಕರಣಂ ಸರ್ವಂ ಕರ್ಣಿಕೇತ್ಯಭಿಧೀಯತೇ ॥ ೪೦೨ ॥
೫೫೭— ಕೇಯೂರಮಂಗದಂ ಪ್ರೋಕ್ತಂ ಬಾಹುಮೂಳ ವಿಭೂಷಣಂ ॥
ಆವಾಪಃ ಪಾರಿಹಾರ್ಯಸ್ಸ್ಯಾತ್ ಕಟಕೋ ವಳಯಂ ತಥಾ ॥ ೪೦೩ ॥

ಟೀ ॥ ಕಂಚುಕಃ, ವಾರವಾಣಃ, ಕೂರ್ಪಾಸಃ, ನಿಚೋಳಕಃ— ಈ ೪ **ಕುಪ್ಪಸಂ.**
ಸ್ರಗ್, ಮಾಲಾ, ಮಾಲ್ಯಂ— ಈ ೩ **ಹೂವಿನ ಮಾಲೆ.**
ತುಱುಂಬಿದ ಹೂ ಗರ್ಭಕಮೆಂಬುದು ॥ ೩೯೮ ॥

ಟೀ ॥ **ಚಂಡಿಕೆಯಲ್ಲಿ ಮುಡಿದ ಹೂ** ಪ್ರಭ್ರಷ್ಟಕಮೆಂಬುದು.
ಮುಂದಲೆಯ ಹೂ ಲಲಾಮಕಮೆಂಬುದು.
ಜನ್ನವಿರದಂತಿಕ್ಕಿದ ಹೂವಿನ ಮಾಲೆ ವೈಕಕ್ಷಕಮೆಂಬುದು ॥ ೩೯೯ ॥

ಟೀ ॥ **ಕೊರಲೊಳಿಕ್ಕಿದ ಹೂವಿನ ಮಾಲೆ** ಪ್ರಾಲಂಬಕಮೆಂಬುದು.
ಆಪೀಡಃ, ಶೇಖರಃ— ಈ ೨ **ಬಾಸಿಗಂ.** (4)ಉತ್ತಂಸಃ, ಅವತಂಸಃ— ಈ ೨ **ಕರ್ಣಪೂರಂ** ॥ ೪೦೦ ॥

ಟೀ ॥ ಜತು, ಯಾವಕಃ, ಲಾಕ್ಷಾ— ಈ ೩ **ಅರಗು.** ಅಲಕ್ತಮೆಂಬುದು **ಅಲ(ತಿಗೆ)ತೆ.**
ಸಿಕ್ಥತಮೆಂಬುದು **ಮಯಣಂ.** ಕಜ್ಜಳಂ, ಅಂಜನಂ, ಅಭಿಹಿತಂ?— ಈ ೩ **ಕಾಡಿಗೆ.**
ಆದರ್ಶಃ, ದರ್ಪಣಃ, ಮುಕುರಃ— ಈ ೩ **ಕನ್ನಡಿ** ॥ ೪೦೧ ॥

ಟೀ ॥ ತಾಳಕಃ, ತಾಳಪತ್ರಂ (ಕರ್ಣಪತ್ರಂ)— ಈ ೨ **ಕಿವಿಯೋಲೆ.**
ಕುಂಡಳಂ, ಕರ್ಣವೇಷ್ಟನಂ— ಈ ೨ **ಕುಂಡಲಂ.**
ಕರ್ಣಾಭರಣಮೆಲ್ಲಮಂ ಕರ್ಣಿಕಾಯೆಂಬುದು ॥ ೪೦೨ ॥

ಟೀ ॥ ಕೇಯೂರಂ, ಅಂಗದಂ— ಈ ೨ **ತೋಳ್ಕಟ್ಟು.**
ಆವಾಪಃ, ಪಾರಿಹಾರ್ಯಃ, ಕಟಕಃ, ವಳಯಃ— ಈ ೪ **ಕಂಕಣಂ** ॥ ೪೦೩ ॥

---

(1) ಸ್ರಗ್ಮಾಲಾ (2) ಕ್ಷಾಲಕ್ತಕಾಸ್ಸಮಾಃ (3) ತಾಡಕಂ ತಾಡ, ತಾಟಂಕಂ ತಾಡ (4) ಆಪೀಡಃ, ಶೇಖರಃ, ಉತ್ತಂಸಃ, ಅವತಂಸಃ— ಈ ೪ ಬಾಸಿಗಂ. ಉತ್ತಂಸಃ, ಅವತಂಸಃ, ಕರ್ಣಪೂರಂ ಎಂದಿರಬೇಕು.

೫೫೮—ಕಂಕಣಂ ಹಸ್ತಸೂತ್ರಂ ಚ ವಿದುಃ ಪ್ರತಿಸರಂ ಬುಧಾಃ ॥
ಗ್ರೀವಾಳಂಕರಣಂ ಸರ್ವಂ [1]ಗ್ರೈವೇಯಕ ಮಿತೀಷ್ಯತೇ ॥ ೪೦೪ ॥
೫೫೯—ಅಂಗುಲ್ಯಾಭರಣಂ ಪ್ರೋಕ್ತಮಂಗುಲೀಯಕ ಮೂರ್ಮಿಕಾ ॥
ಕಥ್ಯತೇಽಂಗುಲಿಮುದ್ರಾ ಚ ಭವೇದ್ಯಾ ಲಿಖಿತಾಕ್ಷರಾ ॥ ೪೦೫ ॥
೫೬೦—ಕಳಾಪಃ ಸಪ್ತಕೀ ಕಾಂಚೀ ಮೇಖಳಾ ರ(ಶ)ಸನಾ ತಥಾ ॥
ಕಟಿಸೂತ್ರಂ ಸಾರಸನಂ ಕಿಂಕಿಣೀ ಕ್ಷುದ್ರ ಘಂಟಿಕಾ ॥ ೪೦೬ ॥
೫೬೧—ಸಿಂಜಿನೀ ಪಾಕಡಟಕಃ ತುಲಾಕೋಟಿಸ್ತು ನೂಪುರಂ ॥
ಮಂಜೀರಂ ಹಂಸಕಂ ಸ್ತ್ರೀಣಾಂ ಚರಣಾಭರಣಂ ಸ್ಮೃತಂ ॥ ೪೦೭ ॥
೫೬೨—ದೇವಚ್ಛಂದಃ ಶತಯಷ್ಟಿಃ ಅ(ರ್ಧಂ)ರ್ಧೋ ಮಾಣವಕಃ ಸ್ಮೃತಂ(ಃ) ॥
ಹಾರೋ ಗುಚ್ಛಾರ್ಧಗುಚ್ಛೌ ಚ ಗೋಪುಚ್ಛಶ್ಚ ಭವೇತ್ಕ್ರಮಾತ್ ॥ ೪೦೮ ॥
೫೬೩—ಏಕಾವಲ್ಯೇಕಯಷ್ಟಿಃ ಸ್ಯಾತ್ ಕಥ್ಯತೇ ಸಾಚ ಕಂಠಿಕಾ ॥
ಪ್ರೋಕ್ತಾ ನಕ್ಷತ್ರಮಾಲಾ ಚ ಸಪ್ತವಿಂಶತಿಮೌಕ್ತಿಕಾ ॥ ೪೦೯ ॥
೫೬೪—ಹಾರಮಧ್ಯೇ ಸ್ಥಿತಂ ರತ್ನಂ ನಾಯಕಂ ತರಳಂ ವಿದುಃ ॥
ಚೂಡಾಮಣಿಂ ತು ವಿದ್ವಾಂಸೋ ವದಂತಿ ಶಿರಸಿ ಸ್ಥಿತಂ ॥ ೪೧೦ ॥

ಟೀ ॥ ಕಂಕಣಂ, ಹಸ್ತಸೂತ್ರಂ, ಪ್ರತಿಸರಂ—ಈ ೩ **ನೂಲ ಕಂಕಣಂ.**
ಕೊರಳಲ್ಲಿಕ್ಕುವ ತುಡುಗೆಯೆಲ್ಲಂ ಗ್ರೈವೇಯಕಮೆಂಬುದು ॥ ೪೦೪ ॥
ಟೀ ॥ ಅಂಗುಲೀಯಕಂ, ಊರ್ಮಿಕಾ—ಈ ೨ **ಉಂಗುರಂ.**
ಮುದ್ರಾಯೆಂಬುದು **ಅಕ್ಕರಂ ಬೆರಸಿರ್ದುಂಗುರಂ** ॥ ೪೦೫ ॥
ಟೀ ॥ ಕಳಾಪಃ, ಸಪ್ತಕೀ, ಕಾಂಚೀ, ಮೇಖಳಾ, ರಶನಾ, ಕಟಿಸೂತ್ರಂ, ಸಾರಸನಂ—ಈ ೭ **ಉಡೆನೂಲ್.** ಕಿಂಕಿಣಿಯೆಂಬುದು **ಕಿಱುಘಂಟೆ** ॥ ೪೦೬ ॥
ಟೀ ॥ ಸಿಂಜಿನೀ, ಪಾದಕಟಕಃ—ಈ ೨ **ಕಾಲಕಡಗಂ.**
ತುಲಾಕೋಟಿಃ, ನೂಪುರಃ—ಈ ೨ **ಗೆಜ್ಜೆ.** ಮಂಜೀರಂ, ಹಂಸಕಂ—ಈ ೨ **ಅಂದುಗೆ** ॥ ೪೦೭ ॥
ಟೀ ॥ **ನೂಱುಸರದ ಮುತ್ತು** ದೇವಚ್ಛಂದ ಎಂಬುದು.
ಅಯ್ವತ್ತುಸರದ ಮುತ್ತು ಮಾಣವಕ ಎಂಬುದು.
ಹಾರಃ, ಗುಚ್ಛಃ, ಅರ್ಧಗುಚ್ಛಃ, ಗೋಪುಚ್ಛಃ—**ಎಂಬಿವು ಕ್ರಮದಿಂದಂ ಕುಂದುತ್ತಾ ಬರಲಪ್ಪುವು** ॥ ೪೦೮ ॥
ಟೀ ॥ **ಎಕ್ಕಸರಮುಂ** ಏಕಾವಳಿಯೆಂಬುದು. **ಅದನೆ** ಕಂಠಿಕೆಯೆಂಬುದು.
ಇಪ್ಪತ್ತೇೞು ಮುತ್ತಿನ ಸರಮುಂ ನಕ್ಷತ್ರಮಾಲೆಯೆಂಬುದು ॥ ೪೦೯ ॥
ಟೀ ॥ **ಮುತ್ತಿನಸರದ ನಡುವಣ ಮಾಣಿಕಮುಂ** ತರಳಮೆಂಬುದು.
[**ಅದನೆ** ನಾಯಕಮೆಂಬುದು
ತಲೆಯೊಳಿರ್ದ ಮಾಣಿಕಮುಂ ಚೂಡಾಮಣಿಯೆಂಬುದು ॥ ೪೧೦ ॥

---

(1) ಗ್ರೈವೇಯಮಿತಿ ಕಥ್ಯತೇ.

೫೬೫—ಆಹುಃ ಕಿರೀಟಮುಷ್ಣೀಷಂ ಕೋಟೀರಂ ಮುಕುಟಂ ಸಮಂ ॥
(1) ದಾ(ಧಾ)ರಾ ಶೋಭಾ ವಿಭೂಷಾ ಸ್ಯಾದಭಿ(2) ಖ್ಯಾ ಸುಷಮಾ ಸಮಾ ॥೪೧೧॥
೫೬೬—ನಿಭಾಳನಂ ನಿಶಮನಂ ನಿ(3) ಧ್ಯಾನಮವಲೋಕನಂ ॥
ಲಕ್ಷಣಂ(4) ದರ್ಶನಂ ದೃಷ್ಟಿಃ(5) ದ್ಯೋತನಂ ಚ ಸಮಂ ಮತಂ ॥ ೪೧೨ ॥
೫೬೭—ಕಟಾಕ್ಷೋ ದೃಷ್ಟಿವಿಕ್ಷೇಪಃ ಈಷಚ್ಚ ಹಸಿತಂ ಸ್ಮಿತಂ ॥
ಹ್ರೀ ಲಜ್ಜಾಪತ್ರಪಾ ವ್ರೀಡಾ ತ್ರಪಾ ಮಂದಾಕ್ಷ ಮುಚ್ಯತೇ ॥ ೪೧೩ ॥
೫೬೮ – ಆಲಿಂಗನ ಮುಪಗೂಹನಮಾಹುಃ ಪರಿರಂಭಣಂ ಪರಿಷ್ವಂಗಂ ॥
ಆಶ್ಲೇಷಮಂಕಪಾಲೀಂ ಕ್ರೋಡೀಕರಣಂ ಚ ತುಲ್ಯಾರ್ಥಂ ॥ ೪೧೪ ॥
೫೬೯ – ಸಂವೇಶನಂ ನಿಧುವನಂ ಸಂಪ್ರಯೋಗೋ ರಹೋರತಿಃ ॥
ಸುರತಂ ಮೋಹನಂ ಪ್ರೋಕ್ತಂ ಮಣಿತಂ ರತಕೂಜಿತಂ ॥ ೪೧೫ ॥
೫೭೦—ಆರ್ಯಾ ಭೂಮಿಸ್ಪೃಶೋ ವೈಶ್ಯಾ ಊರವ್ಯಾಶ್ಚ ವಿಶ ಸ್ಸ್ಮೃತಾಃ ॥
ಜೀವನಂ ವೃತ್ತಿರಾಜೀವೋ ವಾರ್ತಾ ಚೇತಿ ನಿಗದ್ಯತೇ ॥ ೪೧೬ ॥
೫೭೧ – ಪಣ್ಯಾಜೀವಾ ವಣಿಜಃ ಪ್ರಾಪಣಿಕಾ ನೈಗಮಾಶ್ಚ ವೈದೇಹಾಃ ॥
ದ್ವೈಗುಣಿಕೋ ವಾರ್ಧುಷಿಕೋ ವೃದ್ಧ್ಯಾಜೀವಃ ಕುಸೀದಕಃ
[ಪ್ರೋಕ್ತಃ ॥ ೪೧೮ ॥

ಟೀ ॥ ಕಿರೀಟಂ, ಉಷ್ಣೀಷಂ, ಕೋಟೀರಂ, ಮುಕುಟಂ—ಈ ೪ **ಮುಕುಟಂ.**
ದಾ(ಧಾ)ರಾ, ಶೋಭಾ, ವಿಭೂಷಾ, ಅಭಿ(ಕ್ಷಾ)ಖ್ಯಾ, ಸುಷಮಾ—ಈ ೫ **ಶೋಭೆ** ॥೪೧೧॥
ಟೀ ॥ ನಿಭಾಳನಂ, ನಿಶಮನಂ, ನಿಧ್ಯಾನಂ, ಅವಲೋಕನಂ, ಲಕ್ಷಣಂ, ದರ್ಶನಂ, ದೃಷ್ಟಿಃ, ದ್ಯೋತನಂ—ಈ ೮ **ನೋಟಂ** ॥ ೪೧೨ ॥
ಟೀ ॥ ಕಟಾಕ್ಷಮೆಂಬುದು **ಕಡೆಗಣ್ಣಿನ ನೋಟಂ.** ಸ್ಮಿತಮೆಂಬುದು **ಮುಗುಳ್ನಗೆ.**
ಹ್ರೀ, ಲಜ್ಜಾ, ಅಪತ್ರಪಾ, ವ್ರೀಡಾ, ತ್ರಪಾ, ಮಂದಾಕ್ಷಂ—ಈ ೬ **ಲಜ್ಜೆ** ॥ ೪೧೩ ॥
ಟೀ ॥ ಆಲಿಂಗನಂ, ಉಪಗೂಹನಂ, ಪರಿರಂಭಣಂ, ಪರಿಷ್ವಂಗಃ, ಆಶ್ಲೇಷಃ, ಅಂಕಪಾಳೀ, ಕ್ರೋಡೀಕರಣಂ—ಈ ೭ **ಅಪ್ಪಿಕೊಳುಹ** ॥ ೪೧೪ ॥
ಟೀ ॥ ಸಂವೇಶನಂ, ನಿಧುವನಂ, ಸಂಪ್ರಯೋಗಃ, ರಹಃ, ರತಿಃ, ಸುರತಂ, ಮೋಹನಂ—ಈ ೭ **ಸುರತಂ.** ಮಣಿತವೆಂಬುದು **ಗಳಧ್ವನಿ** ॥ ೪೧೫ ॥
ಟೀ ॥ ಅರ್ಯಾಃ, ಭೂಮಿಸ್ಪೃಶಃ, ವೈಶ್ಯಾಃ, ಊರವ್ಯಾಃ, ವಿಶಃ--ಈ ೫ **ವೈಶ್ಯಂ.**
ಜೀವನಂ, ವೃತ್ತಿಃ, ಆಜೀವಃ, ವಾರ್ತಾ—ಈ ೪ **ಬಾೞ್ಕೆ** ॥ ೪೧೬ ॥
ಟೀ ॥ ಪಣ್ಯಾಜೀವಃ, ವಣಿಕ್, ಪ್ರಾಪಣಿಕಃ, ನೈಗಮಃ, ವೈದೇಹಃ—ಈ ೭ **ಹರದಂ.**
ದ್ವೈಗುಣಿಕಃ, ವಾರ್ಧುಷಿಕಃ, ವೃದ್ಧ್ಯಾಜೀವಃ, ಕುಸೀದಕಃ—ಈ ೪ **ಬಡ್ಡಿಗುಡುವವಂ** ॥ ೪೧೮ ॥

---

(1) ರಾಧಾ (2) ದಭಿಕ್ಷಾಮುಖಮಾ (3) ನಿಶಾಮನಂ ನಿಧಾನ (4) ಈಕ್ಷಣಂ (5) ಘೋ,

೫೭೨—ಅಪಮಿತ್ಯಕ ಮುದ್ಧಾರ ಋಣಂ ಸ್ಯಾತ್ಪರ್ಯುದಂಚನಂ ॥
ವೃದ್ಧಿಃ ಕಳಾಂತರಂ ಪ್ರೋಕ್ತಂ ಕುಸೀದಂ ವೃದ್ಧಿಜೀವನಂ ॥ ೪೧೮ ॥

೫೭೩—ಪರಿವೃತ್ತಿರ್ವಿನಿಮಯೋ (1)ವೈಮೇಯಂ ಚ ನಿಗದ್ಯತೇ ॥
(2)ಪ್ರತ್ಯಯಃ ಕ್ಲಿಪ್ತಕಂ ಪ್ರೋಕ್ತಂ ಭಾಟಕೋಽವಕ್ರಯಃ ಸ್ಮೃತಃ ॥ ೪೧೯ ॥

೫೭೪ – ಕ್ಷೇತ್ರಾಜೀವಃ ಕೃಷಿಕಃ ಕೃಷೀವಲಃ (3)ಕರ್ಷಕಃ ಕುಟುಂಬೀ ಚ ॥
ಸೀತ್ಯಂ (4)ಸ್ತೃಸ್ಯಂ ಪ್ರೋಕ್ತಂ(5) ವಪ್ರಂ ಕ್ಷೇತ್ರಂ ಚ ಕೇದಾರಂ ॥ ೪೨೦ ॥

೫೭೫ – ಹಲಂ ಸ್ಯಾಲ್ಲಾಂಗಲಂ ಸೀರಃ ಪಾ(ಫಾ)ಳಃ ಕುಶಿಕ ಉಚ್ಯತೇ ॥
ಯೋಕ್ತ್ರಂ ತು ರಶ್ಮಿರಾಬಂಧಃ(6) ಶಮ್ಯಾ ಚ ಯುಗಕೀಲಕಃ(7) ॥ ೪೨೧ ॥

೫೭೬–ಕಥಿತೋ ಲೋಷ್ಟಕೋ ಲೋಷ್ಟ(ಃ)ಂ (8)ಕೋ(ಟಿ)ಸಂ ಲೋಷ್ಟಭೇದನಂ ॥
ಶಂಬಾಕೃತಂ ದ್ವಿಸೀತ್ಯಂ ಸ್ಯಾತ್ಸೀತಾ ಲಾಂಗಲಪದ್ಧತಿಃ ॥ ೪೨೨ ॥

೫೭೭ – ಗೋದಾರಣಂ ಚ ಕೂ(ಕು)ದ್ದಾಳಂ ಲವಿತ್ರಂ ದಾತ್ರಮುಚ್ಯತೇ ॥
ಪ್ರತೋದಃ ಪ್ರಾಜನಂ ತೋತ್ರಂ ಲೂನಂ (9)ದಾ(ತ)ನಮಿತಿ ಸ್ಮೃತಂ ॥ ೪೨೩ ॥

ಟೀ ॥ ಅಪಮಿತ್ಯಕಂ, ಉದ್ಧಾರಃ, ಋಣಂ, ಪರ್ಯುದಂಚನಂ— ಈ ೪ **ಸಾಲಂ.**
ವೃದ್ಧಿಃ, ಕಳಾಂತರಂ— ಈ ೨ **ಬಡ್ಡಿ.**
ಕುಸೀದಂ, ವೃದ್ಧಿಜೀವನಂ— ಈ ೨ **ಬಡ್ಡಿಯಿಂದಂ ಬಾಳ್ವವಂ** ॥ ೪೧೮ ॥

ಟೀ ॥ ಪರಿವೃತ್ತಿಃ, ವಿನಿಮಯಃ, ವೈಮೇಯಃ— ಈ ೩ **ಗೂಙಾಡುಹಂ.**
ಪ್ರಕ್ರಯಃ, ಕ್ಲಿಪ್ತಕಃ— ಈ ೨ **ಬೆಲೆ.** ಭಾಟಕಃ, ಅವಕ್ರಯಃ– ಈ ೨ **ಬಾಡಗೆ** ॥ ೪೧೯ ॥

ಟೀ ॥ ಕ್ಷೇತ್ರಾಜೀವಃ, ಕೃಷಿಕಃ, ಕೃಷೀವಲಃ, ಕರ್ಷಕಃ, ಕುಟುಂಬೀ— ಈ ೫ **ಗೆಯ್ವೊಕ್ಕಲಿಗಂ.** ಸೀತ್ಯಂ, ಸ್ತೃಸ್ಯಂ— ಈ ೨ ಸಸಿ.
ವಪ್ರಂ, ಕ್ಷೇತ್ರಂ, ಕೇದಾರಂ— ಈ ೩ **ಕೆಯ್** ॥ ೪೨೦ ॥

ಟೀ ॥ ಹಲಂ, ಲಾಂಗಲಂ, ಸೀರಃ— ಈ ೩ **ನೇಗಿಲ್.**
ಪಾಳಃ, ಕುಸೀರಃ— ಈ ೨ **ಕುಬು.** ಯೋಕ್ತ್ರಂ, ರಶ್ಮಿಃ, ಆಬಂಧಃ – ಈ ೩ **ಹಗ್ಗಂ.**
ಶಮ್ಯಾ, ಯುಗಕೀಲಕಃ – ಈ ೨ **ಕಳಿಯಡಕು** ॥ ೪೨೧ ॥

ಟೀ ॥ ಲೋಷ್ಟಕಃ, ಲೋಷ್ಟಂ— ಈ ೨ **ಹೆಟ್ಟೆ.**
ಕೋಟಿ(ೀ)ಶಂ, ಲೋಷ್ಟಭೇದನಂ— ಈ ೨ **ಹಲಿಕೆ.**
ಶಂಬಾಕೃತಂ, ದ್ವಿಸೀತ್ಯಂ— ಈ ೨ **ಯಿರ್ಬ್ಬಾಳಿ?**
ಸೀತಾ, ಲಾಂಗಲಪದ್ಧತಿಃ— ಈ ೨ **ನೇಗಿಲಸಾಲ್** ॥ ೪೨೨ ॥

ಟೀ ॥ ಗೋದಾರಣಂ, ಕೂದ್ದಾಲಂ— ಈ ೨ **ಗುದ್ದಲಿ.**
ಲವಿತ್ರಂ, ದಾತ್ರಂ— ಈ ೨ **ಕುಡುಗೋಲ್.**
ಪ್ರತೋದಃ, ಪ್ರಾಜನಂ, ತೋತ್ರಂ— ಈ ೩ **ಮುಳುಹುಗೋಲ್.**
ಲೂನಂ, ದಾನಂ— ಈ ೨ **ಕುಯ್ಲು** ॥ ೪೨೩ ॥

---

(1) ವೈನೇಯಶ್ಚ (2) ಪ್ರಕ್ರಯಃ (3) ಕರ್ಷುಕಃ (4) ಸಸ್ಯಂ (5) ಪ್ರೋಕ್ತಂ ಧಾನ್ಯಮುಸ್ಯಧನಂ ಬುಧೈಃ ವತ್ರಂ- - ದಾರಂ ॥ (6) ಬಂಧುಃ (7) ಕೀಲಿಕಾ. (8) ಕೋಷ್ಟೀಶಂ (9) ದಾತ್ರಮಿತಿ

೫೭೮ – (1) ಖಲೋತ್ಕಾಲೀ ಭವೇನ್ಮೇ(2)ಥೀ ಖಳದಾ(ನ್ಯ)ನಂ ಖಳಂ ಸ್ಮೃತಂ ॥
ಬುಸಃ ಕಡಂಗರಃ ಪ್ರೋಕ್ತಃ ಕಣಸ್ಸ್ಯಾತ್ಕ್ಷುದ್ರ ತಂಡುಲಃ ॥ ೪೨೪ ॥

೫೭೯–ಧಾನ್ಯಶೂಕಂ ಚ ಕಿಂಶಾರುಃ ಕಣಿಶಂ ಧಾನ್ಯಶೀರ್ಷಕಂ ॥
(ನಾಳಂ ಕಾಂಡಂ ಕ್ಷುಪೋ ಗುಚ್ಛೋ ವ್ರೀಹಿಸ್ತಂಬಕರಿಃ ಸ್ಮೃತಃ) ॥ ೪೨೫ ॥

೫೮೦— ರಕ್ತಶಾಳಿರ್ಮಹಾಶಾಳಿಃ ಕಳಮಾಶ್ಚೇತಿ ಶಾಳಯಃ ॥
(3) ಉನ್ಮಾಳಃ ಕಥಿತಃ ಪ್ರಾಜ್ಞೈಃ ಕೋದ್ರವಃ ಕೋರದೂಷಕಃ ॥ ೪೨೬ ॥

೫೮೧— ಮಾಂಗಲ್ಯಕೋ ಮಸೂರಃ ಸ್ಯಾತ್ ಸಿದ್ಧಾರ್ಥಃ ಸರ್ಷಪಃ ಸ್ಮೃತಃ ॥
ಆಸುರೀ ರಾಜಿಕಾ ಚೇತಿ ಕಥ್ಯತೇ ರಾಜಸರ್ಷಪಃ ॥ ೪೨೭ ॥

೫೮೨—ಪ್ರಿಯಂ(4)ಗುರಿಷ್ಯತೇ ಕಂಗುರತಸೀ ಸ್ಯಾದುಮಾ ಕ್ಷುಮಾ ॥
(5) ಖಳಾಯಃ ಖಂಡಿಕೋ ಜ್ಞೇಯ (6)ಸ್ಸಾತೀನಶ್ಚ ಮನೀಷಿಭಿಃ ॥ ೪೨೮ ॥

೫೮೩ – ಜ(ರ್ತಿ)ತ್ತಿಳಃ ಕಥ್ಯತೇ ಸದ್ಭಿರರಣ್ಯ ಪ್ರಭವಸ್ತಿಳಃ ॥
ತಿಳಪಿಂಜಸ್ತಿಳಪೇಜಃ ತಥಾ ಷಂಡತಿಳಃ ಸ್ಮೃತಃ ॥ ೪೨೯ ॥

ಟೀ ॥ ಖಲೋತ್ಕಾಲೀ, ಮೇಥೀ— ಈ ೨ **ಮೇಟಿ.** ಖಳದಾನಂ, ಖಳಃ– ಈ ೨ **ಕಳಂ.**
ಬುಸಃ, ಕಡಂಗರಃ– ಈ ೨ **ಹೊಟ್ಟು.** ಕಣಃ, ಕ್ಷುದ್ರತಂಡುಳಃ– ಈ ೨ **ನುಚ್ಚು** ॥ ೪೨೪ ॥

ಟೀ ॥ ಧಾನ್ಯಶೂಕಂ, ಕಿಂಶಾರು– ಈ ೨...... ಕಣಿಶಂ, ಧಾನ್ಯಶೀರ್ಷಕಂ– ಈ ೨ **ತೆನೆ.**
ನಾಳಂ, ಕಾಂಡಂ— ಈ ೨ **ಕಂಡಿಕೆ.** ಕ್ಷುಪಃ, ಗುಚ್ಛಃ— ಈ ೨ **ಮಡಲ್.**
ವ್ರೀಹಿಃ, ಸ್ತಂಭಕರಿಃ – ಈ ೨ **ನೆಲ್** ॥ ೪೨೫ ॥

ಟೀ ॥ ರಕ್ತಶಾಳಿಃ, ಮಹಾಶಾಳಿಃ, ಕಳಮಃ— ಇವು ಮೊದಲಾಗುಳ್ಳುವು **ಕಳಮೆಯ ಭೇದಂ.**
ಉನ್ಮಾಳಃ, ಕೋದ್ರವಃ, ಕೋರದೂಷಕಃ— ಈ ೩ **ಹಾರಕು** ॥ ೪೨೬ ॥

ಟೀ ॥ ಮಾಂಗಲ್ಯಕಃ, ಮಸೂರಃ— ಈ ೨ **ಚಣಗೆ.**
ಸಿದ್ಧಾರ್ಥಃ, ಸರ್ಷಪಃ – ಈ ೨ **ಬಿಳಿಯ ಸಾಸುವೆ.**
ಅಸುರೀ, ರಾಜಿಕಾ, ರಾಜಸರ್ಷಪಃ – ಈ ೩ **ರಾಯಸಾಸುವೆ** ॥ ೪೨೭ ॥

ಟೀ ॥ ಪ್ರಿಯಂಗುಃ, ಕಂಗುಃ— ಈ ೨ **ನವಣೆ.**
ಅತಸೀ, ಉಮಾ, ಕ್ಷುಮಾ – ಈ ೩ **ಎಳ್ಳಗಸೆ.**
ಕಳಾಯಃ, ಖಂಡಿಕಃ, ಸಾತೀನಃ – ಈ ೩ **ಬಟ್ಟಗಡಲೆ** ॥ ೪೨೮ ॥

ಟೀ ॥ ಜತ್ತಿಳಮೆಂಬುದು **ಕಾಡೆಳ್ಳು.**
ತಿಳಪಿಂಜಃ, ತಿಳಪೇಷಃ, ಷಂಡತಿಳಃ— ಈ ೩ **ಹೊಳ್ಳೆಳ್ಳು** ॥ ೪೨೯ ॥

---

(1) ಖಲೇವಾಲೀ (2) ಥಿಃ(ಠಿಃ)ಖಳ (3) ಉದ್ದಾಲಃ (4) ಗುಃ ಕಥ್ಯತೇ (5) ಕಲಾಪ, ಕಲಾಯಃ (6) ಸತೀನಶ್ಚ.

೫೮೪—ತೃಣಧಾನ್ಯಂ ತು ನೀವಾರಃ ಶ್ಯಾಮಾಕಃ ಶ್ಯಾಮಕೋ ಭವೇತ್ ॥
ವಲಾ(1) ನಿಷ್ಪಾವಕಾ ಪ್ರೋಕ್ತಾಃ ಆಢಕೀ ತುವರೀ ಸ್ಮೃತಾ ॥ ೪೩೦ ॥

೫೮೫—ಭ್ರ(ಭೃ)ಷ್ಟಂ ಧಾನ್ಯಂ ಭವೇತ್‌ಲಾಜಾಃ ಪೃಥುಕಾಶ್ಚಿಪಿಟಾಶ್ಚ [ಕುಟ್ಟಿತಾಸ್ತೇಸ್ಯುಃ ॥
ಭ್ರ(ಭೃ)ಷ್ಟಾ ಯವಾಸ್ತು ಧಾನಾ ದರಪಕ್ವಾಃ (2)ಕಥ್ಯತೇ ಯೂಷಃ ॥ ೪೩೧ ॥

೫೮೬ – ಶೂದ್ರೋಽನ್ತ್ಯವರ್ಣೋ ವೃಷಲಃ ಪದ್ಯೋ(3) ವದ್ಯಶ್ಚ ಕಥ್ಯತೇ ॥
(4)ಲೇಖಕಸ್ಸ್ಯಾಲ್ಲಿಪಿಕರಃ ಕಾಯಸ್ಥೋಽಕ್ಷರ ಜೀವಕಃ ॥ ೪೩೨ ॥

೫೮೭—ಆಭೀರಸ್ಸ್ಯಾನ್ಮಹಾಶೂದ್ರೋ ಗೋಪಾಳೋ ವಲ್ಲವಸ್ತಥಾ ॥
ತ್ವಷ್ಟಾ ಚ ಕಾಷ್ಠತಟ್ತಕ್ಷಾ ರಥಕಾರಶ್ಚ ವರ್ಧಕಿಃ ॥ ೪೩೩ ॥

೫೮೮ – ನಾಡಿಂಧಮಃ ಕಳಾದಃ ಸುವರ್ಣಕಾರಶ್ಚ ಮುಷ್ಟಿಕೋ ಜ್ಞೇಯಃ ॥
ವೈಕಟಿಕೋ ಮಣಿಕಾರೋ (5)ವ್ಯೋಕಾರೋ ಲೋಹಕಾರಃ ಸ್ಯಾತ್ ॥ ೪೩೪ ॥

೫೮೯—ಕ್ಷುರಮರ್ದೀ (ದಿವಾಕೀರ್ತಿ ಶ್ಚಂಡಿಳೋ) ನಾಪಿತಸ್ಸ್ಮೃತಃ ॥
ಮಾಲಾಕಾರಸ್ತು ವಿಜ್ಞೇಯೋ ಮಾಳಿಕಃ (6)ಪಾರಿಹಾರಿಕಃ ॥ ೪೩೫ ॥

ಟೀ ॥ ತೃಣಧಾನ್ಯಂ, ನೀವಾರಃ—ಈ ೨ **ಹೊಡೆಹುಲ್.**
ಶ್ಯಾಮಾಕಃ, ಶ್ಯಾಮಕಃ—ಈ ೨ **ಸಾವೆ.** ವಲ್ಲಃ, ನಿಷ್ಪಾವಕಃ – ಈ ೨ **ಅವರೆ.**
ಆಢಕೀ, ತುವರೀ (ಸ್ಮೃತಃ)—ಈ ೨ **ತೊಗರಿ** ॥ ೪೩೦ ॥
ಟೀ ॥ ಲಾಜಾಃಯೆಂಬುದು **ಅರಳ್.** ಪೃಥುಕಃ, ಚಿಪಿಟಃ—ಈ ೨ **ಅವಲಕ್ಕಿ.**
ಧಾನಾಯೆಂಬುದು **ಉಂಮುಗೆ.** ಯೂಷಯೆಂಬುದು ಸೀತೆನೆ ॥ ೪೩೧ ॥
ಟೀ ॥ ಶೂದ್ರಃ, ಅಂತ್ಯವರ್ಣಃ, ವೃಷಲಃ, ಪದ್ಯಃ—ಈ ೪ **ಶೂದ್ರಂ.**
ಲೇಖಕಃ, ಲಿಪಿಕರಃ—ಈ ೨ **ಲೇಖಕಂ.**
ಕಾಯಸ್ಥಃ, ಅಕ್ಷರಜೀವಕಃ—ಈ ೨ **ಸೇನಬೋವಂ** ॥ ೪೩೨ ॥
ಟೀ ॥ ಆಭೀರಃ, ಮಹಾಶೂದ್ರಃ – ಈ ೨ **ಕುಡಿಯೊಕ್ಕಲಿಗಂ.**
ಗೋಪಾಳಃ, ವಲ್ಲವಃ—ಈ ೨ **ತುಱುಕಾಱಂ.**
ತ್ವಷ್ಟಾ, ಕಾಷ್ಠತಟ್, ತಕ್ಷಾ, ರಥಕಾರಃ, ವರ್ಧಕೀ—ಈ ೫ **ಬಡಗಿ** ॥ ೪೩೩ ॥
ಟೀ ॥ ನಾಡಿಂಧಮಃ, ಕಳಾದಃ, ಸುವರ್ಣಕಾರಃ, ಮುಷ್ಟಿಕಃ-ಈ ೪ **ಅಕ್ಕಸಾಲೆ.**
ವೈಕಟಿಕಃ, ಮಣಿಕಾರಃ—ಈ ೨ **ಮಣಿಗಾಱಂ.**
ವ್ಯೋಕಾರಃ, ಲೋಹಕಾರಃ—ಈ ೨ **ಬೋಗಾಱಂ** ॥ ೪೩೪ ॥
ಟೀ ॥ ಕ್ಷುರಮರ್ದೀ, ದಿವಾಕೀರ್ತಿಃ, ಚಂಡಿಳಃ, ನಾಪಿತಃ —ಈ ೪ **ನಾವಿದಂ.**
ಮಾಳಾಕಾರಃ, ಮಾಲಿಕಃ, ಪಾರಿಹಾರಿಕಃ—ಈ ೩ **ಮಾಲೆಗಾಱಂ** ॥ ೪೩೫ ॥

---

(1) ವಲ್ಲಾ (2) ಕಥ್ಯತೇಽಭ್ಯೂಷಃ (3) ಯದ್ಯುಪರ್ಯಶ್ಚ, ಸಜ್ಜಶ್ಚ ಕಥ್ಯತೇ (4) ಖೇಲಂಕಃ (5) ಧ್ಯಾಕಾರೋ (6) ಪ್ರಾಶಿ.

೫೯೦—ಕುಂಭಕಾರಃ ಕುಲಾಲಸ್ಸ್ಯಾತ್ ತಂತುವಾಯಃ ಕುವಿಂದಕಃ ॥
ಸಂವಾಹಕೋಽಂಗಮರ್ದೀ ಸ್ಸ್ಯಾತ್ತುನ್ನವಾಯಶ್ಚ ಸೌಚಿಕಃ ॥ ೪೩೬ ॥

೫೯೧—ಲೇಪಕಃ ಪಳಗಂಡ ಸ್ಸ್ಯಾತ್ ರಂಗಾಜೀವಸ್ತು ಚಿತ್ರಕೃತ್ ॥
ಕರ್ಮ ಲೇಪ್ಯಾದಿಕಂ ಸರ್ವಂ ಪು(ಹ)ಸ್ತಕರ್ಮ ಸ್ಮೃತಂ ಬುಧೈಃ ॥ ೪೩೭ ॥

೫೯೨—ಶೈಲಾಲೀ ಶೈಲೂಷಃ ಕುಶೀಲವಶ್ಚಾರಣಃ ಕು(ಕೃ)ಶಾಶ್ವೀ ಚ ॥
ಜಾಯಾಜೀವೋ ಭರತೋ ನಟಸ್ತಥಾ ಸ್ಯಾನ್ನಟೀ ಕ್ಷುದ್ರಾ ॥ ೪೩೮ ॥

೫೯೩ – ಶಿಲ್ಪಿನಃ ಕಾರವಃ ಪ್ರೋಕ್ತಾಃ ಪ್ರಕೃತಿಶ್ಚ ಮನೀಷಿಭಿಃ ॥
ನಿರ್ನೆ(ರ್ಣೆ)ಜಕಃ ಸ್ಸ್ಯಾದ್ರಜಕಃ (1)ಕಲ್ಯಪಾಲಸ್ತು ಶೌಂಡಿಕಃ ॥ ೪೩೯ ॥

೫೯೪ – (2) ಕೈವರ್ತೋ ಧೀವರೋ ದಾ(ಶೋ)ಸೋ ಮತ್ಸ್ಯಬಂಧೀ ಚ ಜಾಳಿಕಃ ॥
ಆನಾ(ನ)ಯಃ ಕಥ್ಯತೇ ಜಾಳಃ ಕುವೇಣೀ ಮತ್ಸ್ಯಬಂಧಿನೀ ॥ ೪೪೦ ॥

೫೯೫—ವೈತಂಸಿಕಃ ಸೌನಿಕಃ ಸ್ಸ್ಯಾತ್ ಕೌಟಿಕೋ ಮಾಂಸವಿಕ್ರಯೀ ॥
ಸೂನಾ ಸ್ಯಾದ್ಘಾತನಸ್ಥಾನಂ ಕೃಪಾಣೀ ಲೂನಕರ್ತ(ನೀ)ರೀ ॥ ೪೪೧ ॥

ಟೀ ॥ ಕುಂಭಕಾರಃ, ಕುಲಾಲಃ—ಈ ೨ **ಕುಂಬಾಱಂ.**
ತಂತುವಾಯಃ, ಕುವಿಂದಕಃ—ಈ ೨ **ಸಾಲಿಗಂ.**
ಸಂವಾಹಕಃ,ಅಂಗಮರ್ದಃ-ಈ ೨ [ಮೊ]ಯ್ಮ[ೆ]ಟಿ. [=ಮರ್ದನಿಗ-ಮಂಗರಾಜ ನಿಘಂಟು]
ತುನ್ನವಾಯಃ, ಸೌಚಿಕಃ – ಈ ೨ **ಚಿಪ್ಪಿಗಂ** ॥ ೪೩೬ ॥
ಟೀ ॥ ಲೇಪಕಃ, ಪಳಗಂಡಃ—ಈ ೨ **ಲೆಪ್ಪಗಾಱಂ.**
ರಂಗಾಜೀವಃ, ಚಿತ್ರಕೃತ್ – ಈ ೨? **ವ್ಯಾಱಿಗಾಱಂ** [ಬಣ್ಣಗಾಱಂ, ಚಿತ್ರಕಾರಂ]
ಲೆಪ್ಪ ಮೊದಲಾಗುಳ್ಳ ಕೆಲಸಮುಂ (ಹ)ಪುಸ್ತಕರ್ಮ ಎಂಬುದು ॥ ೪೩೭ ॥
ಟೀ ॥ ಶೈಲಾಲೀ, ಶೈಲೂಷಃ, ಕುಶೀಲವಃ, ಚಾರಣಃ, ಕೃಶಾಶ್ವೀ, ಜಾಯಾಜೀವಃ, ಭರತಃ, ನಟಃ—ಈ ೮ **ನಟ್ಟವಿಗಂ.** ನಟೀ, ಕ್ಷುದ್ರಾ-ಈ ೨ **ನಟ್ಟವಿಗಿತ್ತಿ** ॥ ೪೩೮ ॥
ಟೀ ॥ ಶಿಲ್ಪೀ, ಕಾರುಃ, ಪ್ರಕೃತಿಃ – ಈ ೩ **ಪಂಚಕಾರುಕರ್.**
ನಿರ್ಣೇಜಕಃ, ರಜಕಃ-ಈ ೨ **ಅಗಸಂ.** ಕಲ್ಯಪಾಲಃ, ಶೌಂಡಿಕಃ-ಈ ೨ **ಕಳ್ಳವಾಳಂ** ॥ ೪೩೯ ॥
ಟೀ ॥ ಕೈವರ್ತಃ, ಧೀವರಃ, ದಾಶಃ, ಮತ್ಸ್ಯಬಂಧೀ, ಜಾಳಿಕಃ-ಈ ೫ **ಜಾಲಗಾಱಂ.**
ಆನಾಯಃ, ಜಾಳಃ, ಕುವೇಣೀ, ಮತ್ಸಬಂಧಿನೀ – ಈ ೪ **ಬಲೆ** ॥ ೪೪೦ ॥
ಟೀ ॥ ವೈತಂಸಿಕಃ, ಸೌನಿಕಃ, ಕೌಟಿಕಃ, ಮಾಂಸವಿಕ್ರಯೀ—ಈ ೪ **ಸೊನೆಗಾಱಂ.**
ಸೂನಾ, ಘಾತ(ನ)ಕಸ್ಥಾನಂ—ಈ ೨ **ಕೊಲುವೆಡೆ.**
ಕೃಪಾಣೀ, ಲೂನಕರ್ತರೀ—ಈ ೨ **ಕಡಿವ ಕತ್ತಿಗೆ** ॥ ೪೪೧ ॥

---

(1) ಕಲ್ಪಪಾಲ (2) ವೈವರ್ತೋ. (3) ಕೃಪಾಣೀಲೀ ಚ ಕರ್ತರೀ. (ಈ ಪಾಠದಲ್ಲಿ ಕೃಪಾಣೀ, ಈಲೀ, ಕರ್ತರೀ—ಈ ೩ ಕಡಿವ ಕತ್ತಿಗೆ ಎಂದರ್ಥವು.)

7

GOVERNMENT ORIENTAL MSS LIBRARY
20 OCT 1943

೫೯೬ – ಚರ್ಮಕೃತ್ಪಾದುಕಾಕಾರೋ ನಧ್ರೀ ವಧ್ರೀ ಚ ಕಥ್ಯತೇ ॥
ಮೃಗಯುರ್ಲುಬ್ಧಕೋ ವ್ಯಾಧೋ ಬುಧೈರ್ವಾಗುರಿಕಃ ಸ್ಮೃತಃ ॥ ೪೪೨ ॥

೫೯೭ – ಶುಲ್ಬಾ ರಜ್ಜು[1] ರ್ವಟಾರಶ್ಚ ವಟಸ್ತಂತ್ರೀಗುಣಸ್ತಥಾ ॥
ಪಾಶಃ ಸ್ಯಾದ್ಬಂಧನಗ್ರಂಥಿಃ ವಾಗುರಾ ಮೃಗಜಾಳಿಕಾ ॥ ೪೪೩ ॥

೫೯೮ – ಅಂತಾವಸಾಯಿೞಾ ಚಂಡಾಳೋ ನಿಷಾದಶ್ಚ ಜ(ಸ)ನಂಗಮಃ ॥
ಶ್ವಪಚಃ [2] ಪುಲ್ಕಸಶ್ಚೈವ ಮಾತಂಗಃ ಪ್ಲವಕ(ಗ)ಃ ಸ್ಮೃತಃ ॥ ೪೪೪ ॥

೫೯೯ – ಕಿರಾತಶ್ಶಬರೋ[3] ನಿಷ್ಟ್ಯಃ ಪುಳಿಂದಾ ನಾಹಳಾ ಭಟಾಃ ॥
ಮಾಳಾ ಮ್ಲೇಚ್ಛಾದಯೋ ಭಿಲ್ಲಾಃ ಕಥ್ಯಂತೇ ಹ್ಯಂತಜಾತಯಃ ॥ ೪೪೫ ॥

೬೦೦ – ರೋಗೋ ರುಕ್ ವ್ಯಾಧಿರಾ(ಕು)ಕಲ್ಯಂ ಗದೋ ಮಾಂದ್ಯಮಪಾಟವಂ ॥
ಆಮ ಆಮಯ ಆತಂಕ ಉಪತಾಪೋ ರುಜಾ ಸ್ಮೃತಾ ॥ ೪೪೬ ॥

೬೦೧ – ಕ್ಷವಥುಃ ಕಥ್ಯತೇ ಕಾ(ಶೊ)ಸೋ [4] ವೇಪಥುಃ ಕಂಪ ಉಚ್ಯತೇ ॥
ದವಥುಃ ಪರಿತಾಪಸ್ಸ್ಯಾತ್ ಗ್ಲಾನಿಶ್ಚ ಕ್ಲಮಥುಃ ಸ್ಮೃತಃ ॥ ೪೪೭ ॥

೬೦೨ – ರಾಜಯಕ್ಷ್ಮಾ ಕ್ಷಯಃ ಶೋಫ(ಷ)ಃ [5] ಶೋಕಃ ಶ್ವಯಥುರುಚ್ಯತೇ ॥
ಕಿಲಾ(ಸ)ಶಃ ಕಥ್ಯತೇ ಸಿಧ್ಮ ಪಾಮಾ ಕಚ್ಛೂಃ ಖಸಸ್ಸ್ಮೃತಃ ॥ ೪೪೮ ॥

ಟೀ ॥ ಚರ್ಮಕೃತ್, ಪಾದುಕಾಕಾರಃ— ಈ ೨ **ಸಂಮಗಾರಂ.**
ನಧ್ರೀ, ವಧ್ರೀ— ಈ ೨ **ಹೆಬ್ಬೆಸಗಾಱಂ.**
ಮೃಗಯುಃ, ಲುಬ್ಧಕಃ, ವ್ಯಾಧಃ, ವಾಗುರಿಕಃ— ಈ ೪ **ಮಾವುಲಿಗಂ** ॥ ೪೪೨ ॥

ಟೀ ॥ ಶುಲ್ಬಾ, ರಜ್ಜುಃ, ವಟಾರಃ, ವಟಃ, ತಂತ್ರೀಗುಣಃ— ಈ ೫ **ನೇಣ್.**
ಪಾಶಃ, ಬಂಧನಗ್ರಂಥಿಃ, ವಾಗುರಾ, ಮೃಗಜಾಳಿಕಾ— ಈ ೪ **ಬೆಳ್ಳವಾರಂ** ॥ ೪೪೩ ॥

ಟೀ ॥ ಅಂತಾವಸಾಯಿೞಾ, ಚಂಡಾಳಃ, ನಿಷಾದಃ, ಜನಂಗಮಃ— ಈ ೪ **[ಪೊಲೆಯಂ]**
ಶ್ವಪಚಃ, ಪುಲ್ಕಸಃ, ಮಾತಂಗಃ, ಪ್ಲವಕಃ— ಈ ೪ **ಮಾದಿಗಂ** ॥ ೪೪೪ ॥

ಟೀ ॥ ಕಿರಾತಃ, ಶಬರಃ, ನಿಷ್ಟ್ಯಃ, ಪುಳಿಂದಃ, ನಾಹಳಃ, ಭಟಃ, ಮಾಳಾ, ಮ್ಲೇಚ್ಛಃ—
ಈ ೮ **ಬೇಡರ್ಮೊದಲಾಗುಳ್ಳಂತ್ಯ ಜಾತಿಗಳ್** ॥ ೪೪೫ ॥

ಟೀ ॥ ರೋಗಃ, ರುಕ್, ವ್ಯಾಧಿಃ, ಆಕಲ್ಯಂ, ಗದಃ, ಮಾಂದ್ಯಂ, ಅಪಾಟವಂ, ಆಮಃ, ಆಮಯಃ, ಆತಂಕಃ, ಉಪತಾಪಃ, ರುಜಾ— ಈ ೧೨ **ವ್ಯಾಧಿ** ॥ ೪೪೬ ॥

ಟೀ ॥ ಕ್ಷವಥುಃ, ಕಾಸಃ— ಈ ೨ **ಕೆಂಮು.** ವೇಪಥುಃ, ಕಂಪಃ— ಈ ೨ **ನಡುಕಂ.**
ದವಥುಃ, ಪರಿತಾಪಃ— ಈ ೨ **ಬಳಲಿಕೆ.** ಗ್ಲಾನಿಃ, ಕ್ಲಮಥುಃ— ಈ ೨ **ಉಮ್ಮಳಿಕೆ** ॥ ೪೪೭ ॥

ಟೀ ॥ ರಾಜಯಕ್ಷ್ಮಾ, ಕ್ಷಯಃ, ಶೋಫಃ— ಈ ೩ **ಕ್ಷಯವ್ಯಾಧಿ.**
ಶೋಫಃ, ಶ್ವಯಥುಃ— ಈ ೨ **ಬಾ(ವು)ಹು.** ಕಿಲಾಸಃ, ಸಿಧ್ಮ— ಈ ೨ **ಚಿಬ್ಬು.**
ಪಾಮಾ, ಕಚ್ಛೂಃ, ಖಸಃ— ಈ ೩ **ಕೆರಕು (ಕೆಱಂಕು)** ॥ ೪೪೮ ॥

---

(1) ವರಾಟಶ್ಚ ವಟಸ್ತಂತೀರ್ಗುಣಃ (2) ಪಕ್ವಸಶ್ಚೈವ. (3) ಕಿರಾತಾಶ್ಶಬರಾ ನಿಷ್ಟ್ಯಾಃ. (4) ವಪಥುಃ (5) ಶೋಷಃ

೬೦೩ — ಕಂಡೂತಿಃ ಕಂಡೂಯಾ ಕಂಡೂಃ ಕಂಡೂಯನಂ ತಥಾ ಖರ್ಜೂಃ ॥
ಜಾಗರ್ಯಾ ಜಾಗರಣಂ ಪ್ರಜಾಗರೋ ಜಾಗರಾ ಚ ವಿಜ್ಞೇಯಾ ॥ ೪೪೯ ॥

೬೦೪ – ಪಿಟಕಃ ಸ್ಫೋಟಕೋ ಗಂಡಃ ಶ್ವಿತ್ರಂ ಕುಷ್ಠಂ ತು ಪಾಂಡುರಂ ॥
ಶ್ಲೀಪದಂ ಪಾದವಲ್ಮೀಕಂ ಪೃಷ್ಠಗ್ರಂಥಿರ್ಗಡುಃ ಸ್ಮೃತಃ ॥ ೪೫೦ ॥

೬೦೫ — ಕೇಶಘ್ನಮಿಂದ್ರಲುಪ್ತಂ ಸ್ಯಾದರ್ಶಶ್ಚ ಗುದ(ಡ)ಕೀಲಕಃ ॥
ಮಾಯುಃ [1] ಪಿತ್ತಂ ಕಫಃ ಶ್ಲೇಷ್ಮಾ ಪ್ರತಿಶ್ಯಾಯಶ್ಚ ಪೀನಸಃ ॥ ೪೫೧ ॥

೬೦೬ — ವಾತಕೀ ವಾತರೋಗೀ ಸ್ಯಾತ್ಸಾತಿಸಾರೋಽತಿಸಾರಕೀ ॥
ಸಿಧ್ಮ ಶ್ಲೇಷ್ಮಾರ್ಶಸಂಯೋಗಾತ್ ಸಿಧ್ಮಳಃ ಶ್ಲೇಷ್ಮಳೋಽರ್ಶಸಃ ॥ ೪೫೨ ॥

೬೦೭ — ದದ್ರುಣೋ ದದ್ರುರೋಗೀ ಸ್ಯಾ[2] ನ್ನಕ್ಷುದ್ರಃ ಕ್ಷುದ್ರನಾಸಿಕಃ ॥
ಕ್ಲಿನ್ನೇ ಯಸ್ಯಾಕ್ಷಿಣೀ ಪಿಲ್ಲಶ್ಚಿಲ್ಲಶ್ಚುಲ್ಲಶ್ಚ ಸ ಸ್ಮೃತಃ ॥ ೪೫೩ ॥

೬೦೮ – ಪಿಚಂಡಿಳೋ ಬೃಹತ್ಕುಕ್ಷಿಃ ತುಂದಿಳೋದರಿಳೌ ಚ ಸಃ ॥
ಖಳತಿಃ ಶಿಪಿವಿಷ್ಟಸ್ಸ್ಯಾತ್ ಐಂದ್ರ[3] ಲುಪ್ತಕ ಏವಚ ॥ ೪೫೪ ॥

K.392

ಟೀ ॥ ಕಂಡೂತಿಃ, ಕಂಡೂಯಾ, ಕಂಡೂಃ, ಕಂಡೂಯನಂ, ಖರ್ಜೂಃ— ಈ ೫ **ತಿನಸು.**
ಜಾಗರ್ಯಾ, ಜಾಗರಣಂ, ಪ್ರಜಾಗರಃ, ಜಾಗರಾ— ಈ ೪ **ಎಚ್ಚತ್ತಿರ್ಪುದು** ॥ ೪೪೯ ॥

ಟೀ ॥ ಪಿಟಕಃ, ಸ್ಫೋಟಕಃ, ಗಂಡಃ— ಈ ೩ **ಪು(ಹು)ಱ್.**
ಶ್ವಿತ್ರಮೆಂಬುದು **ಬೆಳ್ಪೊನ್ನು.** ಶ್ಲೀಪದಂ, ಪಾದವಲ್ಮೀಕಂ— ಈ ೨ **ಒಱಲೆಗಾಲ್.**
ಪೃಷ್ಠಗ್ರಂಥಿಃ, ಗಡುಃ— ಈ ೨ **ಬೆಂನಕುಱು** ॥ ೪೫೦ ॥

ಟೀ ॥ ಕೇಶಘ್ನಂ, ಇಂದ್ರಲುಪ್ತಂ— ಈ ೨ [4] **ತೇವುಳು.** **[= ತೇವುಳಿ]**
ಅರ್ಶಃ, ಗುದಕೀಲಕಃ— ಈ ೨ **ಮೂಲವ್ಯಾಧಿ.** ಮಾಯುಃ, ಪಿತ್ತಂ— ಈ ೨ **ಪಿತ್ತಂ.**
ಕಫಃ, ಶ್ಲೇಷ್ಮಾ, ಪ್ರತಿಶ್ಯಾಯಃ, ಪೀನಸಃ— ಈ ೨ **ನೆಗಡಿ** ॥ ೪೫೧ ॥

ಟೀ ॥ ವಾತಕಿಯೆಂಬವನುಂ **ವಾತರೋಗವನುಳ್ಳವಂ.**
ಅತಿಸಾರಕಿಯೆಂ(ಬವನುಂ)ಬುದು **ಬಸಿರ್ಕುತ್ತವುಳ್ಳವಂ.**
ಚಿಬ್ಬ ಉಳ್ಳವನಂ ಸಿಧ್ಮಳನೆಂಬುದು. **ಶ್ಲೇಷ್ಮಾವುಳ್ಳವನು** ಶ್ಲೇಷ್ಮಳನೆಂಬುದು.
ಅರಿಸೆಯುಳ್ಳವನಂ ಅರ್ಶಸನೆಂಬುದು ॥ ೪೫೨ ॥

ಟೀ ॥ **ತದರ್ಮುಳ್ಳವನಂ** ದದ್ರುಣನೆಂಬುದು. ನಕ್ಷುದ್ರನೆಂಬುವಂ **ಚಿಕ್ಕಮೂಗಿನವಂ.**
ಪಿಲ್ಲಃ, ಚಿಲ್ಲಃ, ಚುಲ್ಲಃ— ಈ ೩ **ಅಳಿಗಣ್ಣವಂ** ॥ ೪೫೩ ॥

ಟೀ ॥ ಪಿಚಂಡಿಳಃ, ಬೃಹತ್ಕುಕ್ಷಿಃ, ತುಂದಿಳಃ, ಉದರಿಳಃ— ಈ ೪ **ಹೊಟ್ಟೆಗಂ.**
ಖಳತಿಃ, ಶಿಪಿವಿಷ್ಟಃ, ಐಂದ್ರಲುಪ್ತಕಃ— ಈ ೩ **ತರಟಿದಲೆ(ಯಂ)** ॥ ೪೫೪ ॥

---

(1) ಪಿತ್ತಃ (2) ನ್ನಃ ಕ್ಷುದ್ರಃ (3) ಲುಪ್ತಿಕ (4) ತೆಗಳಿಗೆ ಎಂಬ ಚರ್ಮದ ಹುರುಪೆ ಬೀಳುವ ರೋಗವಿರಬಹುದು

೬೦೯ – ಅಂಧೋ ಹ್ಯನೇಡಮೂಕಃ ಸ್ಯಾದೇಡೋ ಬಧಿರ ಉಚ್ಯತೇ ॥
ಜಡಃ ಕಡಃಸ್ಮೃತೋ ಮೂಕಃ(1) ಕಳಮೂಕಸ್ತ್ವವಾಕ್ಛ್ರುತಿಃ ॥ ೪೫೫ ॥

೬೧೦– ಖಂಜಃ ಪಂಗುಸ್ತಥಾ ಶ್ರೋಣಿ(ಣ)ಃ ಕುಣಿರ್ವಿಕಳಪಾಣಿಕಃ ॥
ತುಂ(ಡಿ)ದಿರುನ್ನತನಾಭಿಃ ಸ್ಯಾತ್ ವಿಗ್ರೋ ವಿಗತನಾಸಿಕಃ ॥ ೪೫೬ ॥

೬೧೧—ಗಡುಳಃ ಕಥ್ಯತೇ ಕುಬ್ಜಃ ಖರ್ವಶಾಖಸ್ತು ವಾಮನಃ ॥
ಪೃಶ್ನಿ(2) ರಲ್ಪಶರೀರಸ್ಸ್ಯಾತ್ ಕಿರಾತ ಸ್ಸ ಚ ಕಥ್ಯತೇ ॥ ೪೫೭ ॥

೬೧೨– ಆಯುರ್ವೇದೀ ಭಿಷಗ್ವೈದ್ಯೋ ದೋಷಜ್ಞಃ ಸ್ಯಾಚ್ಚಿಕಿತ್ಸಕಃ ॥
ಉಪಚರ್ಯಾ ಚಿಕಿತ್ಸಾ ಸ್ಯಾನ್ನಿದಾನಂ ಹೇತುರುಚ್ಯತೇ ॥ ೪೫೮ ॥

೬೧೩ – ಜಾಂಗುಳಿಕೋ ವಿಷಭಿಷಕ್ ವ್ಯಾಳ(3) ಗ್ರಾಹ್ಯಾಹಿ ತುಂಡಿಕಃ ॥
ಭೈಷಜ್ಯಂ ಭೇಷಜಂ ಜಾಯುರಗದ ಸ್ತಂತ್ರಮೌಷಧಂ ॥ ೪೫೯ ॥

೬೧೪ – ಸಿಂಧೂತ್ಥಂ ಮಣಿ(4) ಮಂಥಂ ಚ ಸೈಂಧವಂ ಲವಣೋತ್ತಮಂ ॥
ಕೃಷ್ಣೋಪಕುಲ್ಯಾ ವೈದೇಹೀ ಮಾ(ಗ)ಧೀ ಪಿಪ್ಪಲೀ ಕಣಾ ॥ ೪೬೦ ॥

ಟೀ ॥ ಅಂಧಃ, ಅನೇಡಮೂಕಃ–ಈ ೨ **ಕುರುಡಂ.** ಏಡಃ, ಬಧಿರಃ–ಈ ೨ **ಕಿವುಡಂ.** ಜಡಃ, ಕಡಃ—ಈ ೨ **ಮೂಗಂ.** ಕಳಮೂಕನೆಂಬುವಂ **ಮೂಗನುಂ ಕಿವುಡನುಂ** ॥ ೪೫೫ ॥

ಟೀ ॥ ಖಂಜಃ, ಪಂಗುಃ, ಶ್ರೋಣಿಃ—ಈ ೩ **ಪೆಟವಂ.**
ಕುಣಿಯೆಂಬವಂ **ಕೆಯ್ಯಿಲ್ಲದವಂ.** ತುಂದಿಯೆಂಬವಂ **ಬಗುಡಂ.**
ವಿಗ್ರ ಎಂಬುದು **ಮೂಗಿಲ್ಲದವಂ** ॥ ೪೫೬ ॥

ಟೀ ॥ ಗಡುಳಃ, ಕುಬ್ಜಃ – ಈ ೨ **ಗುಜ್ಜಂ.**
ಕೆಯ್ಕಾಲ್ ಕಿಱಿಯುವನಂ ವಾಮನನೆಂಬುದು.
ಕಿಱಿಯೊಡಲವನಂ ಪೃಶ್ನಿಯೆಂಬುದು, ಕಿರಾತನುಂ ಎಂಬುದು ॥ ೪೫೭ ॥

ಟೀ ॥ ಆಯುರ್ವೇದೀ, ಭಿಷಕ್, ವೈದ್ಯಃ, ದೋಷಜ್ಞಃ, ಚಿಕಿತ್ಸಕಃ—ಈ ೫ **ವೈದ್ಯಂ.**
ಉಪಚರ್ಯಾ, ಚಿಕಿತ್ಸಾ— ಈ ೨ **ವೈದ್ಯಂ ಮಾಡುಹ.**
ನಿದಾನವೆಂಬುದು **ಕುತ್ತದ ಕಾರಣಂ** ॥ ೪೫೮ ॥

ಟೀ ॥ ಜಾಂಗುಳಿಕಃ, ವಿಷಭಿಷಕ್ – ಈ ೨ **ಗಾರುಡಿಗಂ.**
ವ್ಯಾಳಗ್ರಾಹೀ, ಆಹಿತುಂಡಿಕಃ—ಈ ೨ **ಹಾವಡಿಗಂ.**
ಭೈಷಜ್ಯಂ, ಭೇಷಜಂ, ಜಾಯುಃ, ಅಗದಂ, ತಂತ್ರಂ, ಔಷಧಂ- ಈ ೬ **ಮರ್ದು** ॥ ೪೫೯ ॥

ಟೀ ॥ ಸಿಂಧೂತ್ಥಂ, ಮಾಣಿಮಂಥಂ, ಸೈಂಧವಂ, ಲವಣೋತ್ತಮಂ–ಈ ೪ **ಸೈಂಧವಂ.**
ಕೃಷ್ಣಾ, ಉಪಕುಲ್ಯಾ, ವೈದೇಹೀ, ಮಾಗಧೀ, ಪಿಪ್ಪಲೀ, ಕಣಾ- ಈ ೬ **ಹಿಪ್ಪಲಿ** ॥ ೪೬೦ ॥

---

(1) ಕಲ್ಲಮೂಕಸ್ತ್ವ ವಾಕ್ಛ್ರುತಿಃ (2) ಸ್ವಲ್ಪ (3) ಗ್ರಾಹೋಽಹಿ (4) ಮಯಿಂಚ, ಮಾಣಿಮಂಥಂ,

೬೧೫ – ಶುಂಠೀ ನಾಗರಮುಕ್ತಂ ಮಹೌಷಧಂ ವಿಶ್ವಭೇಷಜಂ ವಿಶ್ವಾ ॥
ಮಧುಕಂ ಯಷ್ಟಿ ಮಧು ಸ್ಯಾದಮೃತಾ ವತ್ಸಾದನೀ ಗುಳೂಚೀ ಚ ॥ ೪೬೧ ॥
೬೧೬ – ಆರ್ದ್ರಕಂ ಶೃಂಗಬೇರಂ ಸ್ಯಾದಜಾಜೀಜೀರಕಃ ಸ್ಮೃತಃ ॥
(1) ವೇಲನಂ ಮರಿಚಂ ಪ್ರೋಕ್ತಮೂಷಣಂ ಚ ಮನೀಷಿಭಿಃ ॥ ೪೬೨ ॥
೬೧೭—ಸೌವರ್ಚಲಸ್ತು ರುಚಕಃ ಕುಸ್ತುಂಬುರು ಚ ಧಾನ್ಯಕಂ ॥
ತ್ರಿಕಟು ತ್ರ್ಯೂಷಣಂ(2) ವ್ಯೋಷಂ ಹಿಂಗು ರಾಮಠ(3) ಮುಚ್ಯತೇ ॥ ೪೬೩ ॥
೬೧೮—ಹರೀತಕ್ಯಭಯಾ ಪಥ್ಯಾ ಧಾತ್ರೀ ಚಾಮಳಕೀ ಶಿವಾ ॥
ಕ(ರಿ)ಲಿರಕ್ಷೋ ವಿಭೀತಃ ಸ್ಯಾತ್ತ್ರಿತಯಂ ತ್ರಿಫಳಾ ಸ್ಮೃತಾ ॥ ೪೬೪ ॥
೬೧೯—ಏಡಗಜಃ (4)ಪ್ರಪುನಾಟೋ ದದ್ರುಘ್ನಶ್ಚಕ್ರಮರ್ದನಃ(5) ಪ್ರೋಕ್ತಃ ॥
ಶತಮೂಲಿಕಾತ್ವ ಭೀರುರ್ನಿದಿಗ್ಧಿಕಾ(6) ಕಂಟಕಾರಿಕಾ ವ್ಯಾಘ್ರೀ ॥ ೪೬೫ ॥
೬೨೦—ಪುರಾಖ್ಯೋ ಮಹಿಷಾಕ್ಷಶ್ಚ ಗುಗ್ಗು(ಳ)ಳುಸ್ಸ್ಯಾತ್ಫಳಂಕಷಃ ॥
ಮಹಾರಜತ(ನ)ಮಿಚ್ಛಂತಿ ಕುಸುಂಭಂ ಚ ಸುಮೇಧಸಃ ॥ ೪೬೬ ॥

ಟೀ ॥ ಶುಂಠೀ, ನಾಗರಂ, ಮಹೌಷಧಂ, ವಿಶ್ವಭೇಷಜಂ, ವಿಶ್ವಾ— ಈ ೫ **ಶುಂಠಿ.**
ಮಧುಕಂ, ಯಷ್ಟಿಮಧುಕಃ– ಈ ೨ **ಯಷ್ಟಿಮಧುಕಂ.**
ಅಮೃತಾ, ವತ್ಸಾದನೀ, ಗುಳೂಚೀ– ಈ ೩ **ಅಮರ್ದುವಳ್ಳಿ** ॥ ೪೬೧ ॥
ಟೀ ॥ ಆದ್ರಕಂ, ಶೃಂಗಬೇರಂ– ಈ ೨ **ಅಲ್ಲದ ಕೊಂಬು.**
ಅಜಾಜೀ, ಜೀರಕಃ— ಈ ೨ **ಜೀರಗೆ.**
ವೇಲನಂ, ಮರಿಚಂ, ಊಷಣಂ— ಈ (೩) ೨ **ಮೆಣ(ಲ)ಸು** ॥ ೪೬೨ ॥
ಟೀ ॥ ಸೌವರ್ಚಳಃ, ರುಚಕಃ— ಈ ೨ **ಸೌವರ್ಚಳಂ.**
ಕುಸ್ತುಂಬುರು, ಧಾನ್ಯಕಂ— ಈ ೨ **ಕೊತ್ತುಂಬರಿ.**
ತ್ರಿಕಟು, ತ್ರ್ಯೂಷಣಂ, ವ್ಯೋಷಂ – ಈ ೩ **ತ್ರಿಕಟುಕಂ.**
ಹಿಂಗುಃ, ರಾಮಠಂ– ಈ ೨ **ಹಿಂಗು** ॥ ೪೬೩ ॥
ಟೀ ॥ ಹರೀತಕೀ, ಅಭಯಾ, ಪಥ್ಯಾ – ಈ ೩ **ಅಣಿಲೆ.**
ಧಾತ್ರೀ, ಆಮಳಕೀ, ಶಿವಾ— ಈ ೩ **ನೆಲ್ಲಿ.**
ಕಲಿಃ, ಅಕ್ಷಃ ವಿಭೀತಃ– ಈ ೩ **ತಾಱಿ.**
ಈ ಮೂಱುಂ ಕೂಡಿದೊಡೆ ತ್ರಿಫಳಾಯೆಂಬುದು ॥ ೪೬೪ ॥
ಟೀ ॥ ಏಡಗಜಃ, ಪ್ರಪುನಾಟಃ, ದದ್ರುಘ್ನಃ, ಚಕ್ರಮರ್ದನಃ– ಈ ೪ **ತಗ(ಚೆ)ಟೆ.**
ಶತಮೂಳಿಕಾ, ಅಭೀರುಃ– ಈ ೨ **ಆಸಡಿ.**
ನಿದಿಗ್ಧಿಕಾ, ಕಂಟಕಾರಿಕಾ, ವ್ಯಾಘ್ರೀ— ಈ ೩ **ನೆಲಗುಳ್ಳಂ** ॥ ೪೬೫ ॥
ಟೀ ॥ ಪುರಾಖ್ಯಂ, ಮಹಿಷಾಕ್ಷಃ, ಗುಗ್ಗುಳಃ, ಫಲಂಕಷಃ— ಈ ೪ **ಗುಗ್ಗುಳಂ.**
ಮಹಾರಜತಂ, ಕುಸುಂಭಂ— ಈ ೨ **ಕುಸುಂಬೆ** ॥ ೪೬೬ ॥

---

(1) ವೇಲ್ಲಜಂ (2) ವ್ಯೋಷಾ. (3) ರಾಮಠ ಉಚ್ಯತೇ. (4) ಪ್ರಪುನ್ನಾಟೋ (5) ಮರ್ದಕಃ ಪ್ರೋಕ್ತಃ (6) ಕಾರಿಕಾ ತಥಾ ವ್ಯಾಘ್ರೀ

೬೨೧—ಹಿಂಗುಳಂ ಹಂಸಪಾದಂ ಚ ಕುರುವಿಂದಂ (1)ನಿಗದ್ಯತೇ ॥
ಸಾರಘಂ ಮಾಕ್ಷಿಕಂ ಕ್ಷೌದ್ರಂ ಮಧು(2) ಪುಷ್ಪರಸಸ್ತಥಾ ॥ ೪೬೭ ॥

೬೨೨—ಉಶೀರಂ ವೆ(ವಿ)ೀರಣೀಮೂಲಂ ಹ್ರೀಬೇರಂ ಬಾಳಕಂ ಜಳಂ(3) ॥
ಮುಸ್ತಕಃ ಕುರುವಿಂದ ಸ್ಸ್ಯಾತ್ (4)ಭದ್ರಾ ಚ ಜಳದಾಹ್ವಯಃ ॥ ೪೬೮ ॥

ಇತಿ

ಭಟ್ಟಹಲಾಯುಧ ವಿರಚಿತಾಯಾಂ

ಅಭಿಧಾನರತ್ನಮಾಲಾಯಾಂ

ಭೂಮಿಕಾಂಡಂ ದ್ವಿತೀಯಂ

ಸಮಾಪ್ತಂ.

ಟೀ ॥ ಹಿಂಗುಳಂ, ಹಂಸಪಾದಂ, ಕುರುವಿಂದಂ—ಈ ೩ **ಇಂಗುಲಿಕಂ.**
ಸಾರಘಂ, ಮಾಕ್ಷಿಕಂ, ಕ್ಷೌದ್ರಂ, ಮಧು, ಪುಷ್ಪರಸಃ—ಈ ೫ **ಜೇನತುಪ್ಪಂ** ॥ ೪೬೭ ॥

ಟೀ ॥ ಉಶೀರಂ, ವೇರಣೀಮೂಲಂ—ಈ ೨ **ಬಿಳಿಯ ಬಾಳಂ.**
ಹ್ರೀಬೇರಂ, ಬಾಳಕಂ, ಜಳಂ—ಈ ೩ **ಕರಿಯ ಬಾಳಂ.**
ಮುಸ್ತಕಃ, ಕುರುವಿಂದಃ, ಭದ್ರಾ, ಜಳದಃ—ಈ ೪ **ಭದ್ರಮುಸ್ತೆ** ॥ ೪೬೮ ॥

ಇದು

ನಾಗವರ್ಮವಿರಚಿತಮಪ್ಪ ಹಲಾಯುಧ ಟೀಕಿನೊಳ್

ಭೂಮಿಕಾಂಡಂ ದ್ವಿತೀಯಂ

ಸಮಾಪ್ತಂ

ಓಂ ಗುರುಭ್ಯೋ ನಮಃ

---

(1) ಪ್ರಚಕ್ಷತೇ (2) ಪುಷ್ಕರಸಂ (3) ಚಳಂ (4) ಗುಂದ್ರಾ.

॥ ಶ್ರೀ ॥

೩. ಪಾತಾಳಕಾಂಡಂ

೬೨೩—ಬಡವಾಮುಖಂ ಪಾತಾಳಂ ವೈರೋಚನ ನಿಕೇತನಂ ॥
ತಥಾಧೋಭುವನಂ ಪ್ರೋಕ್ತಂ ನಾಗಲೋಕೋ ರಸಾತಳಂ ॥ ೧ ॥

೬೨೪—ನಿಮ್ನಮಗಾಧೋ ಗರ್ತಃ ಶ್ವಭ್ರಂ ಸುಷಿರಂ (1)ತಥಾ ಬಿಲಂ ವಿವರಂ ॥
ಅಂತರ(2) ಮವಟಂ ಛಿದ್ರಂ ನಿರ್ವ್ಯಥನಂ ರಂಧ್ರರೋಕ ಕುಹರದರಾಃ ॥ ೨ ॥

೬೨೫—ನಿರಯೋ ದುರ್ಗತಿಶ್ಚೈವ ನರಕ(ಃ)ಂ ಪರಿಕೀರ್ತಿತಂ(ಃ) ॥
ನಾರಕಾ ಜಂತವಃ ಪ್ರೇತಾ ಯಾತ್ಯಾಶ್ಚೈವಾತಿವಾಹಿಕಾಃ ॥ ೩ ॥

೬೨೬—ಯಾತನಾ ಕಾರಣಾ ಪ್ರೋಕ್ತಾ ಕಾರಾ ಬಂಧನಮುಚ್ಯತೇ ॥
ಆಬಾಧಾ ವೇದನಾ ದುಃಖ (3)ಮಾರ್ತಿಃ ಪೀಡಾ ವ್ಯಥಾ ತಥಾ ॥ ೪ ॥

೬೨೭—ವೃಜಿನಂ ದುರಿತಂ ದುಷ್ಕೃತಮಘಮಂಹಃ ಕಿಲ್ಬಿಷಂ ತಮಃ ಕಲ್ಕಂ ॥
ಏನಃ(4) ಕಲ್ಮಷಮಶುಭಂ ಪಾಪಂ ಸ್ಯಾತ್ಪಾತಕಂ ಪಾಪ್ಮಾ ॥ ೫ ॥

೬೨೮—ನಿಧನಂ ನಾಶೋ ಮೃತ್ಯುಃ ಮರಣಂ ಪಂಚತ್ವಮತ್ಯಯಃ ಕಾಲಃ ॥
ಸಂಸ್ಥಾ ಸ್ಯಾ(5) ನ್ನಿಷ್ಠಾಂತೋ ನಿಮಿಾಲನಂ ದೀರ್ಘನಿದ್ರಾ ಚ ॥ ೬ ॥

ಟೀ ॥ ಬಡಬಾಮುಖಂ, ಪಾತಾಳಂ, ವೈರೋಚನನಿಕೇತನಂ, ಅಧೋಭುವನಂ, ನಾಗಲೋಕಂ, ರಸಾತಳಂ—ಈ ೬ **ಪಾತಾಳಂ** ॥ ೧ ॥

ಟೀ ॥ ನಿಮ್ನಂ, ಅಗಾಧಂ, ಗರ್ತಃ, ಶ್ವಭ್ರಂ, ಸುಷಿರಂ, ಬಿಲಂ, ವಿವರಂ, ಅಂತರಂ, ಅವಟಂ, ಛಿದ್ರಂ, ನಿರ್ವ್ಯಥನಂ, ರಂಧ್ರಃ, ರೋಕಃ, ಕುಹರಃ, ದರಃ—ಈ ೧೫ **ಕುೞಿ** ॥ ೨ ॥

ಟೀ ॥ ನಿರಯಃ, ದುರ್ಗತಿಃ—ಈ ೨ **ನರಕಂ.**
ನಾರಕಾಃ, ಪ್ರೇತಾಃ, ಯಾತ್ಯಾಃ, ಆತಿವಾಹಿಕಾಃ—ಈ ೪ **ನಾರಕರ್** ॥ ೩ ॥

ಟೀ ॥ ಯಾತನಾ, ಕಾರಣಾ—ಈ ೨ **ದಂಡಣೆ.**
ಕಾರಾಯೆಂಬುದು **ಸೆಱೆ.**
ಆಬಾಧಾ, ವೇದನಾ, ದುಃಖಂ, ಆರ್ತಿಃ, ಪೀಡಾ, ವ್ಯಥಾ—ಈ ೬ **ದುಃಖಂ** ॥ ೪ ॥

ಟೀ ॥ ವೃಜಿನಂ, ದುರಿತಂ, ದುಃಕೃ(ಷ್ಕೃ)ತಂ, ಅಘಂ, ಅಂಹಃ, ಕಿಲ್ಬಿಷಂ, ತಮಃ, ಕಲ್ಕಂ, ಏನಃ, ಕಲ್ಮಷಂ, ಅಶುಭಂ, ಪಾಪಂ, ಪಾಪ್ಮಾ, ಪಾತಕಂ—ಈ ೧೪ **ಪಾಪಂ** ॥ ೫ ॥

ಟೀ ॥ ನಿಧನಂ, ನಾಶಃ, ಮೃತ್ಯುಃ, ಮರಣಂ, ಪಂಚತ್ವಂ, ಅತ್ಯಯಃ, ಕಾಲಃ, ಸಂಸ್ಥಾ, ನಿಷ್ಠಾ, ಅಂತಃ, ನಿಮಿಾಳನಂ, ದೀರ್ಘನಿದ್ರಾ—ಈ ೧೨ **ಸಾವು** ॥ ೬ ॥

---

(1) ವಪಾ ಬಿಲಂ (2) ಮವರಂ, ವಮಟು (3) ಮರ್ತಿಃ (4) ಕಲ್ಮುಖ (5) ಸ್ಯಾದ್ವಿಷ್ಠ್ಯಾಂತೋ, ದಿಷ್ಟಾಂತೋ

೬೨೯—ಪರಾಸುರುಪಸಂಪನ್ನಃ ಪ್ರಮೀತಃ ಸಂಸ್ಥಿತೋ ಮೃತಃ ॥
ಪ್ರೇತಃ ಪರೇತಶ್ಚ ತಥಾ ಕುಣಪ(1) ಶ್ಯವ ಉಚ್ಯತೇ ॥ ೭ ॥
೬೩೦—ಕಬಂಧಃ ಕಥ್ಯತೇ ರುಂಡಃ ಕ್ಷತಮೀರ್ಮಮರುರ್ವ್ರಣಃ ॥
ಅಸೃಗ್ಧ(ರಾ)ರೋಽಜಿನಂ ಚರ್ಮ ಕೃತ್ತಿಸ್ತ್ವಕ್ಪರಿಕೀರ್ತಿತಾ ॥ ೮ ॥
೬೩೧—ಪಲಲಂ ಜಾಂಗಲಂ ಮಾಂಸಂ ಪಲಂ ಪಿಶಿತಮಾಮಿಷಂ ॥
ಕ್ರವ್ಯಂ (2) ತರಸಮೇಕಾರ್ಥಂ ವಿಸ್ರಂ ಸ್ಯಾದಾಮಗಂಧಿಕಂ ॥ ೯ ॥
೬೩೨—ಕ್ಷತಜಂ ಲೋಹಿತಮಸ್ರಂ ರುಧಿರಮಸೃಕ್ ಶೋಣಿತಂ ಚ ರಕ್ತಂ ಸ್ಯಾತ್॥
ಅಸ್ಥೀನಿ ಧಾತುಕೀಕಸಕುಲ್ಯಾನಿ ಭವಂತಿ ತುಲ್ಯಾನಿ ॥ ೧೦ ॥
೬೩೩—ಶರೀರಸ್ಯಾಸ್ಥಿ ಕಂಕಾಳಂ ತಥಾಸ್ಯಾದಸ್ಥಿಪಂಜರಂ ॥
ಶಿರಸೋಽಸ್ಥಿ ಕರೋಟಿಃ ಸ್ಯಾತ್ಕಪಾಲಂ ಶಕಲಂ ಚ ತತ್ ॥ ೧೧ ॥
೬೩೪—(3) ಶಾಖಾಸ್ಥಿ ನಳ(ಳಿ)ಕಂ ಪ್ರೋಕ್ತಂ ಪೃಷ್ಠಸ್ಯಾಸ್ಥಿ ಕಶೇರುಜ(ಕ)ಂ ॥
(4) ಕಕುಂದರಂ ಸ್ಥೂಲಶಿರಾ ಮ(ನ್ಮ)ಹಾಸ್ನಾಯುಶಿ(ಸಿ)ರಾ ಮತಾ ॥ ೧೨ ॥
೬೩೫—ಮಸ್ತಿಷ್ಕಂ ಮಸ್ತಕಸ್ನೇಹೋ ವಸಾ ಮೇದೋ ವಪಾ ಸ್ಮೃತಾ ॥
ಆ(ಅ)ಂತ್ರಂ(5) ಪುರೀತತ್ ಕಥಿತಂ ಕಾಲಕ(ಖ)ಂಡಂ ಯಕೃನ್ಮತಂ ॥ ೧೩ ॥

ಟೀ ॥ ಪರಾಸುಃ, ಉಪಸಂಪನ್ನಃ, ಪ್ರಮೀತಃ, ಸಂಸ್ಥಿತಃ, ಮೃತಃ—ಈ ೫ **ಸತ್ತಾತಂ.**
ಪ್ರೇತಃ, ಪರೇತಃ, ಕುಣಪಃ, ಶವಃ—ಈ ೪ **ಪೆ(ಹೆ)ಣಂ** ॥ ೭ ॥
ಟೀ ॥ ಕಬಂಧಃ, ರುಂಡಃ—ಈ ೨ **ಮುಂಡಂ.**
ಕ್ಷತಂ, ಈರ್ಮಂ—ಈ ೨ **ಏಱು.** ಅರುಃ, ವ್ರಣಃ—ಈ ೨ **ಪುಣ್ (ಹುಣ್ಣು).**
ಅಸೃಗ್ಧರಃ, ಅಜಿನಂ, ಚರ್ಮ್ಮ, ಕೃತ್ತಿಃ, ತ್ವಕ್—ಈ ೫ **ತೊವಲ್** ॥ ೮ ॥
ಟೀ ॥ ಪಲಲಂ, ಜಾಂಗಲಂ, ಮಾಂಸಂ, ಪಲಂ, ಪಿಶಿತಂ, ಆಮಿಷಂ, ಕ್ರವ್ಯಂ, ತರಸಂ, ಈ ೮ **ಮಾಂಸಂ. ನಾಱುವ ಮಾಂಸಂ** ವಿಸ್ರಂಯೆಂಬುದು ॥ ೯ ॥
ಟೀ ॥ ಕ್ಷತಜಂ, ಲೋಹಿತಂ, ಅಸ್ರಂ, ರುಧಿರಂ, ಅಸೃಕ್, ಶೋಣಿತಂ, ರಕ್ತಂ—ಈ ೭ **ನೆತ್ತರು.**
ಅಸ್ಥಿ, ಧಾತು, ಕೀಕಸಂ, ಕುಲ್ಯಂ—ಈ ೪ **ಎಲ್ವು** ॥ ೧೦ ॥
ಟೀ ॥ ಕಂಕಾಳಂ, ಅಸ್ಥಿಪಂಜರಂ—ಈ ೨ **ಒಡಲಯೆಲ್ವು.**
ತಲೆಯ ಕಪಾಲಂ ಕರೋಟಿಯೆಂಬುದು. ಕಪಾಲಮೆಂಬುದು **ತಲೆಯ ಸಿಪ್ಪು** ॥ ೧೧ ॥
ಟೀ ॥ **ಕೆಯ್ಯ ಕಾಲ ಎಲ್ವು** ನಳಕಯೆಂಬುದು. ಕಶೇರುವೆಂಬುದು **ನಟ್ಟೆಲ್ವು.**
ಕಕುಂದರಮೆಂಬುದು **ಕೊರಳ ಹೆಂನರ.**
ಸ್ಥೂಲಶಿರಾ, ಸ್ನಾಯುಶಿರಾ—ಈ ೨ **ಸೆರೆಯ ನರಂ** ॥ ೧೨ ॥
ಟೀ ॥ ಮಸ್ತಿಷ್ಕಮೆಂಬುದು **ತಲೆಯ ಮಿದುಳ್.** ವಪಾ, ಮೇದಃ, ವಸಾ—ಈ ೩ **ನೆಣಂ.**
ಆಂತ್ರಂ, ಪುರೀತತ್—ಈ ೨ **ಕರುಳ್.** ಯಕೃತ್ ಎಂಬುದು **ಕರ್ಗಡ?** ॥ ೧೩ ॥

---

(1) ಶವಮುಚ್ಯತೇ. (2) ತರಮುನೇಕಾರ್ಥಂ. (3) ಶಾಪಾಸ್ಥಿನಲಿನಂ (4) ಕಂಡರಾ ಸ್ಯಾನ್ಮಹಾಸ್ನಾಯುಸ್ಸ್ನಸಾ ಸ್ನಾಯುಃಶಿರಾ ಸ್ಮೃತಾ (5) ಪುರೀಷತ್

೬೩೬—(1)ವೃಕ್ಕಾ ಸ್ಯಾದಗ್ರಮಾಂಸಂ ತು ತಿಳಕಂ ಕ್ಲೋಮ ಕಥ್ಯತೇ ॥
ಕೃಮಿಃ ಕೀಟಶ್ಚ ನೀಲಂಗುಃ (2)ಫುಲ್ಲಕಶ್ಚ ಸಮಃ ಸ್ಮೃತಃ ॥ ೧೪ ॥
೬೩೭—(3) ವರ್ಚ ಉತ್ಸರ್ಗ ಉಚ್ಚಾರೋ ವರ್ಚಸ್ಕೋಽವಸ್ಕರಃ ಶಕೃತ್ ॥
ಗೂಥಂ (4)ಕಿಟ್ಟಂ ಚ ವಿಡ್ವಿಷ್ಠಾ ಪುರೀಷಂ ಶಮಲಂ ಮಲಂ ॥ ೧೫ ॥
೬೩೮—ಶುಕ್ರಂ ವೀರ್ಯಂ ಬಲಂ ಬೀಜಮಿಂದ್ರಿಯಂ ರೇತ ಉಚ್ಯತೇ ॥
ಶ್ಮಶಾನಂ ಸ್ಯಾತ್ಪಿತೃವನಂ ಚಿತಾ ಚಿತ್ಯಾ ಚ ಕಥ್ಯತೇ ॥ ೧೬ ॥
೬೩೯—ಕ್ರಂದಿತಂ ರುದಿತಂ ಪ್ರೋಕ್ತಂ ವಿಲಾಪಃ ಪರಿದೇವನಂ ॥
ಅಪಸ್ನಾನಂ ಮೃತಸ್ನಾನಂ ನಿವಾಪಃ ಪಿತೃತರ್ಪಣಂ ॥ ೧೭ ॥
೬೪೦—*ವಿಷಧರದಂದಶೂಕ ಪವನಾಶನ ಸರ್ಪಸರೀಸೃಪೋರಗವ್ಯಾ(ಳ)ಃ ।
ಭುಜಗಭುಜಂಗ(ಮ) ಕುಂಭೀನಸ ಪನ್ನಗನಾಗ ಭೋಗಿನಃ ॥
ಅಹಿಫ(5) ಣಭೃತ್ ಪೃಥಾಕು ಕಾಕೋದರ ಕಂಚುಕಿ ಚಕ್ರಿ ಗೂಢಪಾತ್ ।
ದ್ವಿರಸನ ಕಾದ್ರವೇಯ ದರ್ವೀಕರ ದೃಕ್ಛ್ರುತಯೋ ಭುಜಂಗಮಾಃ ॥ ೧೮ ॥
೬೪೧—ಆಶೀವಿಷೊ(ಶೋ) ದೀರ್ಘಪೃಷ್ಠಃ ಕುಂಡಲೀ ಜಿಹ್ಮಗಃ ಸ್ಮೃತಃ ॥
ಫಣಃ ಫಣಾ ಫಟಾ ಪ್ರೋಕ್ತಾ ವಿಷಂ ಸ್ಯಾದ್ಗರಳಂ ಗರಃ ॥ ೧೯ ॥

ಟೀ ॥ ವೃಕ್ಕಾ ಎಂಬುದು ಬಿಕ್ಕು. ತಿಲಕಂ, ಕ್ಲೋಮಂ—ಈ ೨ **ಕಾರೆಳ್ಳು [=ಕರುಳು? ಕೋಶ]**
ಕೃಮಿಃ, ಕೀಟಃ, ನೀಲಂಗುಃ, ಫುಲ್ಲಕಃ—ಈ ೪ **ಪು(ಹು)ೞು** ॥ ೧೪ ॥
ಟೀ ॥ ವರ್ಚಃ, ಉತ್ಸರ್ಗಃ, ಉಚ್ಚಾರಃ, ವರ್ಚಸ್ಕಃ, ಅಪಸ್ಕರಃ, ಶಕೃತ್, ಗೂಥಂ, ಕಿಟ್ಟಂ, ವಿಟ್, ವಿಷ್ಠಾ, ಪುರೀಷಂ, ಶಮಲಂ, ಮಲಂ—ಈ ೧೩ **ವಿಷ್ಠೆ** ॥ ೧೫ ॥
ಟೀ ॥ ಶುಕ್ಲಂ, ವೀರ್ಯಂ, ಬಲಂ, ಬೀಜಂ, ಇಂದ್ರಿಯಂ, ರೇತಃ—ಈ ೬ **ಇಂದ್ರಿಯಂ.**
ಶ್ಮಶಾನಂ, ಪಿತೃವನಂ—ಈ ೨ **ಮಸಣಗಾಡು.** ಚಿತಾ, ಚಿತ್ಯಾ—ಈ ೨ **ಸಿದಗೆ** ॥ ೧೬ ॥
ಟೀ ॥ ಕ್ರಂದಿತಂ, ರುದಿತಂ, ವಿಲಾಪಃ, ಪರಿದೇವನಂ—ಈ ೪ **ಅೞ್ಕೆ.**
ಅಪಸ್ನಾನಂ, ಮೃತಸ್ನಾನಂ—ಈ ೨ **ನೀರಿೞಿಹ.?**
ನಿವಾಪಃ, ಪಿತೃತರ್ಪಣಂ—ಈ ೨ **ನೀರ್ಗುಡುವುದು** ॥ ೧೭ ॥
ಟೀ ॥ ವಿಷಧರಃ, ದಂದಶೂಕಃ, ಪವನಾಶನಃ, ಸರ್ಪಃ, ಸರೀಸೃಪಃ, ಉರಗಃ, ವ್ಯಾಳಃ, ಭುಜಗಃ, ಭುಜಂಗ(ಮ)ಃ, ಕುಂಭೀನಸಃ, ಪನ್ನಗಃ, ನಾಗಃ, ಭೋಗೀ, ಅಹಿಃ, ಫಣಭೃತ್, ಪೃಥಾಕುಃ, ಕಾಕೋದರಃ, ಕಂಚುಕೀ, ಚಕ್ರೀ, ಗೂಢಪಾತ್, ದ್ವಿರಸನಃ, ಕಾದ್ರವೇಯಃ, ದರ್ವೀಕರಃ, ದೃಕ್ಛ್ರುತಿಃ, ಭುಜಂಗಮಃ—ಈ ೨೫ **ಪಾವಿನ ಪೆಸರ್** ॥ ೧೮ ॥
ಟೀ ॥ ಆಶೀವಿಷಃ, ದೀರ್ಘಪೃಷ್ಠಃ—ಈ ೨ **ನಿಮಿರ್ದ ಪಾ(ಹಾ)ವು.**
ಕುಂಡಲೀ, ಜಿಹ್ಮಗಃ—ಈ ೨ **ತೆಕ್ಕೆಗಟ್ಟಿದ ಹಾವು.**
ಫಣಃ, ಫಣಾ, ಫಟಾ—ಈ ೩ **ಹಾವಿನ ಹೆಡೆ.**
ವಿಷಂ, ಗರಳಂ, ಗರಃ—ಈ ೩ **ಹಾವಿನ ವಿಷಂ** ॥ ೧೯ ॥

---

(1) ಬು(ಕ್ಕ)ಷ್ಕಂ (2) ಫುಲಕ (3) ಉಚ್ಯತೇ ವರ್ಚ ಉಚ್ಚಾರೋ (4) ಕೀಟಂ *ಈ ವೃತ್ತವು ಮಾತ್ರಾವೃತ್ತವೆಂದು ತೋರುವುದು. ಲಕ್ಷಣವು ವಿಚಾರಾರ್ಹವಾದುದು. (5) ಫಣಿನೃತ್ಯ ದಕುಕೋಕೋದರಂ.

೬೪೨—ಅಹೇಃ ಶರೀರಂ ಭೋಗಃ ಸ್ಯಾದಾಶೀರ್ದಂಷ್ಟ್ರಾಭಿಧೀಯತೇ ॥
(1)ಭವೇತ್ರಿಲಿಂಗೋ ಗೋನಾಸೋ ವಾಹಸೋಽಜಗರಃ ಶಯುಃ ॥ ೨೦ ॥

೬೪೩—ಅಲಗರ್ದೋ ಜಲವ್ಯಾಳೋ ರಾಜಿಲೋ (2)ಡುಂಡುಭಃ ಸ್ಮೃತಃ ॥
ಅಹೀರಣೀ ಸ್ಯಾದ್ದ್ವಿಮುಖೋ ರಾಜಸರ್ಪಶ್ಚ ಸರ್ಪಭುಕ್ ॥ ೨೧ ॥

೬೪೪—ನಿರ್ಲಯನೀ ನಿರ್ಮೋಕಂ ಕಂಚುಕಮುಕ್ತಾ ಭುಜಂಗಮುಕ್ತಾ ತ್ವಕ್ ॥
(3)ವಮ್ರಿಕೂಟಂ ನಾಕುರ್ವಲ್ಮೀಕೋ ವಾಮಲೂರುಶ್ಚ ॥ ೨೨ ॥

೬೪೫—ಉಪಜಿಹ್ವೋಪದೀಕಾ ಚ ವಮ್ರಿಸ್ಸ್ಯಾದುಪದೇಹಿಕಾ ॥
ಅಳಂ ವೃಶ್ಚಿಕಲಾಂಗೂಲಂ ದ್ರುತ ಆಲಿಶ್ಚ ವೃಶ್ಚಿಕಃ ॥ ೨೩ ॥

೬೪೬—ಬ್ರಹ್ಮಪುತ್ರಃ ಶೌಲ್ಕಿ(ಕ್ಲಿ)ಕೇಯೋ ದಾರದಶ್ಚ ಪ್ರದೀಪನಃ ॥
ರಸಃ ಸೌರಾಷ್ಟ್ರ(ಷ್ಟ್ರಿ)ಕಃ ಕ್ಷ್ವೇಡಃ ತೀಕ್ಷ್ಣಶ್ಚ ವಿಷ ಉಚ್ಯತೇ ॥ ೨೪ ॥

೬೪೭—ಶೃಂಗಿಕೋ ವತ್ಸನಾಗ(ಭ)ಸ್ಸ್ಯಾತ್ ಕಾಳಕೂಟೋ ಹಳಾಹಳಃ ॥
(4)ಕಾಕೋಟೋ ವಿಸ್ಫುಲಿಂಗಶ್ಚ ತದ್ಭೇದಾಸ್ಸ್ಯುರನೇಕಧಾ ॥ ೨೫ ॥

ಟೀ ॥ ಭೋಗವೆಂಬುದು **ಹಾವಿನ ಒಡಲ್.** ಆಶೀಃ, ದಂಷ್ಟ್ರಾ—ಈ ೨ **ಹಾವಿನ ದಾಡೆ.** ತ್ರಿಲಿಂಗಃ, ಗೋನಾಸಃ, ವಾಹಸಃ, ಅಜಗರಃ, ಶಯುಃ—ಈ ೫ **ಪೆರ್ವಾವು (ಹೆಬ್ಬಾವು)** ॥ ೨೦ ॥

ಟೀ ॥ ಅಲಗರ್ದಃ, ಜಳವ್ಯಾಳಃ—ಈ ೨ **ನೀರ್ವಾವು.**
ರಾಜಿಳಃ, ಡುಂಡುಭಃ—ಈ ೨ **ಒಳ್ಳೆ.**
ಅಹೀರಣಿಯೆಂಬುದು **ಇರ್ತಲೆಗುಯ್ಯ.**
ರಾಜಸರ್ಪಃ, ಸರ್ಪಭುಕ್—ಈ ೨ **ಅರವಾ(ಹಾ)ವು** ॥ ೨೧ ॥

ಟೀ ॥ ನಿರ್ಲಯನೀ, ನಿರ್ಮೋಕಂ, ಕಂಚುಕಂ—ಈ ೩ **ಹಾವಿನ ಹೆರೆ.**
ವಮ್ರಿಕೂಟಂ, ನಾಕುಃ, ವಲ್ಮೀಕಃ, ವಾಮಲೂರಃ—ಈ ೪ **ಹುತ್ತು** ॥ ೨೨ ॥

ಟೀ ॥ ಉಪಜಿಹ್ವಾ, ಉಪದೀಕಾ, ವಮ್ರಿ, ಉಪದೇಹಿಕಾ—ಈ ೪ **ಉರ್ಚಿದ ಹೆರೆ.**
ಅಳಂ, ವೃಶ್ಚಿಕಲಾಂಗೂಳಂ—ಈ ೨ **ತೇಟಿ(ಚೇಳ)ಬಾಲಂ.**
ದ್ರುತಃ, ಆಳಿಃ, ವೃಶ್ಚಿಕಃ—ಈ ೩ **ತೇಟ್ (ಚೇಳು)** ॥ ೨೩ ॥

ಟೀ ॥ ಬ್ರಹ್ಮಪುತ್ರಃ, ಶೌ(ಕ್ಲಿ)ಲ್ಕಿಕೇಯಃ, ದಾರದಃ, ಪ್ರದೀಪನಃ, ರಸಃ, ಸೌರಾ(ಷ್ಟ್ರಿ)ಷ್ಟ್ರಕಃ, ಕ್ಷ್ವೇಡಃ, ತೀಕ್ಷ್ಣಃ, ವಿಷಂ—ಈ ೯ **ವಿಷಂ** ॥ ೨೪ ॥

ಟೀ ॥ ಶೃಂಗಿಕಃ, ವತ್ಸನಾಭ(ಗ)ಃ, ಕಾಳಕೂಟಃ, ಹಳಾಹಳಃ, ಕಾಕೋ(ಲ)ಟಃ, ವಿಸ್ಫುಲಿಂಗಃ—ಈ ೬ **ವಿಷಭೇದಂಗಳ್** ॥ ೨೫ ॥

---

(1) ಭವೇತ್ತ್ರಿಲಿತ್ಸೋ. ಭವೇತ್ತ್ರಿಲಿಪ್ಸೋ. (2) ಡುಂಡುಭ (3) ವಲ್ಮೀ, ವಮ್ರಿಃ (4) ಕಾಕೋಲೋ

೬೪೮—ಆಪಸ್ತೋಯಂ ಘನರಸಪಯಃ ಪುಷ್ಕರಂ ಮೇಘಪುಷ್ಪಂ ।
ಕಂ ಪಾನೀಯಂ ಸಲಿಲಮುದಕಂ ವಾರಿ ವಾಃ ಶಂಬರಂ ಚ ॥
ಅರ್ಣಃ ಪಾಥಃ ಕುಶಜಲವನಂ ಕ್ಷೀರಮಂಭೋಽಂಬು ನೀರಂ ।
(1) ಪ್ರಾಜ್ಞೈರುಕ್ತಂ ಭುವನಮಮೃತಂ(2) ಜೀವನಂ ಜೀವನೀಯಂ ॥ ೨೬ ॥

೬೪೯—ಅತಳಸ್ಪರ್ಶಮಗಾಧಂ ಗಂಭೀರಂ ಸ್ಯಾದ್ಗಭೀರಮಸ್ಥಾಗ(ಘಂ) ॥
ನಾವಾ ತಾರ್ಯಂ(3) ನಾವ್ಯಂ ದ್ರಾಕ್‌ಭೃ(4) ತಕಂ ತತ್ಕ್ಷಣೋದ್ಧೃತಂ
[ತೋಯಂ ॥ ೨೭ ॥

೬೫೦—ಪ್ರಾಳೇಯಮವಶ್ಯಾಯಸ್ತುಹಿನಂ ಶಿಶಿರಂ ಹಿಮಂ ತುಷಾರಂ ಚ ॥
(5) ಮಿಹಿಕಾ ಸ್ಸ್ಯನ್ನೀಹಾರೋ ಹಿಮಸಂಘಾತೋ ಹಿಮಾನೀ ಚ ॥ ೨೮ ॥

೬೫೧—ರೋಮಾಂಚಃ ಪುಳಕಃ ಸ್ಯಾತ್ ಕಂಟಕ(6) ವಿಜೃಂಭಿತೋದ್ಗಮನ
[ಫುಲ್ಲ ಕಸನಾನಿ ॥
ರೋಮಾಂಚೋ ರೋಮವಿಕಾರೋ ರೋಮಹರ್ಷಸ್ಸಮಾನಾರ್ಥಾಃ ॥ ೨೯ ॥

೬೫೨—ರತ್ನಾಕರಸ್ಸರಸ್ವಾನುದಧಿರುದನ್ವಾನ್ ಸರಿತ್ಪತಿರಕೂಪಾರಃ ॥
ಪಾರಾವಾರಸ್ತೋಯಧಿರರ್ಣವಜಳರಾಶಿ ಸಾಗರಸಮುದ್ರಾ(ಃ)ಶ್ಚ ॥ ೩೦ ॥

ಟೀ ॥ ಆಪಃ(ಪ್), ತೋಯಂ, ಘನರಸಂ, ಪಯಃ, ಪುಷ್ಕರಂ, ಮೇಘಪುಷ್ಪಂ, ಕಂ, ಪಾನೀಯಂ, ಸಲಿಲಂ, ಉದಕಂ, ವಾರಿ, ವಾಃ, ಶಂಬರಂ, ಅರ್ಣಃ, ಪಾಥಃ, ಕುಶಂ, ಜಲಂ, ವನಂ, ಕ್ಷೀರಂ, ಅಂಭಃ, ಅಂಬು, ನೀರಂ, ಭುವನಂ, ಅಮೃತಂ, ಜೀವನಂ, ಜೀವನೀಯಂ—ಈ ೨೬ **ನೀರ್** ॥ ೨೬ ॥

ಟೀ ॥ (7)ಅತ(ಳಾ)ಳಃ, ಅಸ್ಪರ್ಶಂ, ಅಗಾಧಃ, ಗಂಭೀರಂ, ಗಭೀರಂ, ಅಸ್ಥಾಗಂ—ಈ ೫ **ಗುಂಡಿತು.**
ನಾವ್ಯಯೆಂಬುದು **ಹಱುಗಲಿಕ್ಕುವ ನೀರ್.**
ದ್ರಾಗ್ಭೃತಕಂಯೆಂಬುದು **ಅಗಟಿತ್ತಿ(8) ಯ ನೀರ್** ॥ ೨೭ ॥

ಟೀ ॥ ಪ್ರಾಳೇಯಂ, ಅವಶ್ಯಾಯಃ, ತುಹಿನಂ, ಶಿಶಿರಂ, ಹಿಮಂ, ತುಷಾರಂ, ಮಿಹಿಕಾ, ನೀಹಾರಃ—ಈ ೮ **ಮಂಜು.** ಹಿಮಾನೀಯೆಂಬುದು **ಹಿಮದ ಮೊತ್ತಂ** ॥ ೨೮ ॥

ಟೀ ॥ ರೋಮಾಂ(ಕ)ಚಃ, ಪುಳಕಃ, ಕಂಟಕಂ, ವಿಜೃಂಭಿತಂ, ಉದ್ಗಮನಂ, ಫುಲ್ಲಂ, ಕಸನಂ, ರೋಮಾಂಚಃ, ರೋಮವಿಕಾರಃ, ರೋಮಹರ್ಷಃ—ಈ ೧೦ **ರೋಮಾಂಚಂ** ॥ ೨೯ ॥

ಟೀ ॥ ರತ್ನಾಕರಃ, ಸರಸ್ವಾನ್, ಉದಧಿಃ, ಉದನ್ವಾನ್, ಸರಿತ್ಪತಿಃ, ಅಕೂಪಾರಃ, ಪಾರಾವಾರಃ, ತೋಯಧಿಃ, ಅರ್ಣವಃ, ಜಳರಾಶಿಃ, ಸಾಗರಃ, ಸಮುದ್ರಃ—ಈ ೧೨ **ಸಮುದ್ರಂ** ॥ ೩೦ ॥

---

(1) ಪ್ರೋಕ್ತಂ ಪ್ರಾಜ್ಞೈ (2) ಜೀವನೀಯಂ ದಕಂ ಚ (3) ಕಾರ್ಯಂ (4) ಭೃಶಕಂ. (5) ಮಹಿಕಾ (6) ಕಮುದ್ಧುಷಣ ಮುಲ್ಲ ಕಸನಂ ಚ ರೋಮೋದ್ಗಮರೋಮವಿಕಾರ ರೋಮಹರ್ಷಾಸ್ಸಮಾನಾರ್ಥಾಃ (7) ಅತಳ ಸ್ಪರ್ಶಂ—ಎಂದು ಒಂದೇ ಪದವಿರಬಹುದು. (8) ಅಗತ್ತ್ಯೆಯ.

೬೫೩ — ವೀಚೀ ಭಂಗಸ್ತರಂಗಃ ಸ್ಯಾತ್ತನ್ಮಹತ್ವೇ(1) ಚ ಕಥ್ಯತೇ ॥
ಊರ್ಮಿರುತ್ಕಲಿಕೋಲ್ಲೋಲಃ ಕಲ್ಲೋಳೋ ಲಹರೀ ತಥಾ ॥ ೩೧ ॥

೬೫೪ — ಮರ್ಯಾದಾ ಕೂಲದೇಶೋಽ(2)ಸ್ಯ ವೇಳಾ ವೃದ್ಧಿಶ್ಚ ವಾರಿಣಃ ॥
ವೇಳಾವನಂ ತು ವಿಜ್ಞೇಯಮುಪಕಂಠಸ್ಯ ಯದ್ವನಂ ॥ ೩೨ ॥

೬೫೫ — ಸಾಂಯಾತ್ರಿಕಃ ಪೋತವಣಿಕ್ ಪೋತಃ ಪ್ರವಹಣಂ ಸ್ಮೃತಂ ॥
ಕೂಪಕೋ ಗುಣವೃಕ್ಷಃ ಸ್ಯಾನ್ನಿರ್ಯಾಮಃ ಕರ್ಣಧಾರಕಃ ॥ ೩೩ ॥

೬೫೬ — ಅಂತರ್ಜಲಚರಂ ಸತ್ವಂ ಕ್ರೂರಂ ಯಾದೋಽಭಿಧೀಯತೇ ।
ಅವಹಾರಸ್ಸ್ಮೃತೋ ಗ್ರಾಹಃ ಕುಂಭೀರೋ ನಕ್ರ ಉಚ್ಯತೇ ॥
ಕಚ್ಛಪಃ ಕಮಠಃ ಕೂರ್ಮಃ ತದ್ಭಾರ್ಯಾ ಚ ಢುಳೀ ಮತಾ ॥ ೩೪ ॥

೬೫೭ — ವೈಸಾರಿಣೋ ವಿಸಾರಃ ಪೃಥುರೋಮಾ ಜಲಚರೋ ಝುಷೋ ಮತ್ಸ್ಯಃ ॥
ತಿಮಿರನಿಮಿಷಶ್ಚ ಮೀನಃ ಶಕಲೀ ಶಲ್ಕೀ ಚ ವಿಜ್ಞೇಯಃ ॥ ೩೫ ॥

೬೫೮ — ಸಹಸ್ರದಂಷ್ಟ್ರಃ ಪಾಠೀನಃ ಪ್ರೋಷ್ಠೀ ಚ ಶಫರೀ ಮತಾ ॥
ನಳಮೀನಶ್ಚಿಳಚಿಮಃ ಕುಳೀರಃ ಕರ್ಕಟೋ ಮತಃ ॥ ೩೬ ॥

ಟೀ ॥ ವೀಚೀ, ಭಂಗಃ, ತರಂಗಃ — ಈ ೩ **ತೆರೆ.**
ಊರ್ಮಿಃ, ಉತ್ಕಳಿಕಾ, ಉಲ್ಲೋಲಃ, ಕಲ್ಲೋಳಃ, ಲಹರೀ— ಈ ೫ **ಪೆರ್ದೆರೆ** ॥ ೩೧ ॥

ಟೀ ॥ ಮರ್ಯಾದಾ, ಕೂಲದೇಶಃ— ಈ ೨ ತಡಿ. ವೇಳಾಯೆಂಬುದು **ನೀರೊತ್ತು.**
ವೇಳಾವನಮೆಂಬುದು **ಸಮುದ್ರದ ತಡಿಯ ಬನಂ** ॥ ೩೨ ॥

ಟೀ ॥ ಸಾಂಯಾತ್ರಿಕಃ, ಪೋತವಣಿಕ್ — ಈ ೨ **ಭೈತ್ರದ ವ್ಯವಹಾರಿ.**
ಪೋತಃ, ಪ್ರವಹಣಃ— ಈ ೨ **ಭೈತ್ರಂ.** ಕೂಪಕಃ, ಗುಣವೃಕ್ಷಕಃ— ಈ ೨ **ಕೂವಕಂಬಂ.**
ನಿರ್ಯಾಮಃ, ಕರ್ಣಧಾರಕಃ— ಈ ೨ **ಕೂವಕಂಬಿಗಂ** ॥ ೩೩ ॥

ಟೀ ॥ **ಸಮುದ್ರದೊಳಗಣ ಕ್ರೂರಸತ್ವಂಗಳುಮಂ** ಯಾದಃಯೆಂಬುದು.
ಅವಹಾರಃ, ಗ್ರಾಹಃ— ಈ ೨ **ನೆಗಳು.** ಕುಂಭೀರಃ, ನಕ್ರಃ— ಈ ೨ **ಮೊಸಳೆ.**
ಕಚ್ಛಪಃ, ಕಮಠಃ, ಕೂರ್ಮಃ— ಈ ೩ **ಆವೆ.**
ಢುಳಿಯೆಂಬುದು **ಹೆಣ್ಣಾವೆ.** ॥ ೩೪ ॥

ಟೀ ॥ ವೈಸಾರಿಣಃ, ವಿಸಾರಃ, ಪೃಥುರೋಮಾ, ಜಲಚರಃ, ಝುಷಃ, ಮತ್ಸ್ಯಃ, ತಿಮಿಃ, ಅನಿಮಿಷಃ, ಮೀನಃ, ಶಕಲೀ, ಶಲ್ಕೀ, ಸಹಸ್ರದಂಷ್ಟ್ರಃ, ಪಾಠೀನಃ — ಈ ೧೩ **ಮೀನ್.**
ಪ್ರೋಷ್ಠಾ, ಶಫರೀ— ಈ ೨ **ಪೆ(ಹೆ)ಣ್ ಮೀನ್.**
ನಳಮೀನಃ, ಚಿಳಿಚಿಮಃ — ಈ ೨ **ಕಿಱುಮೀನ್.**
ಕುಳೀರಃ, ಕರ್ಕಟಕಃ— ಈ ೨ **ಎಸಡಿ.** ॥ ೩೫–೩೬ ॥

(1) ಸ್ಯಾತ್ತನ್ಮಾಹ (2) ದೇಶಸ್ಸ್ಯಾದ್ವೇಳಾ.

೬೫೯ — ಶಾಲ (1)ಶ್ಶಲಕಃ ಕುಳಿಶೋ ರಾಜೀವೋ ಲೋಹಿತಶ್ಚ ಪಲ್ಲ(ಪ)ವಿಕಃ ॥
ಶೃಂಗೀ (2)ಮದ್ಗುರವಾಗುರ್ನಂದ್ಯಾವರ್ತಾದಯೋ ಮಹಾಮತ್ಸ್ಯಾಃ ॥ ೩೭ ॥

೬೬೦ — ಮತ್ಸ್ಯವಿಶೇಷೋ ಮಕರಃ ಕರಿಮಕರೋ ಭವತಿ ತದ್ವಿಶೇಷಸ್ತು ॥
(3)ರೀರಲ್ಲ ತಿಮಿತಿಮಿಂಗಿಳ(ತಿಮಿಂಗಿಳ)ಗಿಳಾದಯೋ ಮಹಾಮತ್ಸ್ಯಾಃ ॥ ೩೮ ॥

೬೬೧ — ಕ್ಷುದ್ರಾಂಡೋ ಮತ್ಸ್ಯಸಂಘಾತಃ ಪೋತಾಧಾನಂ ಚ ಕಥ್ಯತೇ ॥
ಗಂಡೂಪದಃ ಕಿಂಚುಳಕೋ ಜಳೂಕಾಸ್ಸ್ಯುಃ ಜಳೌಕಸಃ ॥ ೩೯ ॥

೬೬೨ — ಮಂಡೂಕಃ ಪ್ಲವಗೋ ಭೇಕಃ ಶಾಲೂರೋ ದರ್ದುರೋ ಹರಿಃ ॥
ಪ್ಲವಂಗಮಃ ಪ್ಲವಂಗಸ್ಸ್ಯಾದ್ವರ್ಷಾಭೂಸ್ತದ್ವಧೂಃ ಸ್ಮೃತಾ ॥ ೪೦ ॥

೬೬೩ — ಯಾವಂತೋ ದೃಶ್ಯಂತೇ ನರಕರಿತುರಗಾದಯಸ್ಸ್ಥಳೇ ಜೀವಾಃ ॥
ತಾವಂತಸ್ಸಲಿಲೇಷ್ವಪಿ ಜಳಪೂರ್ವಾಸ್ತೇ ತು ವಿಜ್ಞೇಯಾಃ ॥ ೪೧ ॥

೬೬೪ — ಉಕ್ತಾ ಮುಕ್ತಾ ಮೌಕ್ತಿಕಂ ಶೌಕ್ತಿಕೇಯಂ ।
ಮುಕ್ತಾಸ್ಫೋಟಃ ಶುಕ್ತಿರಾಖ್ಯಾಯತೇಽಸೌ ॥
ಕಂಬುಃ ಶಂಖಃ ಕ್ಷುಲ್ಲಕಾಃ ಕ್ಷುದ್ರಶಂಖಾಃ ।
ಶಂಬೂಕಾಸ್ತೇಸ್ಯುಃ ಕಪರ್ದೋ ವರಾಟಃ ॥ ೪೨ ॥

ಟೀ ॥ ಶಾಲಃ, ಶಲಕಃ, ಕುಲಿಶಃ, ರಾಜೀವಃ, ಲೋಹಿತಃ, ಪಲ್ಲವಕಃ— ಈ ೬ **ಮತ್ಸ್ಯದ ಭೇದಂಗಳ್.**
ಶೃಂಗೀ, ಮದ್ಗುಃ, ಅವಾಗುಃ, ನಂದ್ಯಾವರ್ತಃ— ಈ ೪ ಮೊದಲಾಗುಳ್ಳುವು **ಪೆರ್ಮೀನ್.** ॥ ೩೭ ॥

ಟೀ ॥ **ಮತ್ಸ್ಯಭೇದಮುಂ** ಮಕರಮೆಂಬುದು. ಕರಿಮಕರಮೆಂಬುದು **ಮಕರಭೇದಂ.**
ರೀರಲ್ಲಃ, ತಿಮಿಃ, ತಿಮಿಂಗಿಳಃ (ತಿಮಿಂಗಿಳ ಗಿಳಃ) — ಈ ೪ **ಒಂದೊಂದಕ್ಕೆ ಹಿರಿಯುವಪ್ಪ ಮೀನ್** ॥ ೩೮ ॥

ಟೀ ॥ ಕ್ಷುದ್ರಾಂಡಃ, ಮತ್ಸ್ಯಸಂಘಾತಃ, ಪೋತಾಧಾನಂ - ಈ ೩ **ಕಿಱಿಯ ಮೀನ ಮೊತ್ತಂ.**
ಗಂಡೂಪದಃ, ಕಿಂಚುಳಕಃ— ಈ ೨ **ನಾಯೊಳಲೆ.**
ಜಳೂಕಾ, ಜಳೌಕಾಃ — ಈ ೨ **ಜಿಗುಳೆ** ॥ ೩೯ ॥

ಟೀ ॥ ಮಂಡೂಕಃ, ಪ್ಲವಗಃ, ಭೇಕಃ, ಶಾಲೂರಃ, ದರ್ದುರಃ, ಹರಿಃ, ಪ್ಲವಂಗಮಃ, ಪ್ಲವಂಗಃ— ಈ ೮ **ಕಪ್ಪೆ.** ವರ್ಷಾಭೂಯೆಂಬುದು **ಪೆಣ್ಗಪ್ಪೆ** ॥ ೪೦ ॥

ಟೀ ॥ ನೆಲದೊಳಗುಳ್ಳ ಪ್ರಾಣಿಗಳೆಲ್ಲಂ ನೀರೊಳಗೊಳವು, ಅವನು ಜಳಪೂರ್ವಕವಾಗಿ ನುಡಿಯುವುದು. **ನೀರ್ಮಾನಸಂ, ನೀರಾನೆ**ಯೆಂಬುದು ॥ ೪೧ ॥

ಟೀ ॥ ಮುಕ್ತಾ, ಮೌಕ್ತಿಕಂ, ಶೌಕ್ತಿಕೇಯಂ— ಈ ೩ **ಮುತ್ತು.**
ಮುಕ್ತಾಸ್ಫೋಟಃ, ಶುಕ್ತಿಃ— ಈ ೨ **ಮುತ್ತಿನ ಸಿಪ್ಪು.**
ಕಂಬುಃ, ಶಂಖಃ— ಈ ೨ **ಶಂಖಂ.**
ಕ್ಷುಲ್ಲಕಃ, ಕ್ಷುದ್ರಶಂಖಃ, ಶಂಬೂಕಃ — ಈ ೩ **ಕಿಱಿಯ ಶಂಖಂ.**
ಕಪರ್ದಃ, ವರಾಟಃ— ಈ ೨ **ಕವಡಿಕೆ** ॥ ೪೨ ॥

(1) ಶಕುಲಃ, (2) ಮುದ್ಗರ ವಾಗುಸನಂದ್ಯಾ (3) ಚೀರಿಲ್ಲಿ

೬೬೫—ಸಿಂಧುಃ ಪ್ರವಂತೀ ತಟಿನೀ ತರಂಗಿಣೀ ।
ನದೀ ಧುನೀ ನಿರ್ಝರಿಣೀ ಚ ನಿಮ್ನಗಾ ॥
ಕೂಲಂಕಷಾ ಶೈವಳಿನೀ ಸರಸ್ವತೀ ।
ಸಮುದ್ರಕಾಂತಾ ಹ್ರದಿನೀ ತಥಾಪಗಾ ॥ ೪೩ ॥

೬೬೬—ಸ್ರೋತಃ ಸ್ರೋತಸ್ವಿನೀ ಕರ್ಷೂಃ ಕುಲ್ಯಾ ದ್ವೀಪವತೀ ಸರಿತ್ ।
(1) ರೋಧೋವಕ್ರಾ ಚ ವಿಜ್ಞೇಯಾ ಭಿದ್ಯ ಉದ್ಯೋ ನದಸ್ಸ್ಮೃತಃ ॥ ೪೪ ॥

೬೬೭—ತೀರಂ ಕೂಲಂ ತಟಂ ಕಚ್ಛಃ (2) ಪ್ರಪಾತೋ ರೋಧ ಉಚ್ಯತೇ ॥
(3) ಅರ್ವಾಕ್ಕೂಲಮಪಾರಂ ಸ್ಯಾತ್ ಪರಂ ಪಾರಮಿತಿ ಸ್ಮೃತಂ ॥ ೪೫ ॥

೬೬೮—ಪಾತ್ರಂ ತು ಕೂಲಯೋರ್ಮಧ್ಯಮಾವರ್ತಃ ಪಯಸಾಂ ಭ್ರಮಃ ॥
ಪೂರಸ್ಸ್ಯಾದಂಭಸೋವೃದ್ಧಿಃ ಫೇನೋ ಡಿಂಡೀರ ಉಚ್ಯತೇ ॥ ೪೬ ॥

೬೬೯—ಓಘಃ ಪ್ರವಾಹೋ ವೇಣೀ ಚ ಧಾರಾ ಸ್ರೋತೋ ರಯ ಸ್ಸ್ಮೃತಃ ॥
ಸಂಭೇದಸ್ಸಂಗಮೋ ನದ್ಯೋ (4) ಸ್ಸಂಭೇದ್ಯಂ ಚ ನಿಗದ್ಯತೇ ॥ ೪೭ ॥

೬೭೦—ಸೈಕತಂ ಪುಳಿನ(ಂ) ದ್ವೀಪಂ ಸಿಕತಾ ವಾಳುಕಾ ಮತಾ ॥
ಮಧ್ಯೇದ್ವೀಪಮಂತರೀಪಂ ಹ್ರದಸ್ತೋಯಾಶಯೋ ಮತಃ ॥ ೪೮ ॥

ಟೀ ॥ ಸಿಂಧುಃ, ಪ್ರವಂತೀ, ತಟಿನೀ, ತರಂಗಿಣೀ, ನದೀ, ಧುನೀ, ನಿರ್ಝರಿಣೀ, ನಿಮ್ನಗಾ, ಕೂಲಂಕಷಾ, ಶೈವಳಿನೀ, ಸರಸ್ವತೀ, ಸಮುದ್ರಕಾಂತಾ, ಹ್ರದಿನೀ, ಆಪಗಾ, ಸ್ರೋತಃ, ಸ್ರೋತಸ್ವಿನೀ, ಕರ್ಷೂಃ, ಕುಲ್ಯಾ, ದ್ವೀಪವತೀ, ಸರಿತ್, ರೋಧೋವಕ್ರಾ—ಈ ೨೧ **ತೊಱೆ.**
ಭಿದ್ಯಃ, ಉದ್ಯಃ, ನದಃ—ಈ ೩ **ಗಂಡುದೊಱೆ** ॥ ೪೩—೪೪ ॥

ಟೀ ॥ ತೀರಂ, ಕೂಲಂ, ತಟಂ, ಕಚ್ಛಃ, ಪ್ರಪಾತಃ, ರೋಧಃ—ಈ ೬ **ತೊಱೆಯ ತಡಿ.**
[ಅಪಾರವೆಂಬುದು **ಅರ್ವಾಕ್ಕೂಲಂ**] ಪಾರವೆಂಬುದು **ತಡಿ** ॥ ೪೫ ॥

ಟೀ ॥ **ಎರಡು ತಡಿಯ ನಡು** ಪಾತ್ರವೆಂಬುದು. ಆವರ್ತವೆಂಬುದು **ಸುೞಿ.**
ಪೂರಯೆಂಬುದು **ತೊಱೆಯ ಭೂ(ಬೂ)ರಂ.** ಫೇನಃ, ಡಿಂಡೀರಃ—ಈ ೨ **ನೊರೆ** ॥ ೪೬ ॥

ಟೀ ॥ ಓಘಃ, ಪ್ರವಾಹಃ, ವೇಣೀ, ಧಾರಾ, ಸ್ರೋತಃ, ರಯಃ—ಈ ೬ **ತೊಱೆಯ ಹರಿಹಂ.** ಸಂಭೇದಃ, ಸಂಗಮಃ, ಸಂಭೇದ್ಯಂ—ಈ ೩ **ಕೂಡಲ್** ॥ ೪೭ ॥

ಟೀ ॥ ಸೈಕತಃ, ಪುಳಿನಂ, ದ್ವೀಪಂ, (ಸಿಕತಾ)—ಈ ೩ **ಮಳಲದೀಣೆ (ದಿಣ್ಣೆ).**
ಸಿಕತಾ, ವಾಳುಕಾ—ಈ ೨ **ಮಣಲ್.**
ಅಂತರೀಪವೆಂಬುದು **ಸುತ್ತುಂಗಡಲ ಹರಿದ ಕುಱುವಂ.**
ಹ್ರದಃ, ತೋಯಾಶಯಃ—ಈ ೨ **ಮಡು** ॥ ೪೮ ॥

---

(1) ರೋಧೋವಪ್ರಸ್ತು (2) ಪ್ರಯಾತೋ (3) ಉರ್ವಾಕ್ಕೂ (4) ಸಂವೇದ್ಯಶ್ಚ

೬೭೧—ಚಕ್ರಾಣಿ ಪುಟಭೇದಾಸ್ಸ್ಯುಃ ಸೇತುರ್ವಾರಣ ಉಚ್ಯತೇ ॥
(1) ಆಧಾರಸ್ತು ರಯಃಪ್ರೋಕ್ತಃ ತಳ್ಪಂ ಸ್ಯಾದುಡುಪಃ ಪ್ಲವಃ ॥ ೪೯ ॥

೬೭೨—(2) ಅರಿತ್ರಂ ಕೋಟಿಪ(ಪಾ)ತ್ರಂ ಸ್ಯಾತ್ಪುಳಿಂದೋ ಮಂಗ ಉಚ್ಯತೇ ॥ ೫೦ ॥

೬೭೩—ಭಾಗೀರಥೀ ಸುರಸರಿದ್ವಿಷ್ಣುಪದೀ ಜಾಹ್ನವೀ ತಥಾ ಗಂಗಾ ।
(3) ಮಂದಾಕಿನೀ ತ್ರಿಪಥಗಾ ಸರಿದ್ವರಾ ತ್ರಿದಶದೀರ್ಘಿಕಾ ಪ್ರೋಕ್ತಾ ॥ ೫೧ ॥

೬೭೪—ಗೋದಾವರೀ ಚ ಗೋದಾ ಕಾಳಿಂದೀ ದಿನಕರಾತ್ಮಜಾ ಯಮುನಾ ॥
ಶೋಣೋ ಹಿರಣ್ಯಬಾಹುರ್ಮೇಖಳಕನ್ಯಾ ಚ ನರ್ಮದಾ ರೇವಾ ॥ ೫೨ ॥

೬೭೫—ವೇಶಂತಃ ಪಲ್ವಲಂ ತಳ್ಪಂ ಕಾಸಾರಸ್ಸರಸೀ ಸರಃ ॥
ಅಖಾತೋ ದೇವಖಾತಃ ಸ್ಯಾತ್ಖಾತಾ ಪುಷ್ಕರಿಣೀ ಭವೇತ್ ॥ ೫೩ ॥

೬೭೬—ಆಧಾರಶ್ಚ ತಡಾಗಸ್ಸ್ಯಾದಾಳೀ ಪಾಳೀ ಚ ಕಥ್ಯತೇ ॥
ಪರಿಖಾ ದೀರ್ಘಿಕಾ ಪ್ರೋಕ್ತಾ ಖಾತಾಯಾ ಪರಿತಃ ಪುರಂ ॥ ೫೪ ॥

ಟೀ ॥ ಚಕ್ರಾದಿ, ಪುಟಭೇದಃ ಈ ೨ **ತೋಯೆಯ ಮುರಿವು.**
ಸೇತುಃ, ವಾರಣಃ—ಈ ೨ **ಕಟ್ಟೆ.** ಆಧಾರವೆಂಬುದು **ಹರಿಯುವುದು.**
ತಳ್ಪಂ, ಉಡುಪಃ, ಪ್ಲವಃ—ಈ ೩ **ತೆಪ್ಪಂ** ॥ ೪೯ ॥

ಟೀ ॥ ಅರಿತ್ರಂ, ಕೋಟಿಪತ್ರಂ—ಈ ೨ **ನಾವೆಯ ಸೋಗೆ.** K. 392
ಪುಳಿಂದಃ, ಮಂಗಃ—ಈ ೨ **ನಾವೆಯ ಬಿಸುೞು** ॥ ೫೦ ॥

ಟೀ ॥ ಭಾಗೀರಥೀ, ಸುರಸರಿತ್, ವಿಷ್ಣುಪದೀ, ಜಾಹ್ನವೀ, ಗಂಗಾ—ಈ ೫ **ಗಂಗೆ.** ॥ ೫೧ ॥

ಟೀ ॥ ಗೋದಾವರೀ, ಗೋದಾ—ಈ ೨ **ಗೋದಾವರಿ.**
ಕಾಳಿಂದೀ, ದಿನಕರಾತ್ಮಜಾ, ಯಮುನಾ—ಈ ೩ **ಯಮುನೆ**
ಶೋಣಃ, ಹಿರಣ್ಯಬಾಹುಃ—ಈ ೨ **ಶೋಣನದಿ.**
ಮೇಖಳಕನ್ಯಾ, ನರ್ಮದಾ, ರೇವಾ—ಈ ೩ **ನರ್ಮದೆ.** ॥ ೫೨ ॥

ಟೀ ॥ ವೇಶಂತಃ, ಪಲ್ವಲಂ, ತಳ್ಪಂ—ಈ ೩ **ಕೊಳಹೆ.**
ಕಾಸಾರಃ, ಸರಸೀ, ಸರಃ—ಈ ೩ **ಕೊಳನು**
ಅಖಾತಃ, ದೇವಖಾತಃ—ಈ ೨ **ಅಗೞದುದು.**
ಖಾತಾ, ಪುಷ್ಕರಣೀ—ಈ ೨ **ಹೊಕ್ಕರಣೆ.** ॥ ೫೩ ॥

ಟೀ ॥ ಆಧಾರಃ, ತಟಾಕಃ—ಈ ೨ **ಕೆಱೆ.** ಆಳೀ, ಪಾಳೀ—ಈ ೨ **ಏಱಿ.**
ಪರಿಖಾ, ದೀರ್ಘಿಕಾ—ಈ ೨ **ದೀರ್ಘಿಕೆ.** ಖಾತಾಯೆಂಬುದು **ಅಗೞ್** ॥ ೫೪ ॥

---

(1) ಆತ?(ಧಾ)ರಸ್ತ್ವರಪಣ್ಯಂ ಚ (2) ತರೀರ್ನೌರ್ಮಂಗಿನೀ ಬೇಡಾ ನೌದಂಡಃ ಕ್ಷೇಪಣೀಮತಾ ॥ (ಅಧಿಕ)
(3) ಮಂದಾಕಿನೀ ತ್ರಿಪಥಗಾ ಸರಿದ್ವರಾ ತ್ರಿದಶದೀರ್ಘಿಕಾ ಪ್ರೋಕ್ತಾ (ಅಧಿಕ).

೬೭೭—ಪರೀವಾಹೋ ಜಳೋಚ್ಛ್ವಾಸಾಃ ಉತ್ಸಃ ಪ್ರಸ್ರವಣಂ ಸ್ಮೃತಂ ॥
ವಿಪ್ರುಷೋ ಬಿಂದವಃ ಪ್ರೋಕ್ತಾಃ ಪೃಷತಃ ಪೃಷತಾಸ್ತಥಾ ॥ ೫೫ ॥

೬೭೮—[1] ಪಿಚ್ಛಿಲಂ ಸ್ಯಾದ್ವಿಜಲಕಂ ಪಂಕಃ ಸಾದೋ ನಿಷದ್ವರಃ ॥
ಜಂಬಾಳಃ ಕರ್ದಮಃ ಪ್ರೋಕ್ತಃ ಬುಧೈ[2] ರವಕಿಲಸ್ತಥಾ ॥ ೫೬ ॥

೬೭೯—ಸಹಸ್ರಪತ್ರಂ ಶತಪತ್ರಮಂಬುಜಂ ।
ಕುಶೇಶಯಂ ತಾಮರಸಂ ಸರೋರುಹಂ ॥
ಬಿಸಪ್ರಸೂನಂ ಕಮಳಂ ಮಹೋತ್ಪಳಂ ।
ಸರೋಜಮಬ್ಜಂ ನಳಿನಂ[3] ಚ ಪುಷ್ಕರಂ ॥ ೫೭ ॥

೬೮೦—ರಾಜೀವಮರವಿಂದಂ ಚ ಪದ್ಮಂ ಪಂಕಜಮಿಷ್ಯತೇ ।
ರಕ್ತಂ ಕೋಕನದಂ ಪ್ರೋಕ್ತಂ ಪುಂಡರೀಕಂ ಸಿತಾಂಬುಜಂ ॥ ೫೮ ॥

೬೮೧—ಸೌಗಂಧಿಕಂ ತು ಕಲ್ಹಾರಂ ಸ್ಯಾದಿಂದೀವರಮುತ್ಪಳಂ ॥
ನೀಳೋತ್ಪಳಂ ಕುವಳಯಂ ಕೈರವಂ ಕುಮುದಂ ವಿದುಃ ॥ ೫೯ ॥

೬೮೨—ಕರ್ಣಿಕಾ ಬೀಜಕೋಶಃ ಸ್ಯಾತ್ಕಿಂಜಲ್ಕಂ ಕೇಸರಂ ಮತಂ ॥
ಮೃಣಾಳಂ ಸ್ಯಾದ್ಬಿಸಂ ಕಂದೋ ಬಿಸಿನೀ ನಳಿನೀ ಭವೇತ್ ॥ ೬೦ ॥

ಟೀ ॥ ಪರೀವಾಹಃ, ಜಳೋಚ್ಛ್ವಾಸಃ— ಈ ೨ **ಕಡೆಗೋಡಿ.**
ಉತ್ಸಃ, ಪ್ರಸ್ರವಣಂ— ಈ ೨ **ಉಪ್ಪರ್ಸರಂ.** ವಿಪ್ರುಷಃ, ಬಿಂದುಃ— ಈ ೨ **ಹನಿ.**
ಪೃಷತ್, ಪೃಷತಃ— ಈ ೨ **ತುಂತುರ್ವನಿ** ॥ ೫೫ ॥

ಟೀ ॥ ಪಿಚ್ಛಿಲಂ, ವಿಜಲಕಂ— ಈ ೨ **ಕೆಸಱುಳ್ಳೆಡೆ.**
ಪಂಕಃ, ಸಾದಃ, ನಿಷದ್ವರಃ, ಜಂಬಾಳಃ, ಕರ್ದಮಃ, ಅವಕಿಲಃ– ಈ ೬ **ಕೆಸಱು** ॥ ೫೬ ॥

ಟೀ ॥ ಸಹಸ್ರಪತ್ರಂ, ಶತಪತ್ರಂ, ಅಂಬುಜಂ, ಕುಶೇಶಯಂ, ತಾಮರಸಂ, ಸರೋರುಹಂ, ಬಿಸಪ್ರಸೂನಂ, ಕಮಳಂ, ಮಹೋತ್ಪಳಂ, ಸರೋಜಂ, ಅಬ್ಜಂ, ನಳಿನಂ, ಪುಷ್ಕರಂ, ರಾಜೀವಂ, ಅರವಿಂದಂ, ಪದ್ಮಂ, ಪಂಕಜಂ — ಈ ೧೭ **ತಾವರೆ.**
ಕೋಕನದ ಎಂಬುದು **ಕೆಂದಾವರೆ.** ಪುಂಡರೀಕಮೆಂಬುದು **ಬಿಳಿಯ ತಾವರೆ** ॥೫೭-೫೮॥

ಟೀ ॥ ಸೌಗಂಧಿಕಂ, ಕಲ್ಹಾರಂ— ಈ ೨ **ಚೆನ್ನೆಯ್ದಿಲ್.**
ಇಂದೀವರಂ, ಉತ್ಪಳಂ– ಈ ೨ **ನೆಯ್ದಿಲ್.**
ನೀಳೋತ್ಪಳಂ, ಕುವಳಯಂ – ಈ ೨ **ಕರ್ನೆಯ್ದಿಲ್.**
ಕೈರವಂ, ಕುಮುದಂ— ಈ ೨ **ಬಿಳಿಯ ನೆಯ್ದಿಲ್** ॥ ೫೯ ॥

ಟೀ ॥ ಕರ್ಣಿಕಾ, ಬೀಜಕೋಶೀ— ಈ ೨ **ಕರ್ಣಿಕೆ.**
ಕಿಂಜಲ್ಕಂ, ಕೇಸರಂ— ಈ ೨ **ಕೇಸರಂ.** ಮೃಣಾಳಃ, ಬಿಸಂ– ಈ ೨ **ನಾಳಂ.**
ಕಂದಃ, ಬಿಸಿನೀ, ನಳಿನೀ– ಈ ೩ **ಅವಱ ಗೆಡ್ಡೆ** ॥ ೬೦ ॥

---

(1) ವಿಚ್ಛಿಲಂ ಸ್ಯಾದ್ವಿಜಪಿಲಂ (2) ರಿಚಕಿಲಸ್ತಥಾ (3) ಮಲಿನಂ

೬೮೩—ಕುಮುದ್ವತೀ ಕುಮುದಿನೀ ಬುಧೈಃ ಕೈರವಣೀ ಮತಾ ॥
ಶೈವಾಳಂ ಶೈವಳಂ ಪ್ರೋಕ್ತಂ ಜಳಶೂಕಂ ಚ ನೀಳಿಕಾ ॥ ೬೧ ॥

೬೮೪—ಅಂಧುಃ ಕೂಪಃ ಪ್ರಧೀರ್ನೇಮಿಃ ಚುರೀ ಚುಂಡೀ ಚ [1] ಚೂಚುಕಃ ॥
ನಿಪಾನಮುದಪಾನಂ ಸ್ಯಾ [2] ದ್ವಾಪ್ಯಾಹಾವಶ್ಚ ಕಥ್ಯತೇ ॥ ೬೨ ॥

೬೮೫—ಉದ್ಘಾಟಕಂ ಘಟೀಯಂತ್ರಂ ಪಾದಾವರ್ತೋಽರಘಟ್ಟಕಃ ॥
[3] ಯಾನಂ ತು ಸಾರಿಣೀ ಪ್ರೋಕ್ತಾ ಪ್ರಣಾಳೀ ಜಳಪದ್ಧತಿಃ ॥ ೬೩ ॥

ಇತಿ

ಭಟ್ಟಹಲಾಯುಧ ವಿರಚಿತಾಯಾಂ

ಅಭಿಧಾನರತ್ನಮಾಲಾಯಾಂ

ಪಾತಾಳಕಾಂಡಂ ತೃತೀಯಂ

ಸಮಾಪ್ತಂ

ಟೀ ॥ ಕುಮುದ್ವತೀ, ಕುಮುದಿನೀ, ಕೈರವಣೀ – ಈ ೩ **ನೆಯ್ದಿಲ್ಗೊಳಂ.**
ಶೈವಾಳಂ, ಶೈವಳಂ, ಜಳಶೂಕಂ, ನೀಳಿಕಾ— ಈ ೪ **ಪಾವಸೆ** ॥ ೬೧ ॥

ಟೀ ॥ ಅಂಧುಃ, ಕೂಪಃ— ಈ ೨ **ಬಾವಿ.** ಪ್ರಧೀಃ, ನೇಮಿಃ, (ಅದಱ ಜ್ಯಾಟ)
ಚುರೀ, ಚುಂಡೀ, ಚೂಚುಕಃ— ಈ ೩ **ಬಗರಗೆ.**
ನಿಪಾನಂ, ಉದಪಾನಂ, ವಾಪೀ, ಆಹಾವಃ – ಈ ೪ **ಬೆಂಚೆ** ॥ ೬೨ ॥

ಟೀ ॥ ಉದ್ಘಾಟಕಂ, ಘಟೀಯಂತ್ರಂ, ಪಾದಾವರ್ತಃ, ಅರಘಟ್ಟಕಃ– ಈ ೪ **ರಾಟಣಂ.**
ಯಾನಂ, ಸಾರಿಣೀ— ಈ ೨ **ಹರಿಕೇಣಿ.** ಪ್ರಣಾಳೀ, ಜಳಪದ್ಧತಿಃ– ಈ ೨ **ಹರಿನಾಳಿ** ॥ ೬೩ ॥

ಇದು

ನಾಗವರ್ಮವಿರಚಿತಮಪ್ಪ ಹಲಾಯುಧ ಟೀಕೆಯೊಳ್

ಪಾತಾಳಕಾಂಡಂ ತೃತೀಯಂ

ಸಮಾಪ್ತಂ.

ಓಂ ಗುರುಭ್ಯೋನಮಃ

---

(1) ಚೂತಕಃ (2) ಚ ಬಾಹ್ಯಾಹಾವಶ್ಚ (3) ಪಾನಂ ತು ಸಾರಣಿಃ

॥ ಶ್ರೀ ॥

೪. ಸಾಮಾನ್ಯಕಾಂಡಂ

೬೮೬—ನಿಕರನಿಕಾಯನಿವಹವಿಸರವ್ರಜ ಪುಂಜ ಸಮೂಹಸಂಚಯಾಃ ॥
ಸಮುದಯಸಾರ್ಥ(ಕ) ಯೂಥನಿಕುರುಂಬ ಕದಂಬಕ ಪೂಗರಾಶಯಃ ॥
ಚಯಸಮವಾಯಬೃಂದ ಸಂದೋಹ ಸಮಾಜವಿತಾನ ಸಂಹತಿಃ ।
